॥ ಪ್ರಸೀದತು ಶ್ರೀ ವೀರಾಂಜನೇಯಃ ॥

# ಹೇಮಪುರ

ಶ್ರೀಕ್ಷೇತ್ರ ಬಂಗಾರಮಕ್ಕಿಯಿಂದ ಹೊರಬರುವ ಧಾರ್ಮಿಕ, ಪಾರಮಾರ್ಥಿಕ, ನೈತಿಕ ಹಾಗೂ ಲೋಕ ಹಿತಚಿಂತನೆಗಳ ಮಾಸಪತ್ರಿಕೆ

# HEMAPURA

**Shri Kshethra Bangaramakki**
**Post Gerasoppa - 581 384**
**Honnavara Taluk, Uttara Kannada Dist.**

ಗೌರವ ಸಂಪಾದಕರು:
**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
ಧರ್ಮಾಧಿಕಾರಿಗಳು
ಶ್ರೀಕ್ಷೇತ್ರ ಬಂಗಾರಮಕ್ಕಿ

ಸಂಪಾದಕರು:
**ತೇಜಸ್ವಿ**

ಸಲಹೆಗಾರರು:
**ಶ್ರೀ ರಾಮಚಂದ್ರ ಭಟ್ಟರು, ಶ್ರೀಕ್ಷೇತ್ರ ಬಂಗಾರಮಕ್ಕಿ**
**ಶ್ರೀ ರವೀಶ, ವಕೀಲರು, ಸಾಗರ**
**ಶ್ರೀ ನಾಗರಾಜ್ ನಾಯಕ್, ವಕೀಲರು, ಕಾರವಾರ**
**ಶ್ರೀ ನಾಗರಾಜ್ ಶೇಟ್, ಶಿರಸಿ**
**ಶ್ರೀ ಭೋಗಾನಂದ, ಶಿವಮೊಗ್ಗ**
**ಶ್ರೀ ಪ್ರವೀಣ್, ಬೆಂಗಳೂರು**
**ಶ್ರೀ ಜಿ.ಎಚ್. ನಾಯ್ಕ್, ಹೊನ್ನಾವರ**
**ಶ್ರೀ ಕೆ. ಮನೋಹರ್, ಬೆಂಗಳೂರು**
**ಶ್ರೀ ಡಿ.ಎಂ. ಸತೀಶ್, ತುಮಕೂರು**

ವಿನ್ಯಾಸ, ಅಕ್ಷರ ಜೋಡಣೆ ಮತ್ತು ಸಲಹೆಗಾರರು:
**ಶ್ರೀ ವೀರಾಂಜನೇಯ ಪ್ರಕಾಶನ**
ಶ್ರೀಕ್ಷೇತ್ರ ಬಂಗಾರಮಕ್ಕಿ, ಪೋ: ಗೇರಸೊಪ್ಪಾ-581 384.
ತಾ: ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ.
ದೂ: 08387-268544, 268333, 268545

ಮುದ್ರಕರು:
**ಸಾಯಿನಾಥ ಗ್ರಾಫಿಕ್ಸ್, ಬೆಂಗಳೂರು**

## ಒಳಪುಟಗಳಲ್ಲಿ

ಸಚ್ಚಿಂತನ.......... 2
ಸಂಪಾದಕೀಯ.......... 3
ವಕಾಲತ್.......... 4
ಮಧುರ ಪ್ರಕಾಶನದ ಸೌಜನ್ಯದೊಂದಿಗೆ .......... 5
ಶ್ರೀಧರ ಸ್ಮರಣೆ .......... 8
ಶ್ರೀರಾಮ ಕಥಾಸಾರ .......... 8
ಸಂಪ್ರದಾಯ .......... 10
ಕವನ - ಬದುಕು ದರ್ಪಣ .......... 10
ಪರಮೇಶ್ವರನ ಇಪ್ಪತ್ತೈದು ಲೀಲೆಗಳು .......... 11
ಮಹಾಕ್ಷತ್ರಿಯ .......... 11
ಬದುಕಲೊಂದಿಷ್ಟು ಆಪ್ತಮಾತುಗಳು .......... 13
ಧರೆಗಿಳಿದ ದಿವ್ಯತೇಜ .......... 13
ಕಗ್ಗದ ಬೆಳಕಿನಲ್ಲಿ .......... 15
ವಚನಭಾಗವತ .......... 18
ಮಕ್ಕಳ ದಿನಾಚರಣೆ ವರದಿ .......... 19
ಆನೋ ಭದ್ರಾಃ ಕ್ರತವೋಯಂತು ವಿಶ್ವತಃ .......... 20
ಔಷಧೀಯ ಸಸ್ಯ ಸಂಪತ್ತು .......... 21
ಸುಂದರಕಾಂಡದ ಸೌಂದರ್ಯ .......... 22
ಕವನ - ಓ ಗುಲಾಬಿ .......... 24
ಪದಬಂಧ-39 .......... 24

**ಹೇಮಪುರ ಘನ ಗಂಭೀರ**

ಘನವಂತ ಬಲವಂತ ಇಷ್ಟಾರ್ಥ ದಾತ
ಭಕ್ತವತ್ಸಲನೆಂಬ ಬಿರುದು ಹೊತ್ತಾತ
ವೀರಾಂಜನೇಯನಿವ ತನ್ನ ಸೇವಿಸುವ
ಭಕ್ತರನು ಉದ್ಧರಿಸಿ ಗುರಿಯ ಮುಟ್ಟಿಸುವ.

卐

ದರ್ಶನದ ಲಾಭವಿದೆ ತಾಪಕಿದೆ ಪರಿಹಾರ
ಹರ್ಷವೇ ಮೈವೆತ್ತಿ ನರ್ತಿಸುವುದಿಲ್ಲಿ
ಆಕರ್ಷಣೀಯವಹ ಲೋಕಹಿತ ಕಾರ್ಯಗಳ
ವರ್ಷದುದ್ದಕು ನಡೆಸುತಿಹನು ಮಾರುತಿಯು

**ಪ್ರಕಟಣೆ: ಪತ್ರಿಕೆಯು ಪ್ರಕಟವಾದ ಒಂದು ವಾರದಲ್ಲಿ ನಮ್ಮ ಅಂತರ್ಜಾಲದಲ್ಲೂ ಲಭ್ಯ www.bangaramakki.org**



ಕರ್ನಾಟಕ ಶಾಸನಗಳ ಪಿತಾಮಹ - ಬಿ. ಎಲ್. ರೈಸ್

# ಆಧ್ಯಾತ್ಮಿಕತೆಯ ತರಬೇತಿ ಕೇಂದ್ರ



ಈ ಪ್ರಪಂಚದಲ್ಲಿ ಆಧ್ಯಾತ್ಮಿಕ ಜೀವನದ ಏಳುಬೀಳುಗಳನ್ನು ಎಲ್ಲರೂ ಅನುಭವಿಸಲೇಬೇಕು. ಎಂತಹ ಏಳುಬೀಳುಗಳ ನಡುವೆಯೂ ನಮ್ಮ ಆಧ್ಯಾತ್ಮಿಕ ಸಾಧನೆಯನ್ನು ಸ್ಥಿರ ಹಾಗೂ ನಿಷ್ಠೆಯಿಂದ ಮಾಡಬೇಕು. ನಮಗೆ ಉತ್ಸಾಹ ಇಲ್ಲದಾಗಿಯೂ ಕೂಡ ಮಾಡಬೇಕು. ಮಧ್ಯದಲ್ಲಿ ಸಾಧನೆಯನ್ನು ನಿಲ್ಲಿಸುವುದರಿಂದ ನಮಗೆ ನಮ್ಮ ಗುರಿಯಾಗಿರುವ ಆಧ್ಯಾತ್ಮಿಕತೆಯನ್ನು ಸಾಧಿಸಲಾಗುವುದಿಲ್ಲ. ನಿಲ್ಲಿಸಿದರೆ ಪ್ರಗತಿ ಕುಂಠಿತವಾಗುವುದು. ಹಾಗಾಗಿ ನಮ್ಮ ಮನಸ್ಸು ಒಳ್ಳೆಯ ಸ್ಥಿತಿಯಲ್ಲಿ ಇರಲಿ ಬಿಡಲಿ, ಬೆಳಿಗ್ಗೆ ಮತ್ತು ಸಾಯಂಕಾಲ ಕನಿಷ್ಠ ಒಂದು ಘಂಟೆ ಸಾಧನೆ ಮಾಡಲೇ ಬೇಕು. ಹೀಗೆ ಮಾಡುತ್ತಲಿರುವುದರಿಂದ ನಮ್ಮ ಆಧ್ಯಾತ್ಮಿಕಧಾರೆಯ ನಿರಂತರತೆಯನ್ನು ಉಳಿಸಿಕೊಳ್ಳಬಹುದು. ಇದರಿಂದ ನಮ್ಮ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ ವರ್ಧಿಸುವುದು. ಇದರ ಮಧ್ಯೆ ಬರುವ ಅಡಚಣೆಗಳು ಮತ್ತು ಪ್ರತಿಕ್ರಿಯೆಗಳು ನಮ್ಮ ಶಕ್ತಿಯನ್ನು ಪರೀಕ್ಷಿಸಲು ಬರುತ್ತವೆ. ಅದನ್ನು ಗೆಲ್ಲುವ ಮುಖಾಂತರ ನಾವು ಹೆಚ್ಚು ಹೆಚ್ಚು ಮಾನಸಿಕ ಶಕ್ತಿಯನ್ನು ಪಡೆಯುತ್ತೇವೆ. ಇಂತಹ ಸಂದರ್ಭದಲ್ಲಿ ನಮ್ಮನ್ನು ಎಲ್ಲ ಕಷ್ಟಗಳಿಂದ ರಕ್ಷಿಸಬೇಕೆಂದು ಭಗವಂತನಲ್ಲಿ ಪ್ರಾರ್ಥಿಸಬೇಕು. ಆಧ್ಯಾತ್ಮಿಕತೆಗೆ ಪ್ರಾರ್ಥನೆ ಒಂದು ಅತಿಮುಖ್ಯ ಆಸರೆ. ಸರಿಯಾದ ರೀತಿ ನಮಗೆ ಧ್ಯಾನ ಮಾಡಲು ಅಸಾಧ್ಯವಾದಾಗ ನಾವು ಪ್ರಾರ್ಥನೆ ಮಾಡಬಹುದು. ಇದು ಅಂತರಿಕ ಸಮಾಧಾನವನ್ನೀಯುತ್ತದೆ ಮತ್ತು ಕ್ರಮೇಣ ನಮ್ಮ ಸಂಕಷ್ಟಗಳು ದೂರವಾಗುತ್ತದೆ. ಎಲ್ಲೋ ಸ್ವಲ್ಪ ಜಾರಿದ್ದಕ್ಕೆ, ಎಡವಿದ್ದಕ್ಕೆ ಅತಿಯಾಗಿ ಚಿಂತೆಗೀಡಾಗದೆ ಸಾಧಕನು ಮುಂದೆ ಸಾಗಬೇಕು. ಅಂಥ ಸಾಧಕನಿಗೆ ಸೋಲು ಯಶಸ್ಸಿನ ಮೆಟ್ಟಿಲು.

ಕೆಲವೊಮ್ಮೆ ಮನಸ್ಸು ತುಂಬ ಕುಗ್ಗುತ್ತದೆ. ಅದು ಅನಿವಾರ್ಯವಿರಬಹುದು ಆದರೆ ಅಂತಹ ಸಂದರ್ಭದಲ್ಲಿ ಭಗವಂತನೊಡನೆ ಅಂತರಿಕ ಸಂಪರ್ಕವನ್ನು ಪಡೆಯಲು ಪ್ರಯತ್ನಿಸಬೇಕು. ಆಗ ಕುಂದಿದ ಮನಸ್ಸಿಗೆ ಹೊಸ ಉಲ್ಲಾಸ ಬರುತ್ತದೆ. ನಮ್ಮ ಭಾವದಲ್ಲಿ ಏರಿಳಿತವಿರಬಹುದು, ಭಗವಂತನೊಡನೆ ಆಂತರಿಕ ಸಂಬಂಧವನ್ನು ಯಾವಾಗಲೂ ಉಳಿಸಿಕೊಳ್ಳಬೇಕು. ಹಾಗೆ ಭಗವತ್ ಸಂಪರ್ಕದಿಂದ ಇರಲು ಪ್ರಯತ್ನಿಸಿದರೆ ಸ್ವಲ್ಪ ಮಟ್ಟಿಗಾದರೂ ಉನ್ನತಭಾವ ನಮ್ಮೊಂದಿಗೆ ಉಳಿಯುವುದು. ಕೆಲವೊಮ್ಮೆ ಹಳೆಯ ಸಂಸ್ಕಾರಗಳು ಮೇಲೇಳುವುದರಿಂದ ಮಾನಸಿಕ ಮತ್ತು ಭೌತಿಕ ಗೊಂದಲ ಉಂಟಾಗಬಹುದು. ಆಗ ನಾವು ನಮ್ಮ ಸಮತೋಲನ ಕಳೆದುಕೊಳ್ಳದೇ ಧ್ಯಾನಸ್ಥರಾಗಬೇಕು. ಹಾಗೇ ವಾಸ್ತವ ದೃಷ್ಠಿಯಿಂದ ಎಲ್ಲವನ್ನು ನೋಡುತ್ತ ಸಾಕ್ಷೀಭಾವವನ್ನು ತಾಳಬೇಕು. ಭೌತಿಕತೆಯಲ್ಲಿಯೂ ಭಗವಂತನನ್ನು ನೋಡಲು ಪ್ರಯತ್ನಿಸಬೇಕು. ಭಗವಂತನ ಒಂದೇ ಮಾಧ್ಯಮದ ಮೂಲಕ ಎಲ್ಲ ಸಂವೇದನೆಗಳು, ಎಲ್ಲ ಸ್ಪಂದನಗಳು ಮತ್ತು ಎಲ್ಲ ಭಾವನೆಗಳು ಉಂಟಾಗುವವು ಎಂದು ಭಾವಿಸಿ ಭಗವಂತನಲ್ಲಿ ಧ್ಯಾನಸ್ಥರಾಗಬೇಕು. ಆಗ ಭಗವತ್ ಸತ್ಯ ಹೆಚ್ಚು ಸತ್ಯವಾಗಿ ರೂಪಗಳು ನೆರಳಿನಂತಾಗಿ ತಮ್ಮ ಆಕರ್ಷಣೆಯನ್ನು ಕಳೆದುಕೊಳ್ಳುತ್ತವೆ. ಹೀಗೆ ಅನುಸಂಧಾನ ಮಾಡುತ್ತಿರುವುದರಿಂದ ಮಾನಸಿಕ ಮತ್ತು ದೈಹಿಕ ಸಮತೋಲನ ಪುನಃ ಸ್ಥಾಪಿತವಾಗುವುದು.

ಎಲ್ಲ ಸಂದರ್ಭಗಳಲ್ಲಿಯೂ ಭಗವಂತನನ್ನು ಆಶ್ರಯಿಸಲು ನಾವು ಪ್ರಯತ್ನಿಸಬೇಕು. ಮನಸ್ಸು ಕುಗ್ಗಿದಾಗ ಜಪ ತುಂಬ ಸಹಾಯಕವಾಗುವುದು. ತನಗೆ ಕೇಳುವಷ್ಟು ಗಟ್ಟಿಯಾಗಿ ಮಂತ್ರ ಜಪಮಾಡಿದ್ದಾಗ ಮನಸ್ಸಿಗೆ ಹೆಚ್ಚು ಸಮಾಧಾನವಾಗುವುದು. ಸಾಕ್ಷಾತ್ಕಾರದ ಆನಂದ ನಮಗೆ ಸಿಗದಿದ್ದರೂ ಭಗವಂತನ ಚಿಂತನೆಯ ಆನಂದದಿಂದಲಾದರೂ ತೃಪ್ತಿಸಿಗುವುದು. ಹೀಗೆ ನಾವು ಜಾಗ್ರತರಾಗಿದ್ದು, ನಮ್ಮ ಮನಸ್ಸಿನಲ್ಲಿ ಏಳುವ ಎಲ್ಲ ಯೋಚನೆಯನ್ನು ನಿಗ್ರಹಿಸಿ ಜೀವನದಲ್ಲಿ ಮುನ್ನಡೆಯಬೇಕು. ಜೀವನದ ಕಷ್ಟಗಳಿಗೆ ಹೆದರಿ ಓಡುವವರು ತಮ್ಮನ್ನು ತಾವು ದುರ್ಬಲಗೊಳಿಸಿಕೊಳ್ಳುತ್ತ ಆಧ್ಯಾತ್ಮಿಕ ಸಾಧನೆಗೆ ಅನರ್ಹರಾಗುತ್ತಾರೆ. ಭಗವಂತನನ್ನು ನಂಬಿ ತಮ್ಮ ಕಷ್ಟಗಳನ್ನು ಎದುರಿಸುವವರಿಗೆ ತುಂಬ ಅಂತಃಶಕ್ತಿ ಬರುವುದು. ಹೀಗೆ ದಿವ್ಯ ಪ್ರವಾಹದ ನೇರ ಸಂಪರ್ಕ ನಮಗುಂಟಾದರೆ, ದೈವಾನುಗ್ರಹದ ತಂಗಾಳಿಗೆ ನಮ್ಮನ್ನು ನಾವು ಒಡ್ಡಿಕೊಂಡಿದ್ದರೆ ಭಗವಂತನೇ ಎಲ್ಲ ಕಷ್ಟಗಳಿಂದ ಪಾರುಗಾಣಿಸುವನು. ಹಾಗಾಗಿ ನಾವು ತಿಳಿದಂತೆ ಇದು ಭೋಗ ಭೂಮಿಯಲ್ಲ, ಈ ಪ್ರಪಂಚ ಆಧ್ಯಾತ್ಮಿಕತೆಯ ಹಾಗೂ ಭಗವಂತನನ್ನು ಸಾಧಿಸಿಕೊಳ್ಳುವ ಒಂದು ತರಬೇತಿ ಕೇಂದ್ರ. ಇದನ್ನರಿತು ಈ ಪ್ರಪಂಚದಲ್ಲಿ ತರಬೇತಿಯನ್ನು ಪಡೆಯುತ್ತ ಭಗವಂತನೆಡೆಗೆ ಸಾಗೋಣ.

**ಶ್ರೀ ರಾಮಸ್ಮರಣಂ**

**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
**ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ.**

# ಸರ್ವ ಸಾಧ್ಯತೆಯ ಸಂಕಲ್ಪ

ಸತ್‌ಕಲ್ಪನೆಯ ಸಾಕಾರತೆ ಸಂಕಲ್ಪ
ನಿರಂತರ ಒಳಿತಿನ ಚಿಂತನೆ ಮಹಾಪ್ರಕಲ್ಪ

ಮಳೆ ಕಳೆದು ಇಳೆ ಫಸಲು ಭರಿತವಾಗಿ ತುಂಬಿತು, ಆಕಾಶದಲ್ಲಿಯ ಮಳೆ ಇಲ್ಲವಾಗಲು ಭೂಮಿಯಲ್ಲಿಯ ನೀರು ಸಾಧನಗಳಿಂದ ಮೇಲಕೆ ಬರುವದು ಅನಿವಾರ್ಯ, ಹಾಗೆ ಮೇಲಿನ ಮಳೆಯಿಲ್ಲ ಕೆಳಗಿನ ನೀರು ಬೆಳೆಗೆ ಸತ್ವವಾಗಿ ಅದೇ ಮುಂದಿನ ಬೆಳೆಗೆ ಭದ್ರ ಬುನಾದಿಯಾಗುತ್ತದೆ. ಹೀಗೆ ಭೂಮಿಯನ್ನು ತಂಪಾಗಿಸಬೇಕೆಂದು ರೈತ ಸಂಕಲ್ಪಿಸುತ್ತಾನೆ.

ಸಂಕಲ್ಪ ಎನ್ನುವುದು 'ಸಂ' ಎಂದರೆ ಚೆನ್ನಾಗಿ ಎಂದರ್ಥ, ಕಲ್ಪಿಸುವುದು ಅಂದರೆ ಯೋಚಿಸುವುದು ಎಂದರ್ಥ. ಅಂದರೆ ಸಾಧನೆಯತ್ತ ತನ್ನ ಎಲ್ಲ ಯೋಚನೆಗಳನ್ನು ಸುಸಂಸ್ಕೃತ ರೀತಿಯಲ್ಲಿ ಸರಿದೂಗಿಸುತ್ತ ಉತ್ತಮ ಕಾರ್ಯಪಥವನ್ನು ನಿರೂಪಿಸುವಿಕೆ ಎಂದಾಗುತ್ತದೆ. ಇಂತಹ ಸಂಕಲ್ಪದಿಂದ ಮಾತ್ರ ಎಲ್ಲವನ್ನು ಸಾಧಿಸಲು ಸಾದ್ಯವಾಗುತ್ತದೆ, ಅಂದರೆ ಜಗತ್ತಿನಲ್ಲಿ ಮಹಾಕಾರ್ಯಗಳು ಸಂಪನ್ನಗೊಂಡಿದ್ದು ಮಹಾಸಂಕಲ್ಪಗಳಿಂದ ಅದನ್ನು ಚಿಂತಿಸುತ್ತ ಕಾರ್ಯಗತ ಮಾಡುತ್ತ ಸಂಘಟಿಸುತ್ತಾ ಎಲ್ಲೆಡೆ ಸತ್‌ಸಂಕಲ್ಪ ಕಾರ್ಯ ಸಿದ್ಧಿಗೆ ಮೂಲ ಮಂತ್ರವಾಯಿತು.

ಗಾಂಧೀಜಿಯವರ ಮಹಾಸಂಕಲ್ಪ 'ಕ್ರಿಯೆಯ ಮೂಲಕ ಸಂಘಟಿಸಿ, ಕಾರ್ಯಗತ ಮಾಡುವದು' ಎಂದಿತ್ತು. ಹಾಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಾಸಂಕಲ್ಪದ ಮೂಲಕ 'ಮಹಾತ್ಮ ಗಾಂಧಿ' ಆದರು. ವಿವೇಕಾನಂದರು 'ಮಹಾಸಂಕಲ್ಪವೇ ಮನುಷ್ಯನ ಮಹಾಮಂತ್ರ ತನ್ಮೂಲಕ ಜೀವಿತಕ್ಕೆ ಬೇಕಾಗುವ ಎಲ್ಲ ಪರಿಯ ಸಾಮರ್ಥ್ಯ ಪಡೆದು ತನ್ಮೂಲಕ ಜೀವನ ಧರ್ಮದ ಸಾರ್ಥಕತೆಯೇ ನಿಜವಾದ ಬದುಕು' ಎಂದೂ ಸಾರಿದರು. ಹೀಗೆ ಟಾಟಾರಂತವರು ಅನೇಕರು ಮಹಾಸಂಕಲ್ಪಕ್ಕೆ ಅಣಿಯಾಗಿ ಅನೇಕರಿಗೆ ಅನ್ನ ನೀಡಿದರು.

'ಸಂಕಲ್ಪ ಕ್ರಿಯಾ ಶೂನ್ಯವಾದಾಗ ತನ್ನ ತನವನ್ನು ಕಳೆದುಕೊಳ್ಳುತ್ತದೆ'. ಅಂದರೆ ಕ್ರಿಯೆಯ ಮೂಲಕ ಮಾತ್ರ ಸಿದ್ಧಿಸಲ್ಪಡುತ್ತದೆ. ಅನೇಕರು ಸಂಕಲ್ಪ ಮಾಡುತ್ತಾರೆ. ವಿಘ್ನ ಬಂದೊಡನೆ ಬಿಡುತ್ತಾರೆ. 'ಪ್ರಾರಬ್ಧಮುತ್ತಮ ಜನಾಃ ನ ಪರಿತ್ಯಜಂತಿ' ಅಂದರೆ ಪ್ರಾರಂಭಿಸಲ್ಪಟ್ಟ ಕಾರ್ಯ ಸಮಾಪ್ತಿಯ ತನಕ ಉತ್ತಮರು ಬಿಡುವದಿಲ್ಲ. ಹೀಗೆ ಸಂಕಲ್ಪ ಪೂರ್ಣತೆ ಕಾಣುವದು ನಿರಂತರ ಕ್ರಿಯಾ ಶೀಲತೆಯಿಂದ.

'ಉದ್ಯಮೇನೈವಸಿದ್ಯಂತಿ ಕಾರ್ಯಾಣಿ ನ ಮನೋರಥೈಃ' ಎನ್ನುವಂತೆ ಕೇವಲ ಮನಃಸಂಕಲ್ಪ ಸಿದ್ಧಿಯಾಗುವುದಿಲ್ಲ. ಅದು ಕಾರ್ಯ ಸನ್ನದ್ಧತೆಯಿಂದ ಮಾತ್ರ ಸಾಧ್ಯ. ಹಾಗೆ ಜೀವನದಲ್ಲಿ ಉತ್ತಮ ಸಂಕಲ್ಪ, ಕ್ರಿಯಾಶೀಲತೆ ಹಾಗೆಯೇ ಗುರಿ ಸಾಧನೆಯತ್ತ ನಿರಂತರ ಕೈಂಕರ್ಯ ತನ್ನ ಆತ್ಮೋನ್ನತಿಯೊಂದಿಗೆ ಇತರರ ಔನ್ನತ್ಯಕ್ಕೆ ಕಾರಣೀಕತ್ರುವಾಗುತ್ತದೆ.

'ಮಾಸಾನಾಂ ಮಾರ್ಗಶೀರ್ಷೋಽಽಽಸ್ಮಿ' ಎನ್ನುವ ಪರಮಾತ್ಮ ಶ್ರೀ ಕೃಷ್ಣನ ನುಡಿಯಂತೆ ನಾವು ಮಾರ್ಗಶಿರ್ಷ ಮಾಸದಲ್ಲಿ ಸತ್ ಸಂಕಲ್ಪ ಮಾಡೋಣ. ಸನತ್ಕುಮಾರ ನಾರದರಿಗೆ ಸಂಕಲ್ಪವದು ಸಾಧನೆಗೆ ಔನ್ನುತ್ಯವಾದುದು ಎಂದು ನುಡಿದ. ಹೀಗೆ ಚಂಪಾ ಷಷ್ಠಿ ಸಮೀಪಿಸಿತ್ತಿದೆ. ನಾವೆಲ್ಲ ಆತ್ಮೋನ್ನತಿಯೊಂದಿಗೆ ಸಮಾಜದ ಔನ್ನತ್ಯಕ್ಕೆ ಕೃತಸಂಕಲ್ಪದೊಂದಿಗೆ ಕಾರ್ಯೋನ್ಮುಖಿಗಳಾಗಿ ಸರ್ವರ ಒಳಿತಿಗೆ ಕ್ರಿಯಾಶೀಲರಾಗೋಣವೇ?.

ಚಿಂತನೆಗೂ ಕ್ರಿಯೆಗೂ ಏನದು ನಂಟು
ಸಂಕಲ್ಪತೆ ಕಾರ್ಯಗತವಾದರೆ ಸಾರ್ಥಕತೆ ಉಂಟು
ಸಾಮಾಜಿಕ ಕಳಕಳಿ ಪ್ರತಿಯೊಬ್ಬರ ಸುಕಾರ್ಯ
ಸತ್‌ಸಂಕಲ್ಪದ ಸಾಕಾರತೆ ಪರಸ್ಪರ ಜೀವಿಕೆಗೆ ಅನಿವಾರ್ಯ.

ಸಂಪಾದಕರು

**ವಿ.ಸೂ :–** ಶ್ರೀ ವೀರಾಂಜನೇಯ ಭಕ್ತ ಮಹಾಜನಗಳೇ ಹಾಗೂ ಪ್ರಿಯ ಹೇಮಪುರ ಓದುಗರೇ ನಿಮ್ಮಲ್ಲಿ ವಿನಂತಿಸುವುದೆನೆಂದರೇ ಪತ್ರಿಕೆಯ ಚಂದಾದಾರರಾಗಿರುವ ತಾವುಗಳು ತಮ್ಮ ಚಂದಾ ಅವಧಿಯು ಮುಗಿದು ನಿಮ್ಮ ಮನೆಗೆ ಪತ್ರಿಕೆ ಬರುತ್ತಿದ್ದರೆ ತಕ್ಷಣ ಶ್ರೀಕ್ಷೇತ್ರ ಬಂಗಾರಮಕ್ಕಿ, ಗೇರಸೊಪ್ಪಾ ಈ ವಿಳಾಸಕ್ಕೆ ನಿಮ್ಮ ಚಂದಾ ಹಣವನ್ನು ಡಿ.ಡಿ. ಅಥವಾ ಎಂ.ಓ. ಮಾಡಿ ಅಥವಾ ಖಾತೆಗೆ NEFT ಮಾಡಿ, ದೂರವಾಣಿ: 08387–268545 ಅಥವಾ ಮೊಬೈಲ್ +919449109299 ಗೆ ತಿಳಿಸಿ ನಿಮ್ಮ ಚಂದಾ ಅವಧಿಯನ್ನು ನವೀಕರಿಸಿಕೊಳ್ಳಬೇಕಾಗಿ ವಿನಂತಿಸುತ್ತೇವೆ.

NEFT ಮಾಡಲು ಬ್ಯಾಂಕ್ ವಿವರ

ಖಾತೆ ಹೆಸರು : ಶ್ರೀ ವೀರಾಂಜನೇಯು ಪ್ರಕಾಶನ
ಖಾತೆ ಸಂಖ್ಯೆ : 03393070000807
IFSC : SYNB0000339
ಶಾಖೆ : ಗೇರಸೊಪ್ಪ, ಕೆ.ಪಿ.ಸಿ. ಕಾಲೋನಿ, ಜ್ಯೋತಿ ನಗರ.



ಅಭಿನವ ಸರ್ವಜ್ಞ – ರೆ. ಉತ್ತಂಗಿ

ವಕಾಲತ್...

# ಪೊಲೀಸರ 'ಟೆಡ್ಡಿ ಬೇರ್' – ಸಂಜಯದತ್ತ

ಲೇ. – ನಾಗರಾಜ ನಾಯಕ.

ಅಪರಾಧಗಳನ್ನು ತಡೆಯಲು, ಅಪರಾಧಿಗಳನ್ನು ಬಂಧಿಸಲು ಹಾಗೂ ಕಾನೂನು ಸುವ್ಯವಸ್ಥೆಯನ್ನು ರಕ್ಷಿಸಲು ಕಾನೂನುಬದ್ಧ ಅಧಿಕಾರವನ್ನು ಪಡೆದ ಸರ್ಕಾರದ ಇಲಾಖೆಗೆ 'ಪೊಲೀಸ ಇಲಾಖೆ' ಎನ್ನಲಾಗುತ್ತದೆ ಎಂದು ದೆಹಲಿ ಎಡ್ಮಿನಿಸ್ಟ್ರೇಷನ್ ವರ್ಸಸ್ ರಾಮಸಿಂಗ್ (AIR-1962 SC 63) ರಲ್ಲಿ ಸುಪ್ರೀಂ ಹೇಳಿದೆ. ಪೊಲೀಸರು ಕಾನೂನಿಗಿಂತ ಮಿಗಿಲಲ್ಲ. ಆದರೆ ಪೊಲೀಸರ ಕುರಿತು ಜನ ಗೌರವವನ್ನು ಹೊಂದಿದ್ದಾರೆ. ಕಾರಣ ನಮ್ಮನ್ನು ಕಾನೂನು ವಿರೋಧಿ ಚಟುವಟಿಕೆಗಳಿಂದ ರಕ್ಷಿಸುವವರೆಂದು. ಆದ್ದರಿಂದ ಇಂತಹ ಪೊಲೀಸರ ನಡತೆ, ವರ್ತನೆಗಳು ಇತರರಿಗೆ ಮಾದರಿಯಾಗಿರಬೇಕು. ಆದರೆ ಇದಕ್ಕೆ ವಿರುದ್ಧವಾಗಿ ಇಡೀ ಪೊಲೀಸ್ ವ್ಯವಸ್ಥೆಯೇ ತಲೆತಗ್ಗಿಸುವಂತಹ ಘಟನೆ ಯೆರವಾಡ ಜೈಲಿನ ಮುಂಬಾಗಿಲಿನಲ್ಲಿ ನಡೆದುಹೋಯಿತು. ರಾಜೇಂದ್ರ ಕಾಳೇಕರ ಎನ್ನುವ ಪೊಲೀಸ್ ಕಾನ್‌ಸ್ಟೇಬಲ್, ತಾನು ಒಬ್ಬ ಜವಾಬ್ದಾರಿಯುತ ಪೊಲೀಸ್ ಎನ್ನುವುದನ್ನು ಮರೆತು ಆರೋಪ ಸಾಬೀತಾದ ಅಪರಾಧಿಯನ್ನು ಯೆರವಾಡ ಜೈಲಿನ ಬಾಗಿಲಿನಲ್ಲಿ ಅಪ್ಪಿಕೊಂಡ. ಆ ಅಪರಾಧಿ ಸಾಮಾನ್ಯನಲ್ಲ; ದೇಶದ ಇತಿಹಾಸದಲ್ಲೇ ಎಂದೂ ನಡೆಯದ, ದೇಶವನ್ನೇ ಬೆಚ್ಚಿ ಬೀಳಿಸಿದ ಮುಂಬೈ ಬಾಂಬ್ ಸರಣಿ ಸ್ಫೋಟಕ್ಕೆ ಜವಾಬ್ದಾರರಾದ ಹಂತಕ ವ್ಯಕ್ತಿಗಳೊಂದಿಗೆ ಸಂಬಂಧ ಹೊಂದಿದ್ದ ಎಂದು ಆರೋಪಿಸಲಾದ ಮನುಷ್ಯ. ಅಷ್ಟೇ ಅಲ್ಲ ಅಕ್ರಮವಾಗಿ ಶಸ್ತ್ರಾಸ್ತ್ರವನ್ನು ಹೊಂದಿದ್ದ ಆರೋಪವನ್ನೂ ಹೊತ್ತು ಅದಕ್ಕಾಗಿ ಸ್ಪೇಷಲ್ ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾದ ವ್ಯಕ್ತಿ. ಆತ ಬೇರಾರು ಅಲ್ಲ 'ಖಳ ನಾಯಕ' (ಕು)ಖ್ಯಾತಿಯ ಸಂಜಯ ದತ್ತ. ರಾಜೇಂದ್ರ ಕಾಳೇಕರ ಸಂಜಯ ದತ್ತನನ್ನು ಅಪ್ಪಿಕೊಂಡರೆ ಸತೀಶ ಕದಂ ಇತ್ಯಾದಿ ಎಂಟು ಜನ ಖುಷಿಯಿಂದ ಸಂಜಯ ದತ್ತನ ಕೈಕುಲುಕಿದ್ದರು.

ಪೊಲೀಸರು ಮನುಷ್ಯರೇ. ಅಪರಾಧಿಯನ್ನು ಅಪ್ಪಿಕೊಂಡ, ಕೈಕುಲುಕಿದ ಘಟನೆ ಸಣ್ಣದಾಗಿ ಕಾಣಬಹುದು. ಆದರೆ ಇದು ಕಾನೂನು ವಿರೋಧಿಯಷ್ಟೇ ಅಲ್ಲ, ನೈತಿಕವಾಗಿಯೂ ತಪ್ಪು. ಪತ್ತೆ ಹಚ್ಚಿ ಅಪರಾಧಿಗಳನ್ನು ಅವರು ಮಾಡಿದ ಅಪರಾಧಕ್ಕೆ ಶಿಕ್ಷೆ ಕೊಡಿಸುವಂತೆ ಪ್ರಯತ್ನಿಸುವುದು ಪೊಲೀಸರ ಜವಾಬ್ದಾರಿ. ಪ್ರತಿಯೊಬ್ಬ ಪೊಲೀಸನು ಆ ಇಲಾಖೆಯ ಟ್ರಸ್ಟಿ ಇದ್ದಂತೆ. ತನ್ನ ಇಲಾಖೆಯ, ಆ ಮೂಲಕ ದೇಶದ ಹಿತಕಾಯುವುದು ಪ್ರತಿಯೊಬ್ಬ ಪೊಲೀಸನ ಆದ್ಯ ಕರ್ತವ್ಯ. ಘನ ನ್ಯಾಯಾಲಯ ತಪ್ಪಿತಸ್ಥನೆಂದು ಸಾರಿದ ಅಪರಾಧಿಯೊಬ್ಬ ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದೊಡನೆ ಆತ ನಿರಾಪರಾಧಿ ಎಂದಲ್ಲ. ಆತನ ವಿರುದ್ಧ ಪ್ರಕರಣ ಇನ್ನು ಚಾಲ್ತಿಯಲ್ಲಿದೆ ಎನ್ನುವುದನ್ನು ಆ ಪೊಲೀಸರು ಮನಗಾಣಬೇಕಿತ್ತು. ಸಂಜಯದತ್ತ ನ್ಯಾಯಾಲಯದಿಂದ ದೋಷ ಮುಕ್ತನಾಗಿದ್ದರೆ ಆತನನ್ನು ಅಪ್ಪಿಕೊಳ್ಳುವುದೇಕೆ, 'ಟೆಡ್ಡಿಬೇರ್'ನ್ನು ಮುದ್ದಿಸಿದಂತೆ ಮುದ್ದಿಸಲಿ! ಯಾರಿಗೇನಂತೆ?

ಯಾವುದೇ ರಾಜ್ಯದಲ್ಲಾಗಲಿ ಪ್ರತಿಯೊಬ್ಬ ಪೊಲೀಸರಿಗೆ ಪೊಲೀಸ ಮಾನ್ಯುಲ್ ಮತ್ತು ಸಿವಿಲ್ ಸರ್ವಿಸಸ್ ರೂಲ್ಸ್ ಎಂಬ ಕಾನೂನುಗಳಿವೆ. ಪ್ರತಿಯೊಬ್ಬ ಪೊಲೀಸನೂ ಸಹ ಇವುಗಳ ನಿಯಂತ್ರಣಕ್ಕೆ ಒಳಪಟ್ಟಿರುತ್ತಾನೆ. ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಆರ್.ಆರ್. ಪಾಟೀಲರವರಿಗೆ ಈ ವಿಷಯ ತಿಳಿದೊಡನೆ ಆಕೂಡಲೇ ಪೊಲೀಸ್ ಅಧಿಕಾರಿಗಳಿಗೆ ರಾಜೇಂದ್ರ ಕಾಳೇಕರನನ್ನು ಸಸ್ಪೆಂಡ್ ಮಾಡಲು ಮತ್ತು ಕೈಕುಲುಕಿದ ಇತರ ಪೊಲೀಸರಿಗೆ ನೋಟೀಸ್ ನೀಡಲು ನಿರ್ದೇಶನವಿತ್ತರು. ಉಪ ಮುಖ್ಯಮಂತ್ರಿಗಳು ತೆಗೆದುಕೊಂಡ ಕ್ರಮ ನಿಜಕ್ಕೂ ಸ್ವಾಗತಾರ್ಹ.

ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾಗಿ ಅಪೀಲು ಕೋರ್ಟ್‌ನಿಂದ ಜಾಮೀನಿನ ಮೇಲೆ ಬಿಡುಗಡೆಗೊಂಡವರಿಗೆ ಪೊಲೀಸರೇ ಈ ರೀತಿ ಹಾತೊರೆದು ಅಪ್ಪಿಕೊಂಡರೆ, ಕೈಕುಲುಕಿದರೆ ಜನ ಏನು ತಿಳಿದುಕೊಳ್ಳಬೇಕು? ಅಪರಾಧ ಎಸಗಿದವರಿಗೆಲ್ಲ ಪೊಲೀಸರು ಈ ರೀತಿಯ ರಾಜ ಮನ್ನಣೆ ನೀಡುತ್ತಾರೆಂದು ತಿಳಿಯುವುದೇ? ಅಥವಾ ಸಂಜಯದತ್ತ ನಂತೆ

ತಾನೂ ಸಹ ಅಪರಾಧ ಎಸಗಿದರೆ ಹೇಗೆ ಎಂದು ತಿಳಿಯುವುದೇ? 'ಖಳ ನಾಯಕ' ಮತ್ತು 'ಮುನ್ನಾಭಾಯಿ'ಯ ಖ್ಯಾತಿಯ ಸಂಜಯದತ್ತನನ್ನು ಒಬ್ಬ ನಟನಾಗಿ ಮಾತ್ರ ಪೊಲೀಸರು ಕಾಣುವಂತಿಲ್ಲ. ಆತ ಒಬ್ಬ ಅಪರಾಧಿ. ಅದೂ ನ್ಯಾಯಾಲಯದಿಂದ ಘೋಷಣೆಯಾಗಿರುವುದು. ನಟ ಸಂಜಯದತ್ತನನ್ನು ಕಂಡೊಡನೆ ತಮ್ಮ ಎಲ್ಲ ಪುಳಕವನ್ನು ಹತ್ತಿಕ್ಕಿ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಿತ್ತು. ಸಂಜಯದತ್ತ ಅಪ್ಪುಗೆ ಪೊಲೀಸರಿಗೆ ಧೃತರಾಷ್ಟ್ರನ ಅಪ್ಪುಗೆಯಾಗಿ ಪರಿಣಮಿಸಿತು. ಸಂಜಯದತ್ತನೇ ಅಪ್ಪಲು ಬಂದರೂ ಸಹ ಮಹಾರಾಷ್ಟ್ರ ಪೊಲೀಸರು ನಿಲ್ಲಲಿಕ್ಕಿಲ್ಲ. 'ನಿನ್ನ ಅಪ್ಪುಗೆ ಸಾಕಪ್ಪಾ' ಎಂದು ಓಡಬಹುದು. ಕನಸಿನಲ್ಲಿಯೂ ಸಂಜಯದತ್ತನೇ ಅಪ್ಪಲು ಬಂದಂತೆ ಆಗಬಹುದು. ಚಿತ್ರನಟನೊಬ್ಬನನ್ನು ನೋಡಿ ಉನ್ಮಾದ ತಡೆಯಲಾರದೆ ಅಪ್ಪಿಕೊಂಡಿದ್ದಾದರೂ ಪೊಲೀಸರ ವರ್ತನೆ ಆಕ್ಷೇಪಾರ್ಹವಾದದ್ದು ಮತ್ತು ಕಾನೂನು ಕ್ರಮಕ್ಕೂ ಯೋಗ್ಯವಾದದ್ದು. ಕಾನೂನಿಗೆ ಪೊಲೀಸರು, ಆರೋಪಿಗಳು ಎಲ್ಲರೂ ಒಂದೇ.

**ಹೇಮುಪುರ ಪತ್ರಿಕೆಯ ಚಂದಾವಿವರ**

* ಬಿಡಿ ಪತ್ರಿಕೆ – ರೂ.20/– * ವಾರ್ಷಿಕ ಚಂದಾ – ರೂ.200/– * ಪಂಚವಾರ್ಷಿಕ ಚಂದಾ – ರೂ.1000/–
* ಆಜೀವ ಸದಸ್ಯತ್ವ – ರೂ.5000/–

**ವಿವರಗಳಿಗೆ ಸಂಪರ್ಕಿಸಿ :** ಸಂಪಾದಕರು, ಹೇಮುಪುರ ಮಾಸಪತ್ರಿಕೆ. ದೂರವಾಣಿ: 08387–268545 / 9449109299

ಮಧುರ ಪ್ರಕಾಶನ

# ಸೆಲ್ಫ್ ಹಿಪ್ನಾಸಿಸ್ ಟೆಕ್ನಿಕ್

...ಎಂ.ಎಲ್. ರಾಘವೇಂದ್ರ ರಾವ್

ಈ ವೇಗದ – ಕಂಪ್ಯೂಟರ್ ಯುಗದಲ್ಲಿ ಎಲ್ಲರೂ, ಎಲ್ಲ ಕಡೆಗಳಲ್ಲಿ ವೇಗವೇ – ಸ್ಪೀಡೇ! ವೇಗ ಹೆಚ್ಚಿದಾಗ ಬ್ರೇಕ್ ಬೀಳದೇ ತಪ್ಪಿದ್ದಲ್ಲ. ಅವೇ ಮಾನಸಿಕ ಒತ್ತಡಗಳು, ಸಂಘರ್ಷಣೆಗಳು. ಸರಿಯಾದ ಆಲೋಚನೆಗಳು ಬಾರದೇ, ವಿಶ್ರಾಂತಿ ಬರವಾಗಿ ಜೀವನವನ್ನು ಅಸ್ತವ್ಯಸ್ತ ಮಾಡಿಕೊಳ್ಳುತ್ತಾ, ಬಿಜಿಯಾಗಿ ಕಳೆಯುತ್ತಿದ್ದಾನೆ. ಬದುಕಿನ ಬಂಡಿಗೆ ಒಂದಿಷ್ಟು ವಿಶ್ರಾಂತಿ ಕಲ್ಪಿಸುತ್ತಾ, ಜೀವನ ಮಾಧುರ್ಯವನ್ನು ಸವಿನೋಡಬೇಕೆಂದರೇ ಸೆಲ್ಫ್ ಹಿಪ್ನಾಟಿಜಂ ಮೂಲಕ ಅದನ್ನು ಪೂರೈಸಿಕೊಳ್ಳಬಹುದು.

**ಸೆಲ್ಫ್ ಹಿಪ್ನಾಟಿಜಂ ಅಂದರೇನು? ಆ ಸ್ಥಿತಿಯನ್ನು ಹೇಗೆ ಪಡೆಯಬೇಕು? ಆ ಸ್ಥಿತಿಯನ್ನು ಹೇಗೆ ಗುರ್ತಿಸಬೇಕು?**

ಆ ಸ್ಥಿತಿಯನ್ನು ನಮಗೆ ಅನುಕೂಲವಾಗಿ ಹೇಗೆ ರೂಪಿಸಿಕೊಳ್ಳಬೇಕೋ, ಆ ಸ್ಥಿತಿಯನ್ನು ಹೊಂದುವುದರಲ್ಲಿ ಎದುರಾಗುವ ಅಡೆತಡೆಗಳನ್ನು ಹೇಗೆ ಹೋಗಲಾಡಿಸಿಕೊಳ್ಳಬೇಕೋ, ಆ ಸ್ಥಿತಿಯಿಂದ ಪಡೆದುಕೊಳ್ಳುವ ಪ್ರಯೋಜನಗಳು ಏನೋ ಈ ಅಧ್ಯಾಯದಲ್ಲಿ ನಿಮಗೆ ವಿವರವಾಗಿ ಕೊಡುತ್ತಿದ್ದೇನೆ.

ಅಮೇರಿಕನ್ ಮೆಡಿಕಲ್ ಅಸೋಷಿಯೇಷನ್, ಬ್ರಿಟೀಷ್ ಮೆಡಿಕಲ್ ಅಸೋಷಿಯೇಷನ್, ಹಿಪ್ನಾಟಿಜಂನನ್ನು ವೈದ್ಯಕೀಯ ಪರವಾಗಿ ಗುರ್ತಿಸಿ ಅದರ ಪ್ರಯೋಜನವನ್ನು ಅಲ್ಲಿಯ ಜನತೆಯ ಹತ್ತಿರಕ್ಕೆ ತರುವಲ್ಲಿ ಯಶಸ್ವಿಯಾದರು.

ಹಾಗೆಯೇ ನಮ್ಮ ದೇಶದಲ್ಲಿ ಕೂಡಾ ಮೆಡಿಕಲ್ ಕೌನ್ಸಿಲ್‌ನಿಂದ ಮನ್ನಣೆ ಪಡೆಯಬೇಕಾದರೆ ಈ ಶಾಸ್ತ್ರದ ಬಗ್ಗೆ ಜನರಲ್ಲಿ ಒಳ್ಳೆ ಚೈತನ್ಯವನ್ನು ಉಂಟಾಗಿಸಬೇಕು. ಅದರಲ್ಲಿನ ಭಾಗವಾಗಿ ಹಿಪ್ನಾಸಿಸ್ ಉಪಯೋಗಗಳನ್ನು ಜನ ಸವಿನೋಡಬೇಕು. ಅದಕ್ಕೆ ನೀವೆಲ್ಲರೂ ಸೆಲ್ಫ್ ಹಿಪ್ನಾಟಿಜಂ ಕುರಿತು ತಿಳಿದುಕೊಳ್ಳುವಿರೆಂದು, ಆಚರಿಸಿ ಪ್ರಯೋಜನವನ್ನು ಹೊಂದುವಿರೆಂದು ಇದರ ಶಾಸ್ತ್ರೀಯತೆಯನ್ನು ನಾಲ್ವರಿಗೆ ತಿಳಿಸುವಿರೆಂದು ಆಶಿಸುತ್ತೇನೆ.

**ಸೆಲ್ಫ್ ಹಿಪ್ನಾಟಿಜಂ ಅಂದರೇ.....**

ತಮಗೆ ತಾನೇ ಸ್ವತಃ ಹಿಪ್ನಾಸಿಸ್ ಸ್ಥಿತಿಯನ್ನು ಒಂದು ವಿಧಾನದ ಮೂಲಕ ಕಲ್ಪಿಸಿಕೊಳ್ಳುವುದೇ ಸೆಲ್ಫ್ ಹಿಪ್ನಾಟೈಜ್ ಆಗುವುದೆಂದರೆ. ಮತ್ತೆ ಹಿಪ್ನಾಸಿಸ್ ಎಂದರೆ ಏನೆಂದು ಈ ಸಂದರ್ಭದಲ್ಲಿ ನಮಗೊಂದು ಆಲೋಚನೆ ಬರುತ್ತದೆ. ಹಿಪ್ನಾಟಿಸ್ಟ್ ಮೂಲಕವಾಗಲೀ, ವ್ಯಕ್ತಿಗತವಾಗಾಗಲೀ ಸೂಚನೆಗಳ ಮೂಲಕ ವ್ಯಕ್ತಿಯಲ್ಲಿ ಉಂಟಾಗುವ ಮಾನಸಿಕ ಸ್ಥಿತಿಯನ್ನು 'ಹಿಪ್ನಾಸಿಸ್' ಆಗಿ ಹೆಸರಿಸಬಹುದು. ಅಂದರೆ ಅದು ಹೊರಳಿಸಲ್ಪಟ್ಟ ಜಾಗ್ರತಾವಸ್ಥ – ಇದನ್ನೇ ಸುಷುಪ್ತಾವಸ್ಥೆ ಅಂತಾನೂ ಕರೆಯುತ್ತಾರೆ. ಅದೇ ಸಬ್‌ಕಾನ್ಷಸ್ ಮೈಂಡ್.

ಹಿಪ್ನಾಸಿಸ್ ಸ್ಥಿತಿ ಹೇಗಿರುತ್ತದೆ ಅನ್ನೋ ವಿಷಯದ ಮೇಲೆ ನಾವು ಎಷ್ಟು ವಿಷಯಗಳನ್ನು ಹೇಳಿಕೊಂಡರೂ ಆ ಸ್ಥಿತಿಯನ್ನು ವ್ಯಕ್ತಿಗತವಾಗಿ ಅನುಭವಿಸಿ ಹೇಳುವ ವಿವರಣೆಯೇ ಸರಿಯಾದುದು. ಈ ಸ್ಥಿತಿ ಎಲ್ಲರಿಗೂ ಒಂದೇ ವಿಧವಾಗಿ ಇರುವುದಿಲ್ಲ. ವ್ಯಕ್ತಿಗೆ ಮಧ್ಯೆ ಉಂಟಾಗುವ ಅನುಭವದಲ್ಲಿ ಬಹಳ ವ್ಯತ್ಯಾಸ ಇರುತ್ತದೆ.

ಈ ಸ್ಥಿತಿಯನ್ನು ಸೂಕ್ಷ್ಮವಾಗಿ ಮೂರು ಹಂತಗಳನ್ನಾಗಿ ಹೇಳಿಕೊಳ್ಳಬಹುದು. ಟೈಟ್ ಟ್ರಾನ್ಸ್ – ಮಿಡಿಲ್ ಟ್ರಾನ್ಸ್–ಡೀಪ್ ಟ್ರಾನ್ಸ್; ವಿವಿಧ ತರನಾದ ಅನುಭೂತಿಗಳು ಉಂಟಾಗುತ್ತಿರುತ್ತವೆ. ಸಹಜವಾಗಿ ಉಂಟಾಗುವ ವಿಷಯಗಳನ್ನು ಪರಿಶೀಲಿಸಿದರೇ ಆಲೋಚನೆಗಳ ಒಂದು ರಭಸ ಕಡಿಮೆಯಾಗಿ, ಮನಸ್ಸು ಪ್ರಶಾಂತತೆಗೆ ಒಳಗಾಗುತ್ತದೆ. ದೇಹ ಚೆನ್ನಾಗಿ ಭಾರವಾಗಿ ಬದಲಾಗುತ್ತದೆ. ಶ್ವಾಸ ತೆಗೆದುಕೊಳ್ಳುವುದು ತುಂಬಾ ನಿಧಾನವಾಗಿರುತ್ತದೆ. ಪಲ್ಸ ರೇಟು ಇಳಿಯುತ್ತದೆ. ನಾವು ಕನಸಿನಲ್ಲಿ ಹೊಂದುವ ಅನುಭೂತಿಯನ್ನು ಹೊಂದುತ್ತಿರುತ್ತೇವೆ. ಮನಸ್ಸು – ದೇಹ ಹಾಯಾಗಿ, ಹಿತವಾಗಿ – ಪ್ರಶಾಂತವಾಗಿ ಸುಖವಾಗಿರುತ್ತವೆ.

**ಎಲ್ಲರೂ ಸೆಲ್ಫ್ ಹಿಪ್ನಾಟಿಜಂ ಅಭ್ಯಾಸ ಮಾಡಬಹುದಾ?**

ಸಾಮಾನ್ಯವಾಗಿ ಮಾನಸಿಕವಾಗಿ ಆರೋಗ್ಯವಂತರು ಸೆಲ್ಫ್ ಹಿಪ್ನಾಟಿಜಂನ್ನು ನಿರಾತಂಕವಾಗಿ ಮಾಡಬಹುದು. ಆದರೂ ಕೆಲವು ರೀತಿಯ ಮಾನಸಿಕ ಕಾಯಿಲೆಗಳಿಗೆ ಒಳಗಾದವರು ದಕ್ಷತೆಯಿಂದ ಈ ಸ್ಥಿತಿಯನ್ನು ಬಳಸಿಕೊಳ್ಳದೆ ಹೋಗಬಹುದು. ತೀವ್ರವಾದ ಖಿನ್ನತೆ (ಡಿಪ್ರೆಷನ್) ನ್ಯೂರೋಟಿಕ್ ಕಂಡಿಷನ್‌ನಲ್ಲಿರೋರು ಈ ಸ್ಥಿತಿಯನ್ನು ಬಳಸಿಕೊಳ್ಳದೇ ಹೋಗಬಹುದು. ಆದ್ದರಿಂದ ಹಿಪ್ನಟಿಸ್ಟ್, ಸೈಕಾಲಜಿಸ್ಟ್, ಸೈಕಿಯಾಟ್ರಿಸ್ಟ್ ಸಲಹೆಯಂತೆ.... ಅವರ ಮುಂದೆ ಅವರ ವ್ಯಾಪ್ತಿಗೆ ಒಳಪಟ್ಟ, ಎಲ್ಲಿವರೆಗೆ ಸೆಲ್ಫ್ ಹಿಪ್ನಾಟಿಜಂನ್ನು ಉಪಯೋಗಿಸಿಕೊಳ್ಳಬಹುದೋ ಮೊದಲೇ ನಿರ್ಣಯಿಸಿಕೊಳ್ಳಬೇಕು. ಹಾಗೇ ಸೈಕೋಸಿಸ್‌ನಂಥ ತೀವ್ರವಾದ ಮಾನಸಿಕ ರುಗ್ಮತೆಗಳಿರೋರು ಸೆಲ್ಫ್ ಹಿಪ್ನಾಟಿಜಂ ಅಭ್ಯಾಸ ಮಾಡಬಾರದು. ಹನ್ನೆರಡು ವರ್ಷಕ್ಕೆ ಮೇಲ್ಪಟ್ಟವರು ಮಹಿಳೆಯರು, ಪುರುಷರು ಎಲ್ಲರೂ ಅಭ್ಯಾಸ ಮಾಡಬಹುದು.

**ಎಲ್ಲರೂ ಹಿಪ್ನಟೈಜ್ ಆಗುವರೇ?**

ಈ ಪ್ರಶ್ನೆ ಬಹಳ ಮಂದಿಯಲ್ಲಿ ಹುಟ್ಟುತ್ತದೆ. ನೀವು ಹಿಪ್ನಟೈಜ್ ಆಗಬೇಕೆಂದರೆ ಸುಲಭವಾಗೇ ಹಿಪ್ನಟೈಜ್ ಆಗುತ್ತೀರಿ.

ಒಳ್ಳೇ ಊಹಾಶಕ್ತಿ ಇರೋರು, ಮಾನಸಿಕವಾಗಿ ಆರೋಗ್ಯವಂತರು ಸುಲಭವಾಗಿ ಹಿಪ್ನಟೈಜ್ ಆಗುತ್ತಾರೆ. ಕೆಲವರು ಮೊದಲೇ ಹಿಪ್ನಟೈಜ್ ಆದರೆ ಮತ್ತೆ ಕೆಲವರು ಅಭ್ಯಾಸದ ಮೂಲಕ ಕ್ರಮೇಣ ಐದಾರು ಬಾರಿ ಹಿಪ್ನಟೈಜ್ ಸ್ಥಿತಿಗೆ ಹೋಗುತ್ತಾರೆ. ಪ್ರಯತ್ನಿಸಿದಂತೆಲ್ಲ ಕ್ರಮೇಣ ಎಲ್ಲರೂ ಹಿಪ್ನಟೈಜ್ ಆಗಬಹುದು. ಮನಸ್ಸಿನಲ್ಲಿ ವ್ಯತಿರಿಕ್ತವಿದ್ದರೂ, ಈ ಸ್ಥಿತಿ ಬಗ್ಗೆ ಭಯವಿದ್ದರೂ ಹಿಪ್ನಟೈಜ್ ಆಗಲಾರರರು.

**ಸೆಲ್ಫ್ ಹಿಪ್ನಟೈಜ್ ಬಗ್ಗೆ ಕೆಲವು ಸಂಶಯಗಳು**

ಹಿಪ್ನಟೈಜ್ ಆಗುವುದು ಮಾನಸಿಕ ದುರ್ಬಲ ಅಂತ ಬಹಳ ಜನ ವಿದ್ಯಾವಂತರು ಸಹ ಸಂಶಯಕ್ಕೆ ಒಳಗಾಗಿರುತ್ತಾರೆ. ಹಿಪ್ನಟೈಜ್ ಆದರೆ ತಮ್ಮನ್ನು ಮಾನಸಿಕ ದುರ್ಬಲರೆಂದು ಠಸ್ಸೆ ಒತ್ತುತ್ತಾರೆ ಅನ್ನೋ ಭಯದಿಂದ ಹಿಪ್ನಟೈಜ್ ಆಗುವುದಕ್ಕೆ ಬಹಳ ಜನ ಹಿಂದೆಜ್ಜೆ ಹಾಕುತ್ತಾರೆ. ಆದರೆ ವಾಸ್ತವವಾಗಿ ಮಾನಸಿಕ ದುರ್ಬಲರು ಹಿಪ್ನಟೈಜ್ ಆಗಲಾಲರು. ಅವರಿಗೆ ಸರಿಯಾದ ಸ್ಥಿತಿಯಲ್ಲಿ ಊಹಾಶಕ್ತಿ ಇರುವುದಿಲ್ಲ. ಹಿಪ್ನಾಸಿಸ್ ಸ್ಥಿತಿ ತುಂಬಾ ಆರೋಗ್ಯಕರವಾದುದು. ಹಿಪ್ನಾಸಿಸ್ ಸ್ಥಿತಿಗೆ ಹೋಗುವುದಕ್ಕೆ ಒಳ್ಳೆ ಊಹಾ ಶಕ್ತಿ, ಆರೋಗ್ಯಕರವಾದ ಮನಸ್ಸು ಇರಬೇಕು.

ಸೆಲ್ಫ್ ಹಿಪ್ನಟೈಜ್ ಅದರೆ ಪುನಃ ಮಾಮೂಲು ಸ್ಥಿತಿಗೆ ಬರುವುದಕ್ಕೆ ತೊಂದರೆ ಏನಾದರೂ ಇರುತ್ತದೆನೋ ಅಂತ ಭಯ ಬಹಳ ಜನರಲ್ಲಿ ಇರುತ್ತದೆ. ಇಂತಹ ಭಯವಿದ್ದರೂ ಹಿಪ್ನಾಸಿಸ್‌ನೊಳಗೆ ಹೋಗುವುದು ಕಷ್ಟವಾಗೇ ಇರುತ್ತದೆ.

ಹಿಪ್ನಟೈಜ್ ಆದ ನಂತರ.. ಅಂದರೆ ಒಂದು ಕ್ರಮ ಪದ್ಧತಿಯಲ್ಲಿ ಟ್ರಾನ್ಸ್– ಸಮಾಧಿ ಸ್ಥಿತಿಗೆ ಹೋಗುವುದು ಎಷ್ಟು ಸುಲಭವೋ, ಹಾಗೇ ಟ್ರಾನ್ಸ್‌ನಿಂದ ಮಾಮೂಲೀ ಸ್ಥಿತಿಗೆ ಬರುವುದು ಕೂಡಾ ಸಾಮಾನ್ಯವಾಗಿ ಸುಲಭವಾಗೇ ಇರುತ್ತದೆ. ಸ್ವಲ್ಪಹೊತ್ತು ರಿಲಾಕ್ಸ್ ಆದ ಬಲಿಕ ಮಾಮುಲಿ ಸ್ಥಿತಿಗೆ ಬರಬೇಕಾದರೆ 'ನಾನು ಕನ್ಷಸ್ ಸ್ಥಿತಿಗೆ ಬರುತ್ತಿದ್ದೇನೆ" ಅಂತ ಸೆಲ್ಫ್ ಸಜೆಷನ್ ಕೊಟ್ಟುಕೊಂಡು 1 ರಿಂದ 10 ಅಂಕೆಗಳನ್ನು ಲೆಕ್ಕ ಹಾಕುತ್ತಾ ಮಾಮೂಲು ಸ್ಥಿತಿಗೆ ಬಂದುಬಿಡಬಹುದು. ಒಂದು ವೇಳೆ ನೀವು ಒಳ್ಳೆ ಡೀಪ್ ಸ್ಥಿತಿಗೆ ಹೋಗಿ ನಿದ್ರೆಗೂ ಹೋದರೂ ಪರ್ವಾಗಿಲ್ಲ. ಸಹಜವಾಗಿ ನಿದ್ರೆಯಿಂದ ಎದ್ದಂತೆ ಮಾಮೂಲು ಸ್ಥಿತಿಗೆ ಬಂದುಬಿಡುತ್ತಾರೆ ಅಥವಾ ಡೀಪ್ ಸ್ಥಿತಿಯಲ್ಲಿ ಹಾಗೇ ಮುಂದುವರೆಸುತ್ತಿದ್ದರೂ ತಕ್ಕ ವಿಶ್ರಾಂತಿ ಪಡೆದ ನಂತರ ಆಟೋಮೇಟಿಕ್ಕಾಗಿ ಟ್ರಾನ್ಸ್‌ನಿಂದ ಮಾಮೂಲು ಸ್ಥಿತಿಗೆ ಬಂದುಬಿದುತ್ತಾರೆ.

**'ಸೆಲ್ಫ್ ಹಿಪ್ನಾಟಿಜಂ' ಮೂಲಕ ಅತೀತ ಶಕ್ತಿಗಳು ಸಾಧ್ಯವಾಗುತ್ತವೆಯಾ?**

'ಸೆಲ್ಫ್ ಹಿಪ್ನಾಟಿಜಂ' ಕಲಿತುಕೊಳ್ಳುವುದರ ಮೂಲಕ ತಮಗೆ ಯಾವುದೋ ಅತೀತ ಶಕ್ತಿಗಳು ಬರುವುದಾಗಿ ಕೆಲವರು ಭ್ರಮೆಯಲ್ಲಿರುತ್ತಾರೆ. ಹಿಂದಿನ ಜನ್ಮದ ವಿಷಯಗಳನ್ನು ತಿಳಿದುಕೊಳ್ಳಬಹುದೆಂದು, ಭವಿಷ್ಯತ್ ಬಗ್ಗೆ ಹೇಳಬಹುದೆಂದು, ಟೆಲೀಪತಿ ಸಾಧ್ಯವಾಗವುದೆಂದು ಕೆಲವರು ಹಿಪ್ನಾಟಿಸ್ಟರು ಸಹ ಪ್ರಚಾರ ಮಾಡುತ್ತಾರೆ. ಆದರೆ ವೈಜ್ಞಾನಿಕ ಸಂಶೋಧನೆಗಳಲ್ಲಿ ಇಂಥದ್ದು ಯಾವುದೂ ಸಾಬೀತಾಗಿಲ್ಲ. ಅಮೆರಿಕ ಸೈಕಿಕ್ ರಿಸೆರ್ಚ್‌ನವರು ಸಹ ಈ ವಿಷಯಗಳ ಬಗ್ಗೆ ಸೂಕ್ಷ್ಮವಾಗಿ ಸಂಶೋಧನೆಗಳನ್ನು ನಡೆಸುತ್ತಿದ್ದಾರೆ. ವ್ಯಕ್ತಿಗತವಾಗಿ ತನ್ನ ಹದಿನೈದು ವರ್ಷಗಳ ಅನುಭವದಲ್ಲಿ ಕೂಡಾ ಹಿಪ್ನಾಟಿಜಂ ಮೂಲಕ ಅತೀತ ಶಕ್ತಿಗಳು ಉಂಟಾಗುತ್ತದೆ ಅನ್ನೋ ಅಂಶ ಸಾಬೀತಾಗಲಿಲ್ಲ.

ಇದುವರೆಗೂ ಸೆಲ್ಫ್ ಹಿಪ್ನಾಟಿಜಂ ಅಂದರೆ ಏನೋ, ಆ ಸ್ಥಿತಿ ಹೇಗಿರುತ್ತದೋ ಅದರ ಬಗ್ಗೆ ಇರುವ ಅನುಮಾನ– ಭ್ರಮೆಗಳ ಕುರಿತಾಗಿ ತಿಳಿದುಕೊಂಡಿಲ್ಲ? ಇನ್ನು  ಆ ಸೆಲ್ಫ್ ಹಿಪ್ನಾಟಿಜಂ ಕಲಿತುಕೊಂಡು, ಅಭ್ಯಾಸ ಮಾಡುವುದರಿಂದ ಉಪಯೋಗವೇನೋ ತಿಳಿಯೋಣ.

**ಸೆಲ್ಫ್ ಹಿಪ್ನಾಟಿಜಂನಿಂದ ಉಪಯೋಗಗಳು**

ಸೆಲ್ಫ್ ಹಿಪ್ನಾಟಿಜಂ ಕಲಿಯುವುದರ ಮೂಲಕ ಅನೇಕ ಉಪಯೋಗಗಳಿವೆ. ಆದರೂ ಸೆಲ್ಫ್ ಹಿಪ್ನಾಟಿಜಂ ದೊಡ್ಡ ವಿಶೇಷವೇನೂ ಅಲ್ಲ. ಈ ಸ್ಥಿತಿಯನ್ನು ದಕ್ಷೆಯಿಂದ ಉಪಯೋಗಿಸಿಕೊಳ್ಳುವ ವಿಧಾನವೇ ಮುಖ್ಯ.

ನಿತ್ಯ ಜೀವನದಲ್ಲಿ ಹೊಂದುವ ಮಾನಸಿಕ ಗೊಂದಲಗಳು, ಬೇಸರ – ಮುಜುಗರ, ಕೋಪತಾಪಗಳಂಥ ಸಮಸ್ಯೆಗಳಿಂದ ವಿಮುಕ್ತಿ ಪಡೆದು ನೆಮ್ಮದಿಯನ್ನು ಪಡೆಯಬಹುದು ಏಕಾಗ್ರತೆ, ಜ್ಞಾಪಕಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು. ನಿದ್ರೆ ಬಾರದಿರುವುದು, ಕೆಟ್ಟ – ಭೀಕರ ಕನಸುಗಲಂಥ ಸಮಸ್ಯೆಗಳನ್ನು ಹೋಗಲಾಡಿಸಿಕೊಳ್ಳಬಹುದು. ವಿದ್ಯಾರ್ಥಿಗಳು ತಮ್ಮ ಓದಿನ ಬಗ್ಗೆ ಒಳ್ಳೆ ಆಸಕ್ತಿ, ಅಭಿರುಚಿಗಳನ್ನ ಏರ್ಪಡಿಸಿಕೊಳ್ಳಬಹುದು. ಪರೀಕ್ಷೆಗಳ ಬಗ್ಗೆ ಇರುವ ದುಗುಡವನ್ನು ಹೋಗಲಾಡಿಸಿಕೊಂಡು ಒಳ್ಳೆ ಏಕಾಗ್ರತೆಯಿಂದ, ಆತ್ಮವಿಶ್ವಾಸದಿಂದ ಅಂದುಕೊಂಡ ರೀತಿಯಲ್ಲಿ ಗೆಲುವು ಸಾಧಿಸಬಹುದು.

ಡಾಕ್ಟರ್‌ಗಳು, ಲಾಯರ್‌ಗಳು, ಪತ್ರಕರ್ತರು, ಇಂಜನೀರ್‌ಗಳು ಮುಂತಾದ ವಿವಿಧ ಕ್ಷೇತ್ರಗಳಲ್ಲಿನವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಉಂಟಾಗುವ ಯಾಗ್ಜಯಿಟೀ, ಟೆನ್ಷನ್‌ಗಳಿಂದ ಈ ಹಿಪ್ನಾಸಿಸ್ ಸ್ಥಿತಿಯನ್ನು ಹೊಂದುವುದರ ಮೂಲಕ ಒಳ್ಳೆ ಪ್ರಶಾಂತತೆಯನ್ನು ಹೊಂದಬಹುದು.

ಮಹಿಳೆಯರು ಸೆಲ್ಫ್ ಹಿಪ್ನಾಸಿಸನ್ನು ಕಲಿಯುವುದರ ಮೂಲಕ ಸಂಸಾರದಲ್ಲಿ ತಲೆದೋರುವ ಅನೇಕ ಮಾನಸಿಕಾಂದೋಲನಗಳಿಂದ ಒಳ್ಳೆ ರಿಲೀಫ್ ಪಡೆಯಬಹುದು. ಉತ್ತಮ ಮಾನಸಿಕ ಧೈರ್ಯವನ್ನು ಹೊಂದಬಹುದು. ಬಹಳ

ಮಂದಿ ಮಹಿಳೆಯರು ಹೆರಿಗೆ ಬಗ್ಗೆ ಭಯಪಟ್ಟಿರುತ್ತಾರೆ. ಅಂಥವರು ಹಿಪ್ನಾಸಿಸ್ ರಿಲ್ಯಾಕ್ಸೇಷನ್‌ನಲ್ಲಿ ಪಾಜಿಟಿವ್ ಸಜೆಷನ್ಸ್ ಮೂಲಕ ತಮ್ಮಲ್ಲಿನ ಭಯವನ್ನು ಮೀರಿ ಸುಖಪ್ರಸವ ಆಗುವಂತೆ ನೋಡಿಕೊಳ್ಳಬಹುದು. ಬಹಳ ಜನ ಯುವಕ ಯುವತಿಯರು ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ –ಕೀಳರಿಮೆಯಿಂದ ನರಳುತ್ತಿರುತ್ತಾರೆ. ತಾವು ಬೇರೆಯವರಿಗಿಂತ ಕೀಳು ಅನ್ನೋ ಭಾವನೆ ಅವರನ್ನು ನಿತ್ಯ ಕಾಡುತ್ತಲೇ ಇರುತ್ತದೆ. ಯಾವುದೇ ವಿಷಯದಲ್ಲೂ ಅವರು ಮುನ್ನಡೆಯಲಾರರು. ಆದರೆ ಅವರಲ್ಲಿ ಒಳ್ಳೆ ಆಲೋಚನೆಗಳು ಇರುತ್ತವೆ. ಅಷ್ಟೇ ಅಲ್ಲ ಬುದ್ಧಿ ತಿಳುವಳಿಕೆಗಳು ಸಹ ಹೆಚ್ಚಾಗಿಯೇ ಇರುತ್ತವೆ. ಇಷ್ಟೆಲ್ಲ ಇದ್ದರೂ ಆತ್ಮನ್ಯೂನತೆಯಿಂದ ಸಂಕಟಪಡೋರು ಸೆಲ್ಫ್ ಹಿಪ್ನಾಟಿಜಂನಿಂದ ತಮ್ಮಲ್ಲಿನ ನ್ಯೂನತಾಭಾವವನ್ನು ತೊಲಗಿಸಿಕೊಂಡು ಹೊಸ ಜೀವನಕ್ಕೆ ಶ್ರೀಕಾರ ಬರೆಯಬಹುದು.

ಕೆಲವು ಯುವಕ ಯುವತಿಯರು ನಿರಾಶೆ– ಹತಾಶೆಗಳಿಂದ, ಖಿನ್ನತೆಯಿಂದ ನರಳುತ್ತಿರುತ್ತಾರೆ. ಇವರು ಪ್ರತಿ ಸಣ್ಣ ವಿಷಯಕ್ಕೂ ಅತಿಯಾಗಿ ಸ್ಪಂದಿಸಿ ವಿಪರೀತವಾಗಿ ಬಾಧೆಪಡುತ್ತಿರುತ್ತಾರೆ. ಇದಕ್ಕೆ ಅನೇಕ ಕಾರಣಗಳು ನೆರವಾಗುತ್ತವೆ. ಆರ್ಥಿಕವಾಗಿ ನಷ್ಟ ಹೋಗುವುದು, ಶಿಕ್ಷಣ ವಿಷಯದಲ್ಲಿ ಉದ್ದೇಶಿತ ಪ್ರಗತಿ ಸಾಧಿಸಲಾರದೆ ಹೋಗುವುದು, ಪ್ರೇಮ ವ್ಯವಹಾರದಲ್ಲಿ ಸೋಲಿನ ಸವಿ ನೋಡುವುದು, ಪ್ರೀತಿ, ಅಭಿಮಾನ ಪಡೆಯಲಾರದೆ ಹೋಗುವುದು... ಹೀಗೆ ಅನೇಕ ಕಾರಣಗಳಿಂದ ಜೀವನದಲ್ಲಿ ಖಿನ್ನತೆಗೆ ಒಳಗಾಗಬಹುದು. ಇಂತಹ ಸಂದರ್ಭಗಳಲ್ಲಿ ಸೆಲ್ಫ್ ಹಿಪ್ನಾಟಿಜಂ ಮೂಲಕ ಒಳ್ಳೆ ಪ್ರಯೋಜನಗಳನ್ನು ಪಡೆಯಬಹುದು.

ಕೆಲ ವಿದ್ಯಾರ್ಥಿಗಳಲ್ಲಿ ಮುಂದೂಡುವ ಸ್ವಭಾವ ಇರುತ್ತದೆ. ಅಂದರೆ ನಾಳೆಯಿಂದ ಶುರು ಮಾಡೋಣ ಅನ್ನೋ ಧೋರಣೆಯಿಂದ ತಮ್ಮ ಓದನ್ನು ಆಗಾಗ್ಗೆ ಮುಂದಕ್ಕೆ ಹಾಕುತ್ತಿರುತ್ತಾರೆ. ಇಂತಹ ಸ್ವಭಾವದವರು ಕೂಡಾ ಸೆಲ್ಫ್ ಹಿಪ್ನಾಸಿಸ್ ಉಪಯೋಗಿಸಿಕೊಂಡು ಒಳ್ಳೆ ಫಲಿತಾಂಶವನ್ನು ಪಡೆಯಬಹುದು. ಹೆಚ್ಚುಮಂದಿ ಯುವಕ–ಯುವತಿಯರ ನಕರಾತ್ಮಕ ಆಲೋಚನೆಗಳಿಂದ ತಮ್ಮ ಜೀವನದಲ್ಲಿ ಅಸ್ತವ್ಯಸ್ತ ಮಾಡಿಕೊಳ್ಳುತ್ತಿರುತ್ತಾರೆ. 'ಇದು ನಮಗೆ ಕೆಲಸಕ್ಕೆ ಬರುವುದಿಲ್ಲ. ಇದರಿಂದ ಉಪಯೋಗವಿಲ್ಲ. ಈ ಕೆಲಸವನ್ನು ನಾನು ಸಾಧಿಸಲಾರೆ. ನನಗೆ ಅನುಕೂಲವಾಗುವುದಿಲ್ಲ" ಹೀಗೆ ಇರುವ ಆಲೋಚನಾ ಧೋರಣೆ ಎಲ್ಲ ವಿರುದ್ಧ ಭಾವನೆಗಳಿಂದ ತುಂಬಿರುತ್ತದೆ. ಇದರಿಂದಾಗಿ ಯಾವುದೇ ಕೆಲಸ ಮಾಡುವುದಕ್ಕೂ ಮುಂದಾಗುವುದಿಲ್ಲ. ಇಂಥವರು ಸಕಾರಾತ್ಮಕ ಆಲೋಚನೆ ಅಭ್ಯಾಸ ಮಾಡಬೇಕು. ಹೀಗೆ ಸಕಾರಾತ್ಮಕವಾಗಿ ಅವರ ಮನಸ್ಸು ಬದಲಾಯಿಸಿಕೊಳ್ಳುವುದಕ್ಕೆ ಸೆಲ್ಫ್ ಹಿಪ್ನಟಿಜಂ ಅನ್ನು ಉಪಯೋಗಿಸಿಕೊಳ್ಳಬಹುದು.

ಕೆಲ ಯುವಕರು ಕೆಟ್ಟ ಚಟಗಳಿಗೆ ಬಿದ್ದು ಒಳ್ಳೆ ಭವಿಷ್ಯತ್ತನ್ನು ಕೈಯಾರೇ ಹಾಳುಮಾಡಿಕೊಳ್ಳುತ್ತಿದ್ದಾರೆ. ಮುಖ್ಯವಾಗಿ ಧೂಮಪಾನ, ಮಧ್ಯಪಾನ, ಗುಟ್ಕಾ, ಪಾನ್ ಮಸಾಲ, ಡ್ರಗ್ಸ್‌ಗಳಿಗೆ ಅಡಿಯಾಳಾಗಿ ಹೋಗುತ್ತಿದ್ದಾರೆ. ಇಂತಹ ಸೆಲ್ಫ್ ಹಿಪ್ನಾಟಿಜಂ ಮೂಲಕ ಆ ಚಟಗಳಿಂದ ಬಿಡುಗಡೆ ಹೊಂದಬಹುದು.

ಇಷ್ಟೆ ಅಲ್ಲ, ಯುವ ಜನಾಂಗ ಒಳ್ಳೆ ಅಭ್ಯಾಸಗಳನ್ನು ಏರ್ಪಡಿಸಿಕೊಳ್ಳಬಹುದು. ಮುಖ್ಯವಾಗಿ ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಬಹುದು. ಹೀಗೆ ನಮ್ಮ ನಿತ್ಯ ಜೀವನದಲ್ಲಿ ಎದುರಾಗುವ ಅನೇಕ ಸಮಸ್ಯೆಗಳನ್ನು ಸೆಲ್ಫ್ ಹಿಪ್ನಾಟಿಜಂ ಮೂಲಕ ದಕ್ಷತೆಯಿಂದ ಎದುರಿಸಿ ಜೀವನವನ್ನು ಸುಖಮಯ ಮಾಡಿಕೊಳ್ಳಬಹುದು.

**ಸೆಲ್ಫ್ ಹಿಪ್ನಾಟಿಜಂ ಸ್ಥಿತಿ ಕಲ್ಪಿಸಿಕೊಳ್ಳುವುದು ಹೇಗೆ?**

ಸೆಲ್ಫ್ ಹಿಪ್ನಾಟಿಸಿಸ್ ಸ್ಥಿತಿಯನ್ನು ಕಲ್ಪಿಸಿಕೊಳ್ಳುವುದಕ್ಕೆ ಅನೇಕ ಮಾರ್ಗಗಳಿವೆ, ಇದರಲ್ಲಿ ನಿಮಗೆ ಯಾವ ಮಾರ್ಗದ ಮೂಲಕ ಹಿಪ್ನಾಟಿಸಿಸ್‌ನೊಳಗೆ ಹೋಗುವುದಕ್ಕೆ ಸುಲಭವಾಗಿರುತ್ತದೋ, ಆ ಮಾರ್ಗವನ್ನು ಆರಿಸಿಕೊಳ್ಳಬಹುದು. ಯಾವ ಮಾರ್ಗವಾದರೂ ನಿಮ್ಮ ಊಹಾಶಕ್ತಿ, ಬುದ್ಧಿ ಕೌಶಲಗಳು, ಮಾನಸಿಕವಾಗಿ ನಿಮ್ಮ ಆಸಕ್ತಿಯನ್ನು ಹಿಡಿದು ಅವಲಂಭಿತವಾಗಿರುತ್ತದೆ.

**ಕೀವರ್ಡ್ಸ್ ಅಂದುಕೊಳ್ಳುವುದರ ಮೂಲಕ**

ಈ ವಿಧಾನವನ್ನು ಅನುಸರಿಸಬೇಕಾದರೆ ನಿಮಗೆ ಒಂದೆರಡು ಬಾರಿ ಹಿಪ್ನಾಟಿಸ್ಟ್ ಸನಿಹದಲ್ಲಿರಬೇಕು. ಒಮ್ಮೆ ಹಿಪ್ನಾಟಿಸ್ಟ್‌ದಿಂದ ನೀವು ಹಿಪ್ನಾಟೈಜ್ ಆಗಬೇಕು. ಹಿಪ್ನಾಸಿಸ್‌ನಲ್ಲಿ ಇರುವಾಗ ನಿಮಗೆ ಹಿಪ್ನಾಟಿಸ್ಟ್ ಕೆಲವು ಈ ವರ್ಡ್ಸ್ ಕೊಡುತ್ತಾರೆ. ಆ ನಂತರ ನೀವು ಹಿಪ್ನಾಟಿಸ್ಟ್ ಸಹಾಯ ಇಲ್ಲದೇನೇ ಸರಿಯಾಗಿ ಆಕೀ ವರ್ಡ್ಸ್ ಅಂದುಕೊಳ್ಳುವುದರ ಮೂಲಕ ಪುನಃ ಸೆಲ್ಫ್ ಹಿಪ್ನಾಸಿಸ್ ಒಳಗೆ ಹೋಗುತ್ತಿರಿ.

ಮೊದಲು ಒಬ್ಬ ವ್ಯಕ್ತಿಯನ್ನು ತುಂಬಾ ಗಾಢವಾದ ಹಿಪ್ನಾಸಿಸ್ ಸ್ಥಿತಿಗೆ ಕರೆದೊಯ್ಯುತ್ತಾರೆ. ಆ ಸ್ಥಿತಿಯಲ್ಲಿ ಯಾವುದಾದರು ಕೀವರ್ಡ್ಸ್ ಅಂದರೆ 'ರಿಲಾಕ್ಸ್– ರಿಲಾಕ್ಸ್" ಅಂತಾಗಲಿ. 'ಆಲ್ಫಾ" ಅಂತಾಗಲೀ ಹೀಗೆ ಯಾವುದಾದರೂ ಕೆಲವು ಮಾತುಗಳನ್ನು ನೀವು ಹಿಪ್ನಾಸಿಸ್‌ಗೆ ಒಳಗಾಗುವಾಗ ಕಣ್ಣುಗಳನ್ನು ಮುಚ್ಚಿಕೊಂಡು ಅಂದುಕೊಂಡು ಪೋಸ್ಟ್ ಹಿಪ್ನಾಟಿಕ್ ಸಜೆಷನ್ ಕೊಡುತ್ತಾರೆ. ಆ ವ್ಯಕ್ತಿ ಯಾವಾಗಲಾದರೂ ಹಿಪ್ನಟೈಜ್ ಆಗಬೇಕೆಂದುಕೊಡರೇ ತಾನಾಗೇ ನೆಮ್ಮದಿಯಿಂದ ಕುಳಿತು ಕಣ್ಣುಗಳನ್ನು ಮುಚ್ಚಿಕೊಂಡು ಆ ಮಾತುಗಳನ್ನು ಉಚ್ಛರಿಸುವುದರಿಂದ ಹಿಪ್ನಾಸಿಸ್‌ನೊಳಗೆ ಹೋಗುತ್ತಾನೆ. ಆತನಿಗೆ ಅಗತ್ಯವೆನಿಸುವಷ್ಟು ವಿಶ್ರಾಂತಿ ದೊರೆತೊಡನೇ ಮತ್ತೆ ಎಚ್ಚರ ಸ್ಥಿತಿಗೆ ಬರುತ್ತಾನೆ.

ಶ್ರೀಧರ ಸ್ಮರಣೆ

# ಸದ್ಗುಣ ಸಾಗರ – ಶ್ರೀ ಗುರು ಶ್ರೀಧರ

–ಲೇ: ಶ್ರೀ ಜಿ. ಟಿ. ಶ್ರೀಧರಶರ್ಮ
9480473568

ಶೀಗೆಹಳ್ಳಿಯಲ್ಲಿ ಶ್ರೀ ಶಿವಾನಂದರು ಶ್ರೀ ಶ್ರೀಧರರ ಜಪ–ತಪ ಹಾಗೂ ಅನುಷ್ಠಾನಕ್ಕಾಗಿ ಹೊಸ ಗುಹೆಯೊಂದನ್ನು ಕಟ್ಟಿಸಿಕೊಟ್ಟರು. ಶ್ರೀ ಶಿವಾನಂದರ ಇನ್ನೋರ್ವ ಶಿಷ್ಯರಾದ ಶ್ರೀ ಶಂಕರಾನಂದರು ಆ ಸಮಯದಲ್ಲಿ ಮಠದಲ್ಲಿ ಇರಲಿಲ್ಲ. ಅನಂತರ ಬಂದ ಶಂಕರಾನಂದರು ಶ್ರೀಧರರ ತಪೋಗುಹೆಯನ್ನು ಬಹಳವಾಗಿ ಇಷ್ಟಪಡಲು ಅವರಿಗೆ ಆ ಗುಹೆಯನ್ನು ಬಿಟ್ಟುಕೊಟ್ಟು ತಾವು ಹೊರಗೆ ಅನುಷ್ಠಾನ ಮಾಡಲಾರಂಭಿಸಿದರು. ಆ ಸಂದರ್ಭದಲ್ಲಿ ಶ್ರೀ ಶ್ರೀಧರರು ಖೇಚರೀಯೋಗದ ಅಭ್ಯಾಸದಲ್ಲಿ ಮಗ್ನರಾಗಿದ್ದರು. ಈ ಯೋಗದ ಪ್ರಭಾವದಿಂದ ಶರೀರದಲ್ಲಿ ದಾಹ ಹೆಚ್ಚಾಗಿತ್ತು. ಇದನ್ನರಿತ ಮಠದವರು ಹಾಗೂ ಊರಿನವರು ಶ್ರೀ ಶ್ರೀಧರರಿಗೆ ಹಾಲು, ತುಪ್ಪ ಮುಂತಾದವುಗಳನ್ನು ಕಳುಹಿಸಲು ಆರಂಭಿಸಿದರು. ಊರಿನವರಿಂದ ಇವನ್ನೆಲ್ಲ ಸ್ವೀಕರಿಸಿದರೆ ತಾವಿರುವ ಮಠಕ್ಕೆ ಅಪಕೀರ್ತಿ ಬರಬಹುದೆಂದೆಣಿಸಿದ ಅವರು ಹತ್ತಿರದ ಅರಣ್ಯವನ್ನು ಸೇರಿ ಅಲ್ಲಿ ಕೆಲವು ರೀತಿಯ ಸೊಪ್ಪುಗಳನ್ನು ಸೇವಿಸತೊಡಗಿದರು. ಇವೆರಡೂ ಘಟನೆಗಳಿಂದ ಶ್ರೀಧರರ ಹೃದಯವೈಶಾಲ್ಯತೆ, ಸದ್ಭಾವ–ಸನ್ನಡತೆ ಹಾಗೂ ಅಪರಿಮಿತ ವೈರಾಗ್ಯದ ಒಂದು ಇಣುಕು ನೋಟವನ್ನು ನಾವು ಪಡೆಯಬಹುದು. ಆದ್ದರಿಂದಲೇ ಹೇಳುವುದು "ಸದ್ಗುಣಗಳ ಸಾಗರವಾದ ಶ್ರೀಧರರಿಗೆ ಶ್ರೀಧರರೇ ಸಮಾನರು".

ಶ್ರೀರಾಮ ಕಥಾಸಾರ.....

# ಸೀತಾನ್ವೇಷಣೆಯ ಸಿದ್ಧತೆ

ಲೇ:– ಬಸ್ತಿ ಸದಾನಂದ ಪೈ, ಸಾಗರ

ಸುಗ್ರೀವನು ಸ್ತ್ರೀಲೋಲನಾಗಿ ಅಂತಃಪುರದಲ್ಲಿಯೇ ಮನಸ್ಸುಳ್ಳವನಾಗಿ ತನ್ನ ಪತ್ನಿ ರುಮೆಯನ್ನೂ, ಬಹಳವಾಗಿ ಬಯಸಿದ್ದ ತಾರೆಯನ್ನೂ ಪಡೆದು ಕೃತಕೃತ್ಯನಾಗಿ ನಿರ್ಭೀತಿಯಿಂದ ಕ್ರೀಡಿಸುತ್ತಿದ್ದನು. ರಾಜಕಾರ್ಯಗಳನ್ನು ಮಂತ್ರಿಗಳಿಗೆ ಬಿಟ್ಟುಕೊಟ್ಟು ಕಾಮಾಸಕ್ತನಾಗಿದ್ದನು. ಇದನ್ನು ಕಂಡು ಹನುಮಂತನು, ಸೀತಾನ್ವೇಷಣದ ಕಾರ್ಯ ನೆನಪು ಮಾಡಿ, ರಾಜನೇ ರಾಮನ ಕಾರ್ಯಕ್ಕೆ ಮನಸ್ಸು ಮಾಡು. ಅಸಮಾನ ಮಹಾತ್ಮನಾದವನೂ, ದೀರ್ಘಕಾಲದ ತನಕ ಬಂಧು ಆಗತಕ್ಕವನೂ ಆದ ರಾಮನು ನಿನ್ನ ಕಾರ್ಯವನ್ನು ಹಿಂದೆಯೇ ಮಾಡಿದ್ದಾನೆ. ಅವನೀಗ ನಿನ್ನ ಪ್ರತಿಜ್ಞೆಯನ್ನು ಎದುರು ನೋಡುತ್ತಿದ್ದಾನೆ. ಕೋಟಿ ಕೋಟಿ ಕಪಿಗಳು ನಿನ್ನ ಅಧೀನದಲ್ಲಿರುತ್ತಾರೆ. ಆತನು ಹೇಳಿ ಕಳಿಸುವ ಮುನ್ನ ಕಾರ್ಯವನ್ನು ಪ್ರಾರಂಭಿಸು ಎಂದು ಸಲಹೆ ಮಾಡುತ್ತಾನೆ.

ಹನುಮಂತನ ಸಲಹೆಯಂತೆ ಸೇನಾಪತಿಯಾದ ನೀಲನನ್ನು ಕರೆದು ಎಲ್ಲಾ ದಿಕ್ಕುಗಳಿಂದಲೂ ಸಮಸ್ತ ಸೈನ್ಯವನ್ನು ಸೇನಾ ನಾಯಕರೊಂದಿಗೆ ಬರಮಾಡು. ಹದಿನೈದು ರಾತ್ರಿಗಳೊಳಗೆ ಯಾರು ಬಾರದಿರುವನೋ ಅವನಿಗೆ ಮರಣದಂಡನೆ. ಅಂಗದನೊಂದಿಗೆ ಹಿರಿಯ ಕಪಿಗಳ ಬಳಿಗೆ ಹೋಗಿ ಬಾ ಎಂದು ಆಜ್ಞೆ ಮಾಡಿ ಅಂತಃಪುರಕ್ಕೆ ಹೋಗುತ್ತಾನೆ.

ಮಳೆಗಾಲ ಕಳೆದ ನಂತರವೂ ಸುಗ್ರೀವನು ಸೀತಾನ್ವೇಷಣೆಯ ಬಗ್ಗೆ ಆಸಕ್ತಿ ವಹಿಸಿಲ್ಲ ಮಂತ್ರಿ ಪರಿವಾರದೊಡನೆ ವಿಹರಿಸುತ್ತಾ ಪಾನದಲ್ಲಿ ಆಸಕ್ತನಾಗಿ ನನ್ನನ್ನು ಮರೆತುಬಿಟ್ಟಿದ್ದಾನೆ. ವಾಲಿ ಹೋದ ದಾರಿಯಲ್ಲಿ ಹೋಗಬೇಡ ಎಂದು ಅವನನ್ನು ಎಚ್ಚರಿಸಿ ಬಾ ಎಂದು ರಾಮನು ಲಕ್ಷ್ಮಣನನ್ನು ಕಳುಹಿಸುತ್ತಾನೆ.

ಕೋಪಾವಿಷ್ಟನಾದ ಲಕ್ಷ್ಮಣನು ಕಿಷ್ಕಿಂಧೆಗೆ ಹೋಗಿ ಸುಗ್ರೀವನ ಅರಮನೆಯ ಕಡೆಗೆ ಹೋಗುತ್ತಾನೆ. ಲಕ್ಷ್ಮಣನನ್ನು ನೋಡುತ್ತಲೇ ಕಪಿಗಳೆಲ್ಲಾ ಆಯುಧಗಳನ್ನು ಹಿಡಿದು ನಿಲ್ಲುತ್ತಾರೆ. ಅದನ್ನು ಕಂಡ ಲಕ್ಷ್ಮಣನಿಗೆ ಇನ್ನೂ ಹೆಚ್ಚಿನ ಕೋಪ ಉಂಟಾಗುತ್ತದೆ. ಕಪಿಗಳು ಭಯದಿಂದ ಸುಗ್ರೀವನ ಅರಮನೆಗೆ ಹೋಗಿ ಲಕ್ಷ್ಮಣನು ಕೋಪಾವಿಷ್ಟನಾಗಿ ಬಂದಿರುವುದನ್ನು ತಿಳಿಸುತ್ತಾರೆ. ಸುಗ್ರೀವನು ತಾರೆಯೊಡನೆ ಆಸಕ್ತನಾಗಿದ್ದು ಅವರ ಮಾತನ್ನು ಗಮನಿಸುವುದಿಲ್ಲ. ಕಪಿ ವೀರರು ಮರಗಳನ್ನು ಹಿಡಿದು ಎಲ್ಲ ದಿಕ್ಕುಗಳನ್ನೂ ಆವರಿಸಿದ್ದನ್ನು ಕಂಡು ಇನ್ನಷ್ಟು ಕೋಪಗೊಳ್ಳುತ್ತಾನೆ ಲಕ್ಷ್ಮಣ.

ಉರಿಯುವ ಕಾಲಾಗ್ನಿಯಂತಿರುವ ಆತನ ಬಳಿಗೆ ಭೀತಿಯಿಂದಲೇ ಅಂಗದನು ಬರುತ್ತಾನೆ. ತಾನು ಬಾಗಿಲಿಗೆ ಬಂದಿರುವ ವಿಷಯ ಸುಗ್ರೀವನಿಗೆ ತಿಳಿಸುವಂತೆ ಅಂಗದನಿಗೆ ಹೇಳುತ್ತಾನೆ. ಅಂಗದನು ಅರಮನೆಗೆ ಹೋಗಿ ಚಿಕ್ಕಪ್ಪನಾದ ಸುಗ್ರೀವನಿಗೂ ತಾಯಿಯಾದ ತಾರೆಗೂ ಲಕ್ಷ್ಮಣನು ಕೋಪೋದ್ರಿಕ್ತನಾಗಿ ಬಂದಿರುವುದನ್ನು ತಿಳಿಸುತ್ತಾನೆ.

ನಾನು ರಾಮ ಲಕ್ಷ್ಮಣರಿಗೆ ಏನೊಂದೂ ಕೇಡು ಬಗೆದಿಲ್ಲ. ಯಾವ ಕೆಟ್ಟ ಮಾತನ್ನೂ ಆಡಿಲ್ಲ. ಆದರೂ ಲಕ್ಷ್ಮಣನು ಕೋಪದಿಂದ ಇಲ್ಲಿಗೆ ಬಂದಿರುವ ಕಾರಣವೇನೆಂದು ತಿಳಿಯುತ್ತಿಲ್ಲವೆಂದು ತನ್ನ ಮಂತ್ರಿಗಳೊಂದಿಗೆ ಸಮಲೋಚಿಸುತ್ತಾನೆ.

ಶರತ್ಕಾಲವು ಪ್ರಾರಂಭವಾಗಿದ್ದರೂ ನೀನು ಸೀತಾನ್ವೇಷಣಕ್ಕೆ ಮುಂದಾಗದಿರುವುದೇ ಲಕ್ಷ್ಮಣನ ಸಿಟ್ಟಿಗೆ ಕಾರಣ. ನಿನಗೆ ಹಿತವನ್ನುಂಟು ಮಾಡಲು ಇಂದ್ರನಿಗೆ ಸಮಾನವಾದ ಪರಕ್ರಮವನ್ನೂ ಹೊಂದಿದ್ದ ವಾಲಿಯನ್ನು ವಧಿಸಿದನು. ನೀನು ಮೈ ಮರೆತು

ರಾಮನ ಕಾರ್ಯಕ್ಕೆ ಮನಸ್ಸು ಮಾಡಲಿಲ್ಲ. ಆದ್ದರಿಂದ ಲಕ್ಷ್ಮಣನು ಕೋಪಾವಿಷ್ಟನಾಗಿ ಬಂದಿರುವುದು ಸಹಜ. ನೀನು ಅಂಗದನೊಡಗೂಡಿ ಆತನಿಗೆ ತಲೆಬಾಗಿ ನಮಸ್ಕರಿಸಿ ಆತನ ಅಣತಿಯಂತೆ ವರ್ತಿಸುವುದು ನಿನಗೆ ಉತ್ತಮ ಮಾರ್ಗ ಎಂದು ಹನುಮಂತನು ಸಲಹೆ ಮಾಡುತ್ತಾನೆ.

ಹನುಮಂತನ ಸಲಹೆಯಂತೆ ಸುಗ್ರೀವನು ಲಕ್ಷ್ಮಣನನ್ನು ಒಳಗೆ ಬರುವಂತೆ ದೂತರ ಮುಖಾಂತರ ಹೇಳಿ ಕಳುಹಿಸುತ್ತಾನೆ. ಲಕ್ಷ್ಮಣನು ಸುಗ್ರೀವನ ಅರಮನೆಯ ಸೊಬಗನ್ನು ನೋಡುತ್ತಾ ಏಳು ತೊಟ್ಟಿಗಳನ್ನು ದಾಟಿ ಅತ್ಯಂತ ಗೌಪ್ಯವಾದ ದೊಡ್ಡದಾದ ಅಂತಃಪುರದ ಬಳಿ ಬರುತ್ತಾನೆ. ಬೆಲೆಬಾಳುವ ಪೀಠಗಳಿಂದಲೂ ಚಿನ್ನ ಬೆಳ್ಳಿಗಳಿಂದ ನಿರ್ಮಿತವಾದ ಮಂಚಗಳನ್ನೂ ಕಾಣುತ್ತಾನೆ. ಪದಶುದ್ಧವಾದ ಅಕ್ಷರ ಯುಕ್ತವಾದ ತಾಳ ಲಯ ಬದ್ಧವಾದ ಮಧುರ ವೀಣಾ ವಾದನವು ಕೇಳುತ್ತದೆ.

ಲಕ್ಷ್ಮಣನು ಅಲ್ಲಿ ಸ್ತ್ರೀಯರನ್ನು ಕಂಡು ತನ್ನ ಸಚ್ಚಾರಿತ್ರ್ಯ ಸಲುವಾಗಿ ಹಿಂದೆಸರಿದು ಏಕಾಂತ ಪ್ರದೇಶದಲ್ಲಿ ನಿಲ್ಲುತ್ತಾನೆ. ಆತನ ಬಿಲ್ಲಿನಿಂದ ಹೊರಟ ಶಬ್ದವು ಎಲ್ಲಾ ದಿಕ್ಕುಗಳು ತುಂಬಿದವು. ಲಕ್ಷ್ಮಣನು ಕೋಪಗೊಂಡಿರುವುದನ್ನು ಅರಿತು ಸುಗ್ರೀವನು ಆಸನದಿಂದೇಳುತ್ತಾನೆ.

ಕೋಪೋದ್ರಿಕ್ತನಾದ ಲಕ್ಷ್ಮಣನನ್ನು ಮಾತಾಡಿಸಿ, ಸಮಾಧಾನ ಪಡಿಸುವಂತೆ ತಾರೆಗೆ ಹೇಳುತ್ತಾನೆ. ಮಹಾತ್ಮರಾದವರು ಹೆಂಗಸರ ವಿಚಾರದಲ್ಲಿ ಏನೊಂದೂ ಕ್ರೌರ್ಯಗಳನ್ನೆಸಗುವುದಿಲ್ಲ. ನೀನು ಅವನನ್ನು ಸಮಾಧಾನ ಪಡಿಸಿದ ನಂತರ ನಾನು ಆತನನ್ನು ಕಾಣುತ್ತೇನೆ ಎನ್ನುತ್ತಾನೆ.

ತಾರೆಯು ಮೈ ಬಗ್ಗಿಸಿಕೊಂಡು ತನ್ನ ಮುಂದೆ ಬರುತ್ತಿರುವುದನ್ನು ಕಂಡು ಕೋಪವನ್ನು ತಡೆದು ಮುಖತಿರುಗಿಸುತ್ತಾನೆ ಲಕ್ಷ್ಮಣ. ನಿನ್ನ ಆಜ್ಞೆಯನ್ನು ಯಾರೂ ಧಿಕ್ಕರಿಸಿಲ್ಲ. ಆದರೂ ನೀನು ಏತಕ್ಕೆ ಸಿಟ್ಟಾಗಿರುವೆ? ಎಂದು ಕೇಳುತ್ತಾಳೆ. ಸುಗ್ರೀವನು ಕಾಮಾಸಕ್ತನಾಗಿ ರಾಜ್ಯ ವ್ಯವಹಾರಗಳನ್ನು ಬಿಟ್ಟು ರಾಮನಿಗೆ ವಾಗ್ದಾನ ಮಾಡಿದ ನಾಲ್ಕು ತಿಂಗಳ ಗಡು ದಾಟಿದರೂ, ಆತನ ಕಾರ್ಯಕ್ಕೆ ಮನಸ್ಸು ಮಾಡದಿರುವುದನ್ನು ನೆನಪಿಸುತ್ತಾನೆ.

ಲಕ್ಷ್ಮಣ, ಧರ್ಮವನ್ನು ತಪಸ್ಸನ್ನು ಆಶಿಸುವ ಮಹರ್ಷಿಗಳೇ ಕಾಮದಲ್ಲಿ ಆಶೆಯಿಟ್ಟು ಮೋಹದಲ್ಲಿ ಕಟ್ಟುಬೀಳುತ್ತಾರೆ. ಅಂಥದ್ದರಲ್ಲಿ ಎಷ್ಟೋಕಾಲದಿಂದ ವಿರಹಿಯಾಗಿದ್ದ ಕಪಿರಾಜನು ಕಾಮಾಸಕ್ತನಾಗಿ ನನ್ನ ಸಂಪರ್ಕದಲ್ಲಿರುವನು. ಸ್ವಭಾವತಃ ಚಪಲ ಚಿತ್ತನಾದ ಈ ಕಪಿಯು ಅದರಲ್ಲೂ ರಾಜನಾದವನು ಕಾಮಾಸಕ್ತನಾಗದಿರಲು ಹೇಗೆ ಸಾಧ್ಯ. ಎಲ್ಲವನ್ನೂ ತಿಳಿದಿರುವ ನೀನು ನಿನ್ನ ಸಹೋದರನನ್ನು ಕ್ಷಮಿಸು ಎಂದು ಸಮಾಧಾನ ಪಡಿಸುತ್ತಾಳೆ.

ಸುಗ್ರೀವನು ಕಾಮಾಸಕ್ತನಾಗಿದ್ದರೂ ನಿನ್ನ ಕೆಲಸಕ್ಕಾಗಿ ಕಪಿಗಳಿಗೆ ಹಿಂದೆಯೇ ಆಜ್ಞಾಪಿಸಿದ್ದಾನೆ. ಅವನ ಆಜ್ಞೆಯಂತೆ ಲಕ್ಷ ಕೋಟಿ ಕಪಿಗಳು ಈಗಾಗಲೇ ಆಗಮಿಸಿದ್ದಾರೆ. ನೀನು ನಿನ್ನ ಸಚ್ಚರಿತೆಯನ್ನು ರಕ್ಷಿಸಿಕೊಂಡಿರುವೆ. ಸತ್ಪುರುಷರು ಇತರರ ಪತ್ನಿಯರನ್ನು ಮಿತ್ರಭಾವದಿಂದ ನೋಡುವರು. ನೀನು ಒಳಗೆ ಬಾ ಎಂದು ಸ್ವಾಗತಿಸುತ್ತಾಳೆ.

ತಾರೆಯ ಅನುಜ್ಞೆಯಿಂದಲೂ ತಾನು ಬಂದ ಕಾರ್ಯದ ಮಹತ್ವದಿಂದಲೂ ಪ್ರೇರಿತನಾಗಿ ಲಕ್ಷ್ಮಣನು ಒಳಗೆ ಪ್ರವೇಶಿಸುವನು. ಅಲ್ಲಿ ಬಂಗಾರದ ಉತ್ತಮಾಸನದಲ್ಲಿ ರುಮೆಯನ್ನು ಬಿಗಿದಪ್ಪಿ ಕುಳಿತಿರುವ ಸುಗ್ರೀವನನ್ನು ಕಂಡು ಲಕ್ಷ್ಮಣನು ಅಧಿಕವಾಗಿ ಕೋಪಗೊಳ್ಳುವನು.

ಶ್ರೀರಾಮನ ಕೆಲಸದಲ್ಲಿ ಸಹಾಯ ಮಾಡಲೆಂದೇ ದೇವತೆಗಳು ಕಪಿಗಳನ್ನು ಸೃಷ್ಟಿಸಿದರು. ಕಪಿಗಳು ಭೂಲೋಕದ ಪದ್ಧತಿಗಳನ್ನು ಅನುಸರಿಸುವುದು ಸಹಜವಾದರೂ ಮಾಡಬೇಕಾದ ಕೆಲಸದಲ್ಲಿ ಉದಾಸೀನತೆ ತೋರಬಾರದೆಂಬುದನ್ನು ನಿರೂಪಿಸುವುದು ಲಕ್ಷ್ಮಣನ ಕೋಪದ ಉದ್ದೇಶ.

ಮನುಷ್ಯನಿಗೆ ಎಷ್ಟೇ ಸಿಟ್ಟುಬಂದರೂ, ಎದುರಿಗೆ ಸ್ತ್ರೀಯರು ಬಂದರೆ, ಅವರ ಸಿಟ್ಟಿಗೆ ಸ್ವಲ್ಪ ಹಿಂಜರಿಕೆಯಾಗುತ್ತದೆ. ಕೇಡು ಮಾಡಬೇಕೆಂದಿರುವವರೂ ಗೊಣಗುತ್ತಾ ಹಿಂದೆ ಸರಿಯುವುದನ್ನು ಕಾಣುತ್ತೇವೆ. ಪರಸ್ತ್ರೀಯರನ್ನು ಸಜ್ಜನರು ಗೌರವದಿಂದ ಕಾಣುವುದು ಸಂಪ್ರದಾಯ. ಕೊಟ್ಟ ಮಾತನ್ನು ಉಳಿಸಿಕೊಳ್ಳುವುದು ಬಹುಮುಖ್ಯ. ಅದಕ್ಕೆ ಈಗ ಚಾಲ್ತಿಯಲ್ಲಿರುವುದು "ನನ್ನ ನಾಲಿಗೆ ಒಂದೇ" ಎಂಬ ಮಾತು ತನಗೆ ಉಪಕಾರ ಮಾಡಿದವನಿಗೆ ಎಂದಿಗೂ ದ್ರೋಹ ಬಗೆಯಬಾರದು. ಒಂದು ವೇಳೆ ದ್ರೋಹ ಬಗೆದರೆ ಅದರಿಂದ ಇಬ್ಬರೊಳಗೆ ಘರ್ಷಣೆಗೆ ಆಸ್ಪದವಾಗುತ್ತದೆ. ಈ ಎಲ್ಲಾ ವಿಚಾರಗಳು ಉದಾಹರಣೆಗಳೊಂದಿಗೆ ರಾಮಾಯಣದಲ್ಲಿ ನಿರೂಪಿತವಾಗಿದೆ ಎಂಬುದು ನಾವರಿಯಲೇಬೇಕಾದ ವಿಷಯವಲ್ಲವೇ?

**ವಿ.ಸೂ :–** ಭಕ್ತ ಮಹಾಜನಗಳೇ ಹಾಗೂ ಪ್ರಿಯ ಹೇಮಪುರ ಓದುಗರೇ ಬರೆಯುವ ಅಭಿರುಚಿ ಇರುವವರು ತಮ್ಮ ಸ್ವ-ರಚನೆಯ ಕತೆ ಕವನ ಲೇಖನ ಹಾಗೂ ಧಾರ್ಮಿಕ ಆಚಾರ ವಿಚಾರ ಈ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಲೇಖನವನ್ನು ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಆಯ್ಕೆ ಮಾಡಿ ಪ್ರಕಟಿಸಲಾಗುವುದು. ಇವುಗಳನ್ನು ಪ್ರತಿ ತಿಂಗಳ 15ನೇ ದಿನಾಂಕದೊಳಗೆ ತಲುಪಿಸಿ. ಇಮೇಲ್ ಅಥವಾ ವಾಟ್ಸಪ್‌ಗೆ ಸಹ ಕಳುಹಿಸಬಹುದು. ಇಮೇಲ್ hemapura.bangarmakki@gmail.com
ವಾಟ್ಸಪ್ +919449109299 [ಕಡ್ಡಾಯವಾಗಿ 'ಹೇಮಪುರ ಮಾಸ ಪತ್ರಿಕೆಗಾಗಿ' ಎಂದು ತಲೆಬರಹ ಇರಲಿ]



ಕನ್ನಡದ ಕಣ್ವ – ಬಿ. ಎಂ. ಶ್ರೀ

ಸಂಪ್ರದಾಯ

# ಬ್ರಹ್ಮತ್ವ, ಶೂದ್ರತ್ವಗಳ ವ್ಯತ್ಯಾಸವೇನು ?

–ಜಿ. ವಿ. ಶರ್ಮಾಪಂಡಿತ್

**"ಸುಜ್ಞಾನಮೇವ ಬ್ರಹ್ಮತ್ವಂ, ಅಜ್ಞಾನಂ ಶೂದ್ರಕಾರಣಂ"**
**ಬ್ರಹ್ಮತ್ವ ಶೂದ್ರತ್ವಗಳಿಗೆ ಜ್ಞಾನವೇ ಕಾರಣ!**

ಜ್ಞಾನವಂತಿಕೆಯಿಂದ ಬ್ರಾಹ್ಮಣತ್ವ ಸಿದ್ಧಿಸುತ್ತದೆ. ಅಜ್ಞಾನದ ಕಾರಣದಿಂದ ತಾನಾಗಿಯೇ ಶೂದ್ರತ್ವ ಬರುತ್ತದೆ. ಆದಕಾರಣ ಪ್ರತಿಯೊಬ್ಬರು ವಿದ್ಯಾರ್ಥಿಗಳಾಗಿ ಜ್ಞಾನಾರ್ಜನೆ ಮಾಡಬೇಕು, ಬ್ರಹ್ಮತ್ವವನ್ನು ಪಡೆಯಬೇಕು.

**"ಜನ್ಮನಾ ಜಾಯತೇ ಶೂದ್ರಃ ಕರ್ಮಣಾಜಾಯತೇ ದ್ವಿಜಃ"** ಎಂದು ಶಾಸ್ತ್ರವಾಣಿ. **ಶೂದ್ರತ್ವವು ಅನಾಯಾಸವಾಗಿ ಬರುತ್ತದೆ. ಬ್ರಹ್ಮತ್ವವನ್ನು ಸಾಧಿಸಿಕೊಳ್ಳಬೇಕಾಗುತ್ತದೆ.** ಅದಕ್ಕೇ ಬ್ರಾಹ್ಮಣರನ್ನು **"ದ್ವಿಜರು"** ಎನ್ನುತ್ತಾರೆ. ದ್ವಿಜರು ಎಂದರೇ "ಎರಡು ಬಾರಿ ಹುಟ್ಟಿದವರು" ಎಂದು ಅರ್ಥ. ಮೊದಲನೆಯ ಜನ್ಮತಾಯಿಯ ಗರ್ಭದಿಂದ ಆಗುತ್ತದೆ. ಎರಡನೆಯ ಜನ್ಮ ಜ್ಞಾನದಿಂದ ಆಗಬೇಕು. ಆವಾಗಲೇ **"ದ್ವಿಜ"**ನಾಗುತ್ತಾನೆ. ಅಂದರೆ ಕೇವಲ ಬ್ರಾಹ್ಮಣನಿಗೆ ಹುಟ್ಟಿದ ಮಾತ್ರದಿಂದ ಬ್ರಾಹ್ಮಣನಾಗುವುದಿಲ್ಲ. ಜ್ಞಾನಸಾಧನೆಯಿಂದಲೇ ಬ್ರಾಹ್ಮಣತ್ವವನ್ನು ಸಾಧಿಸಿಕೊಳ್ಳಬೇಕಾಗಿದೆ. ಆದರೇ ಒಂದು ವಿಷಯ! ಮಧ್ಯ ಮಾಂಸಾದಿಗಳನ್ನು ಸವಿಯುತ್ತಾ, ಪರುಷ ಭಾಷಣೆ ಮಾಡುತ್ತಾ, ಗುರುಹಿರಿಯರನ್ನು ಲೆಕ್ಕಿಸದೇ ಅನಾಚಾರಿಯಾಗಿ ಇರುವ ಜನರು ಯಾರೇ ಇರಲಿ ಬ್ರಹ್ಮತ್ವಸಿದ್ಧಿಗೆ ಅರ್ಹರಲ್ಲ.

ಕೇವಲ ಬ್ರಾಹ್ಮಣ ದ್ವೇಷದಿಂದ ಸಾಧಿಸುವುದೇನೋ ಇಲ್ಲ. ಮತ್ಸರದಿಂದ ಮನುಷ್ಯನು ಮಹಾತ್ಮನಾಗಲು ಸಾಧ್ಯವಿಲ್ಲ. ಶೂದ್ರನಾದ ವಾಲ್ಮೀಕಿಯಾಗಲೀ, ಕ್ಷತ್ರಿಯನಾದ ವಿಶ್ವಾಮಿತ್ರನಾಗಲೀ ಅನಾಯಾಸದಿಂದ ಬ್ರಹ್ಮತ್ವ ಸ್ಥಾನಕ್ಕೆ ಏರಲಿಲ್ಲ. ಕಠೋರದೀಕ್ಷೆಯಿಂದ, ಅಪಾರ ಜ್ಞಾನಾರ್ಜನೆಯಿಂದ ಬ್ರಹ್ಮತ್ವವನ್ನು ಸಾಧಿಸಿದ್ದಾರೆ.

ಪೂರ್ವಕಾಲದಲ್ಲಿ ಬ್ರಾಹ್ಮಣ ಜಾತಿಯವರು "ನಾವು ಬ್ರಾಹ್ಮಣ"ರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಇಂದಿನ ಸರಕಾರಗಳು ಬ್ರಾಹ್ಮಣರಿಗೆ ಎಳ್ಳಿನ ಕಾಳಷ್ಟು ಗೌರವವನ್ನೂ ನೀಡುತ್ತಿಲ್ಲ. ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತಿಲ್ಲ. ಋಣ ಸದುಪಾಯ ಮಾಡುತ್ತಿಲ್ಲ. ಎಲ್ಲಾ ರಂಗಗಳಲ್ಲಿ ಬ್ರಾಹ್ಮಣರು ವಂಚಿತರಾಗುತ್ತಿದ್ದಾರೆ. ರಾಜಕೀಯವಾಗಿ ಶೂದ್ರರು ಬೆಳೆದಿದ್ದಾರೆ. ವಿದ್ಯಾ ಉದ್ಯೋಗ ರಂಗಗಳಲ್ಲಿ ಮೀಸಲಾತಿ ಪಡೆದುಕೊಳ್ಳುತ್ತಿದ್ದಾರೆ. "ನಾವು ದಲಿತರು" ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ. ಸಂಖ್ಯಾಬಲದಿಂದ ರಾಜಕೀಯ ಕ್ಷೇತ್ರದಲ್ಲಿ ಉನ್ನತ ಸ್ಥಾನಗಳನ್ನು ಪಡೆಯುತ್ತಿದ್ದಾರೆ. ವಿದ್ಯಾರಂಗದಲ್ಲಿ ಬ್ರಾಹ್ಮಣ ವರ್ಣದವರು ಬೆಳೆದರೇ ರಾಜಕೀಯ ರಂಗದಲ್ಲಿ ಶೂದ್ರರು ಬೆಳೆಯುತ್ತಿದ್ದಾರೆ. ಈ ಸ್ಥಿತಿಯಲ್ಲಿ ಅವರು ಇವರನ್ನು, ಇವರು ಅವರನ್ನು ಅಧಿಕ್ಷೇಪಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಬಯಸಿದಂತೆ ಜನ್ಮ ಸಿಗುವುದಿಲ್ಲ.

**ಸರ್ವೇಷಾಂ ಸ್ವಸ್ಥಿರ್ಭವತು!**
**ಸರ್ವೇ ಜನಾಃ ಸುಖಿನೋಭವಂತು!!**

* * * * * * *

# ಬದುಕು ದರ್ಪಣ



ನಾನು ನನ್ನೊಳಗಿನ ನನ್ನನರಿಯಲು
ನಾನೆಂಬ ಅಹಂ ಬಿಡಬೇಕು
ನನ್ನೊಳಗಿನ ನನ್ನ ನಾ ಕಾಣಲು
ಅಂತರಂಗವ ಸ್ವಚ್ಛಗೊಳಿಸಬೇಕು
ಮಿಥ್ಯದಾ ಮುಖವಾಡ ತೋರಲು
ಸತ್ಯದಾ ದರ್ಪಣ ಹಿಡಿಯಬೇಕು
ಮಿಥ್ಯದಾ ಬದುಕು ಕೊನೆಗೊಳ್ಳಲು
ಸತ್ಯದಾ ಹಾದಿಯಲಿ ನಡೆಯಬೇಕು
ಬದುಕೆಂಬ ಚದುರಂಗದಾಟದೊಳು
ಸೈನಿಕನಾಗಿ ಸೆಣಸಿ ಅರಸನಾಗಿ ನಿಲ್ಲಬೇಕು
ಕಂಡ ಕನಸೆಲ್ಲ ನನಸಾಗಿಸಲು
ಪರಿಶ್ರಮದ ಮಾರ್ಗದೊಳು ಸಾಗಬೇಕು

ಕೈಗೊಂಡ ಕಾರ್ಯವೆಲ್ಲ ನಡೆಯಲು
ಶುದ್ಧ ಮನದಿ ಬದುಕಬೇಕು
ಕಷ್ಟ ಸುಖದ ಕಪ್ಪು ಬಿಳುಪಿನ ದಾರಿಯೊಳು
ಧೃಡವಾಗಿ ನಿಂತು ಮುನ್ನಡೆಯಬೇಕು
ನನ್ನ ಬಿಂಬವನು ನೋಡಲು
ದರ್ಪಣವು ಕಣ್ಣೆದುರಿರಬೇಕು
ನನ್ನೊಳಗಿನ ಪ್ರತಿಬಿಂಬ ನೋಡಲು
ಮನದ ಒಳಗಣ್ಣು ತೆರೆಯಬೇಕು
ಬಿಂಬ ಪ್ರತಿಬಿಂಬಗಳ ನಡುವಿನೊಳು
ಬದುಕ ಆಟ ಕೊನೆಗೊಳ್ಳಬೇಕು
ಆಡಿಸಿದಾತನ ಕೈಚಳಕದೊಳು
ಆಡಿ ಮಡಿಯಬೇಕು

– ಕುಮಾರಿ ಪ್ರತಿಭಾ ಭಟ್ಟ

# ಪರಮೇಶ್ವರನ ಇಪ್ಪತ್ತೈದು ಲೀಲೆಗಳು

**ಹನ್ನೆರಡನೇ ಲೀಲೆ – ವೃಷಭವಾಹನ ಲೀಲೆಯು**

ಶಿವನು ಒಂದೊಂದು ಕಲ್ಪಾವಧಿಯ ಕಾಲದಲ್ಲಿ ಸರ್ವ ಸಂಹಾರಕನಾಗಿ ತನ್ನ ಸ್ವತಂತ್ರ ಸ್ವರೂಪವನ್ನು ಸ್ಮರಿಸುತ್ತಾ ತಾನೊಬ್ಬನೇ ನಾಟ್ಯವಾಡಹತ್ತಿದನು. ಈ ತಾಂಡವ ನೃತ್ಯದಿಂದಾಗುವ ಚರಾಚರ ನಾಶವನ್ನು ನೋಡಿ ಭಯದಿಂದ ಅಯ್ಯೋ ! ನಾಶವಾಗುವದೆಂದು ಆ ಶಿವನ ಸೃಷ್ಟಿ ಧರ್ಮವು ವೃಷಭ ರೂಪವಾಗಿ ಶಿವನನ್ನು ಆಶ್ರಯಿಸಿತು .

ವೃಷಭಕಾರವು ಹೇಗಾಯಿತೆಂದು, ನಾಲ್ಕು ವೇದಗಳೇ ನಾಲ್ಕು ಪಾದಗಳು ಆರು ಶಾಸ್ತ್ರಗಳೇ ಷಟ್ಕರಣಗಳು, ಪ್ರಣವಾಕ್ಷುವಾದ ಓಂಕಾರವೇ ಶಿರಸು, ಮಂತ್ರಮೂಲದ ಶಿವಪಂಡಾಕ್ಷರಿಯೇ ಮುಖ, ಗಾಂಧರ್ವ ವೇದ ಧನುರ್ವೇದಗಳೇ ಎರಡು ಕಿವಿಗಳು, ತೀರ್ಥ ಸಮೂಹವೇ ಬಾಲವು. ಶಿವಾಗಮಗಳೇ ಪ್ರಾಣಗಳು ಮುಂತಾದ ರೂಪಗಳುಳ್ಳ ವೃಷಭನಾದನು.

ಶಿವನು ಅತ್ಯಂತ ಶ್ರೇಷ್ಠವಾದ ಆ ವೃಷಭನನ್ನು ನೋಡಿ ತನ್ನ ಧರ್ಮ ಸ್ವರೂಪವಾದ ವೃಷಭನೇ! ಭಯಪಡಬೇಡ. ನೀನು ಅಮರನಾಗು, ಅನಿವಾಸಿಯಾಗು, ಅತುಲ ಬಲಶಾಲಿಯೂ ಆಗು ಎಂದು ಹೇಳಿದುದಲ್ಲದೆ, ನೀನು ನನ್ನ ವಾಹನವಾಗು ನಾವೀರ್ವರೂ ಒಬ್ಬರನ್ನೊಬ್ಬರು ಆಶ್ರಯಿಸಿಕೊಂಡಿರೋಣ ಎಂದು ಹೇಳಿ ಶಿವನು ವೃಷಭ ವಾಹನನಾದನು. ಅದೇ ಶಿವನ ಹನ್ನೆರಡನೆಯ ವೃಷಭವಾಹನ ಲೀಲೆಯು. ಹೀಗಿ ವೃಷಭ ವಾಹನದಿಂದ ತಾಂಡವ ನೃತ್ಯವು ಬಂದಾಗ ಲೋಕ ಸಂಹಾರ ಕಾರ್ಯವು ನಿಂತ ಜನರು ನಿರ್ಭೀತರಾದರು, ಸಂತೋಷ ಚಿತ್ತರಾದರು. ತಮ್ಮ ನಾಶವನ್ನು ತಪ್ಪಿಸಿದರು ಧರ್ಮರೂಪಿ ವೃಷಭವನ್ನು ಪೂಜಿಸತೊಡಗಿದರೆಂಬಲ್ಲಿಗೆ ವೃಷಭ ಲೀಲೆಯು ಮುಗಿದುದು.

---

ಮಹಾಕ್ಷತ್ರಿಯ

# ವರವೋ? ಶಾಪವೋ

ಲೇ : ದೇವುಡು.

ವೃತ್ರವು ಹೋದನೆಂಬ ಸುದ್ದಿಯು ಅಮರಾವತಿಯಲ್ಲೆಲ್ಲ ಇರಲಿ, ಸ್ವರ್ಗಲೋಕದಲ್ಲೆಲ್ಲಾ ಮಿಂಚಿನ ವೇಗದಲ್ಲಿ ಹರಡಿತು. ಬರಿಯ ತರಗೆಲೆಗಳು ತುಂಬಿರುವ ಕಾಡಿನಲ್ಲಿ ಬೆಂಕಿಯು ಹರಡುವಂತೆ, ಒಣಗಿ ನಿಂತಿರುವ ಹುಲ್ಲಿನ ಕಾವಲು ಹೊತ್ತುಕೊಳ್ಳುವಷ್ಟು ವೇಗವಾಗಿ ಹರಡಿತು. ದಾನವರು ಹಾ ಹಾ ಎನ್ನುತ್ತಾ ಎದ್ದರು. ಅವರಿಗೆ ಅಮಲು ಇಳಿಯುವುದರಲ್ಲಿ, ಅನಿರೀಕ್ಷಿತವಾಗಿ, ಅಕಾರಣವಾಗಿ ಅವರು ತೇಜೋಹೀನರಾಗಿದ್ದಾರೆ. ಪಕ್ಕದಲ್ಲಿದ್ದ ಅಪ್ಸರೆಯರು ಕಾಣದಾಗಿದ್ದಾರೆ. ತೆರೆಯ ಹಿಂದೆ ಕುಳಿತು ಗಾನ ಮಾಡುತ್ತಿದ್ದ ಗಂಧರ್ವಗಣವು ಯಾವಾಗಲೋ ಓಡಿಹೋಗಿದೆ. ದಾನವೇಂದ್ರರಿದ್ದ ಅರಮನೆಗಳು ಏನೋ ಶೂನ್ಯವಾಗಿ, ಏನೋ ಬಿಕೋ ಎನ್ನುತ್ತ, ಅವರನ್ನು ನೋಡಿ ಹಾಸ್ಯಮಾಡುವಂತೆ, ವಿಕಟವಾಗಿ ನಗುತ್ತಿರುವಂತೆ ಕಾಣುತ್ತಿವೆ. ಅವರ ವೃತ್ರನು ಸತ್ತನೆಂದು ನಂಬಲು ಹೊರಗಿನ ಸಾಕ್ಷ್ಯವೇನೂ ಬೇಕಿಲ್ಲ. ಅವರ ಹೃದಯವನ್ನು ಆವರಿಸಿರುವ ಶೂನ್ಯತೆ, ಅವರಿಗೆ ಹುಟ್ಟಿರುವ ಗಾಬರಿ, ಅದೇ ಹೇಳುತ್ತಿದೆ. ದಾನವೇಂದ್ರರಿಗೆ ದಿಗಿಲಾಗಿ, ಆದಷ್ಟು ಬೇಗ ಅಮರಾವತಿಯಿಂದ ಹೊರಟುಹೋಗಬೇಕು ಎನ್ನಿಸಿದೆ. ನಿಂತಿದ್ದವರು ಕುಳಿತು ಬಿದ್ದುಕೊಳ್ಳುವುದಿರಲಿ ನಿಂತಂತೆಯೇ ಕುಸಿದು ಬಿದ್ದಂತಾಗಿದೆ. ಕೆಟ್ಟ ಕನಸಾಗಿ ಯಾವುದೋ ಪಿಶಾಚವು ಓಡಿಸಿ ಕೊಂಡು ಬರುತ್ತಿದ್ದರೆ, ಓಡುವುದಕ್ಕೆ ಕಾಲೂ ಬರದೆ ಇದ್ದಾಗ ಆಗುವಷ್ಟು ಭೀತಿಯಾಗಿ, ಅವರು ಅಲ್ಲಿಂದ ಏಳಲಾರರು ಎನ್ನುವಂತಾಗಿದೆ.

ದೇವತೆಗಳು ಕುಣಿಯುತ್ತಿದ್ದಾರೆ. ಅವರ ಉತ್ಸಾಹವು ಏನು! ಅಖಂಡವಾಗಿ ವೃಷ್ಟಿಯಾಯಿತೋ ಎನ್ನುವಂತೆ ಗಳಿಗೆಗಳಿಗೆಗೂ ಹೆಚ್ಚುತ್ತಿದೆ. ಎಲ್ಲರೂ, ಅಪ್ಸರೋಗಣಗಳು, ಗಂಧರ್ವರ ಗುಂಪುಗಳು, ಚಾರಣರ ತಂಡಗಳು, ಎಲ್ಲರೂ ಸೇರಿ ಇಂದ್ರವಿಜಯವನ್ನು ಹಾಡುತ್ತಿದ್ದಾರೆ. ಯಾವ ಯಾವ ದಾನವೇಂದ್ರರ ಅರಮನೆಯ ಮುಂದೆ ದೇವತೆಗಳು ಸುಳಿಯುವುದಕ್ಕೂ ಭೀತಿಪಡುತ್ತಿದ್ದರೋ, ಅಲ್ಲಿ ದೇವತೆಗಳು ಹಾವಳಿ ಮಾಡುತ್ತಿದ್ದಾರೆ. ವೃತ್ರೋತ್ಸವವೆಂದು ಬೆಳಗ್ಗೆ ದಾನವರು ಹಾರಾಡಿದ್ದುದನ್ನೆಲ್ಲ ನೆನೆಸಿಕೊಂಡು, ಅವರನ್ನು ಅಣಕಿಸುವಂತೆ ದೇವತೆಗಳು ಕುಣಿಯುತ್ತಿದ್ದಾರೆ. ಅಷ್ಟೇನು? ಸ್ವರ್ಗಲೋಕದ ಜಡಭೂಮಿಯೆಲ್ಲ ಸಂತೋಷದಿಂದೆದ್ದು ಕುಣಿಯುತ್ತಿರುವಂತೆ, ಆ ಸಂತೋಷವನ್ನು ಹುಲ್ಲಿನಿಂದ ಹಿಡಿದು ಕಲ್ಪವೃಕ್ಷದವರೆಗೆ, ಸಸ್ಯವರ್ಗವೆಲ್ಲವೂ ಅನುಮೋದಿಸಿ ತಾನೂ ನರ್ತನ ಭಾಗಿಯಾಗಿರುವಂತೆ ಆಗಿದೆ. ಅಷ್ಟೇನು? ಅರಮನೆಗಳಲ್ಲಿರಲಿ, ಇತರ ದೇವಮಂದಿರಗಳಲ್ಲಿಯೂ, ಗೋಡೆ, ಕಿಟಕಿ, ಕಂಬ, ಬಾಗಿಲುಗಳು ಮೊದಲುಗೊಂಡು ಆ ಉತ್ಸವದಲ್ಲಿ ಉತ್ಸಾಹದಿಂದ ಭಾಗವಹಿಸಿದಂತಿವೆ.

ಶುಕ್ರಾಚಾರ್ಯನು ಉತಮೋತ್ತಮವಾದ ಸುರೆಯನ್ನು ಪಾನಮಾಡಿ ಮತ್ತಿನ ಮತ್ತನಾಗಿ ಮಂಚದ ಮೇಲೆ ಮಲಗಿದ್ದನು. ಏಕೋ ಏನೋ ಥಟ್ಟನೆ ಎಚ್ಚರವಾಯಿತು. ಏನೋ ಸರ್ವನಾಶವಾದ ಒಂದು ಭಾಗವು ಆ ಮಂದಿರವನ್ನೆಲ್ಲ ತುಂಬಿ ಬಲವಂತವಾಗಿ ಆತನ ಹೃದಯವನ್ನು ಪ್ರವೇಶಿಸಿದಂತಿದೆ. ಪ್ರಹರಿಯನ್ನು ಕರೆದು 'ಏನು ಸುದ್ದಿ?' ಎನ್ನುತ್ತಾನೆ. ಪ್ರಹರಿಯು ಅಳುತ್ತ, ಬಿಕ್ಕಳಿಸುತ್ತ ವೃತ್ರ ವಧನಾದ ಸುದ್ದಿಯನ್ನು ತಿಳಿಸುತ್ತಾನೆ. ಶುಕ್ರಾಚಾರ್ಯನು ಎಚ್ಚರಕ್ಕಿಂತಲೂ ಎಚ್ಚರವಾಗಿ 'ಏನು?' ಎಂದು ಮಂಚದಿಂದ ಒಂದೇ

ಹಾರಿಗೆ ಹಾರಿ ಕೆಳಕ್ಕೆ ಬಂದು, ಪ್ರಹರಿಯನ್ನು ಹಿಡಿದು ಕುಲುಕುತ್ತಾ. "ಏನಂದೆ? ಇನ್ನೊಂದು ಸಲ ಹೇಳು" ಎಂದು ಎಲ್ಲವನ್ನೂ ಮತ್ತೆ ಕೇಳುತ್ತಾನೆ.

ಶುಕ್ರಾಚಾರ್ಯನು ಅಲ್ಲಿಯೇ ಇದ್ದ ಆಸನದಲ್ಲಿ ಧೊಪ್ಪನೆ ಬಿದ್ದುಕೊಂಡು ಏನಾಗಿದೆ ಎಂಬುದನ್ನು ತನ್ನ ದಿವ್ಯದೃಷ್ಟಿಯಲ್ಲಿ ನೋಡುತ್ತಾನೆ. ಚಿತ್ರಪಟದಲ್ಲಿ ತೋರುವಂತೆ ನಡೆದುದೆಲ್ಲವೂ ಮತ್ತೆ ಕಾಣುತ್ತದೆ. "ಹಾಗಾದರೆ ಇಂದ್ರನದೇನೂ ತಪ್ಪಿಲ್ಲ. ನೀನಾಗಿ ಬಲವಂತ ಮಾಡಿ ಅವನಿಂದ ಏಟು ತಿಂದು ಸತ್ತಿದ್ದೀಯೇ. ಅಯ್ಯೋ! ವೃತ್ತ, ನಿನಗೇಕೆ ಈ ದುರ್ಬುದ್ಧಿ ಬಂತು? ಅಥವಾ ಈ ದಿನ ಬೆಳಿಗ್ಗೆ ನಾನೇಕೆ ಏನಾಗಬಹುದು ಎಂಬುದನ್ನು ನೋಡಲಿಲ್ಲ? ಆಯ್ಯೋ, ಸುರಾ ಮೋಹವೇ ನೀನು ಎಂತಹ ಕೈಕೊಟ್ಟೆ! ನಾನೇಕೆ ಇಂದು ಈ ಅಸುರಸ್ವಭಾವಕ್ಕೆ ವಶನಾದೆ? ಅಥವಾ ನನ್ನನ್ನು ಮೋಸಮಾಡಿ ನಿಯತಿಯು ಈ ಕಾರ್ಯವನ್ನು ಸಾಧಿಸಿರಬೇಕು. ಹಿಂದೆ ನಮ್ಮ ಪಿತಾಮಹಿಯು ಶಾಪಕೊಟ್ಟಂತೆ ನಾನೂ ಶಾಪಕೊಡಲೇ? ಅಪರಾಧವಿಲ್ಲದೆ ಶಾಪವನ್ನೆಂತು ಕೊಡಲಿ?" ಎಂದು ಕಣ್ಣಿಂದ ನೀರು ಧಾರಳವಾಗಿ ಸುರಿಯುತ್ತಿರಲು, ಒಂದು ಗಳಿಗೆ ಮೌನವಾಗಿ ಕುಳಿತ್ತಿದ್ದನು.

ಮತ್ತೆ ತನ್ನಷ್ಟಕ್ಕೆ ತಾನೇ ನುಡಿದುಕೊಂಡನು; " ಸಂಜೀವಿನಿ ವಿದ್ಯಾಬಲದಿಂದ ಅವನನ್ನು ಬದುಕಿಸೋಣವೆಂದರೆ, ಆ ಶರೀರವನ್ನು ರಚಿಸಿದ್ದ ಪಂಚಭೂತಗಳೆಲ್ಲ ವಿಘಟಿತವಾಗಿ ಹೋಗಿವೆ. ಇನ್ನು ಉಳಿದಿರುವುದು ಅಂತಃಕರಣ ವಿಶಿಷ್ಟವಾದ ಆ ವೃತ್ರನ ನಾಮವೊಂದು. ಅದಕ್ಕೆ ಬಲವನ್ನು ಕೊಟ್ಟರೂ ಅದು ವಿಕಾರವಾದ ರೂಪವನ್ನು ಮಾತ್ರ ಪಡೆಯಬಲ್ಲದು. ಮತ್ತೆ ತ್ವಷ್ಟ್ರುವಿನ ಬಳಿಸಾರಬಾರದೇಕೆ? ನಾನು ಹೋಗಬಾರದು. ಆತನೇ ಸೃಷ್ಟಿಸಿದ ಕೃತ್ಯವನ್ನೇ ಕಳುಹಿಸೋಣ, ಆತನು ಬೇಕೆಂದರೆ ಮತ್ತೆ ಅದಕ್ಕೆ ರೂಪವನ್ನು ಕೊಡಬಲ್ಲ" ಎಂದು, ಮಂತ್ರಪುನಶ್ಚರಣ ಮಾಡಿ, ಆ ಪ್ರೇತವನ್ನು ಕರೆದನು. ಸೂಕ್ಷ್ಮವಾದ ರೂಪದಲ್ಲಿ ಪ್ರೇತವು ಬಂತು.

ಶುಕ್ರನೇ ಮೊದಲು ಮಾತನಾಡಿಸಿದರು; "ಏನು ವೃತ್ರ? ಏಕೆ ಹೀಗೆ ಮಾಡಿದೆ?"

ಪ್ರೇತವು ನುಡಿಯಿತು; "ಆಚಾರ್ಯ, ಅದೇಕೆ ಹೀಗೆ ಮಾಡಿದನೆಂದು ನನಗೂ ತಿಳಿಯದು, ಇಂದ್ರನು ಬೇಡಬೇಡವೆಂದರೂ ಬಿಡದೆ, ನಾನೇ ಬಲವಂತ ಮಾಡಿ ಅವನಿಂದ ಹೊಡೆಸಿಕೊಂಡೆ. ಆದರೆ, ಆಚಾರ್ಯ, ಇಂದ್ರನದೊಂದು ಅಪರಾಧವಿದೆ, ಒಂದು ದ್ರೋಹವಿದೆ. ಯಾವುದೋ ಅಜ್ಞಾತವಾದ ಆಯುಧವು ಅದರಲ್ಲಿತ್ತು. ನಾನು ನೊರೆಯಿಂದ ಹೊಡೆ ಎಂದೆ ದಿಟ. ಆದರೆ ಅದರಲ್ಲಿ ಆಯುಧವಿತ್ತು. ಅದೇ ನನ್ನನ್ನು ಕೊಂದುದು. ಮುಖ್ಯ ಎಲ್ಲವೂ ಸೇರಿತು. ನನಗೆ ಸೋಲಾಗಿ ಸಾಯುವ ಕಾಲ ಬಂದಿತು".

ಶುಕ್ರಾಚಾರ್ಯನು ಕೇಳಿದನು; "ಈಗ ಏನು ಮಾಡಬೇಕೆಂದಿರುವೆ?"

"ಸಾಧ್ಯವಾದರೆ, ಆ ಇಂದ್ರನನ್ನು ಹಿಡಿದು ಬಾಯಿಗೆ ಹಾಕಿಕೊಂಡು ಅಗಿದು ಬಿಟ್ಟೇನೆ. ನಾನಿನ್ನೂ ಸತ್ತಿಲ್ಲ. ಆದರೆ, ಪಂಚಭೂತಗಳನ್ನು ಕೊಟ್ಟು ನನಗೆ ಶರೀರವನ್ನು ಕೊಡುವವರು ಬೇಕಲ್ಲ? ಅದಿಲ್ಲದೆ, ನಾನು ಏನು ಮಾಡಲಿ? ಗಳಿಗೆ ಗಳಿಗೆಗೂ ಒಂದೊಂದು ರೂಪ ಮಾಡಿಕೊಂಡು ಅವನನ್ನು ಹೆದರಿಸಿ ಸಾಯಿಸಬೇಕು, ಅಷ್ಟೇ".

"ಹುಂ! ದಾನವ ಸಾಮ್ರಾಜ್ಯವು ಕಲ್ಪಾಂತಸ್ಥಾಯಿಯಾಗುವುದೆಂದು ನಾನು ಹಿಗ್ಗುತ್ತಿದ್ದೆ, ಏನೋ ಮೋಸವಾಯಿತು. ಆಗಲಿ, ನನ್ನ ಉಪದೇಶದಿಂದ ನೀನಿನ್ನೂ ಕರಗದಿರುವೆ. ಈಗಲೂ ನನ್ನ ಮಾತು ಕೇಳು, ತ್ವಷ್ಟ್ರುವನ್ನೇಕೆ ಹೋಗಿ ಕೇಳಬಾರದು! ನೀನೇ ಹೋಗಿ ಆತನನ್ನು " ನನಗೆ ಭೌತಿಕ ದೇಹವನ್ನು ಕೊಡು" ಎನ್ನು ಶುಕ್ರಾಚಾರ್ಯನಿಗೆ ಎಡಗಣ್ಣು ಅದುರಿತು. ಕೊಡಲೇ ಹೇಳಿದನು; "ಶಕುನವು ಚೆನ್ನಾಗಿಲ್ಲ. ತಡೆ, ನಾನೇ ಸ್ವತಂತ್ರಿಸಿ ಸರಸ್ವತಿಯನ್ನು ಕರೆದು ಕೇಳುವೆನು. ನೀನು ಹೇಗೆ ಸತ್ತೆ ಎಂದು ತಿಳಿಯುವೆನು" ಶುಕ್ರನು ಧ್ಯಾನಸ್ಥನಾದನು, ಸರಸ್ವತಿಯು ಬಂದಳು. ಶುಕ್ರನು ಕೇಳಿದನು; "ದೇವಿ, ಇಂದ್ರನಿಂದ ಹತನಾದುದು ಹೇಗೆ?"

ದೇವಿಯು ನಕ್ಕು ಹೇಳಿದಳು; "ಅದೊಂದು ಸಣ್ಣ ವಿಷಯ. ವ್ಯಾಕರಣವು ವೇದಾಂಗ, ಅದರಲ್ಲಿ ಸ್ವರವು ಸಮಾಸವನ್ನು ಬೇರೆ ಮಾಡುವುದು ಎಂದು ಹೇಳಿರುವುದನ್ನೇಕೆ ಮರೆತೆ? ತ್ವಷ್ಟ್ರುವು ಇಂದ್ರನಿಗೆ ಶತ್ರುವಾಗಬೇಕೆಂದು ಸಂಕಲ್ಪಿಸಿದನು. ನಾನು ಸ್ವರಭೇದವನ್ನು ಮಾಡಿ ಇಂದ್ರನ ಶತ್ರುವಾಗುವವನು ಹುಟ್ಟುವಂತೆ ಮಾಡಿದೆನು. ಅದೇಕೆ ಎನ್ನುವೆಯಾ? ಅದನ್ನು ಹೇಳುವೆನು ಕೇಳು. ಇಂದ್ರನು ಮನ್ವಂತರವೆಲ್ಲ ಇರಬೇಕಾದವನು. ಆತನಿಗೆ ಅಪಾಯ ಬಂದಾಗ ನಾವು ಯಾರೂ ಸುಮ್ಮನಿರುವುದು ಸಾಧ್ಯವಿಲ್ಲ. ಅದರಿಂದ ಹೀಗಾಯಿತು. ಇದು ನೀನು ಕೇಳಿದೆಯಾಗಿ ಹೇಳಿದೆ. ಇನ್ನು ಬಿಡು, ನಾನು ಹೋಗುವೆನು?" ಎಂದು ಆಕೆಯು ಹೊರಟುಹೋದಳು.

ಶುಕ್ರನು " ದೇವತೆಗಳ ಮೋಸ! ಏನು ಮಾಡಬೇಕು? " ಎಂದು ಯೋಚಿಸಿ " ವೃತ್ರ, ವ್ಯುತ್ಕ್ರಮವಾದರೂ ಚಿಂತೆಯಿಲ್ಲ. ಹೀಗೆ ಮಾಡು" ಎಂದು ಏನೋ ರಹಸ್ಯವಾಗಿ ಬೋಧಿಸಿ, "ನಾನು ಇನ್ನು ಇಲ್ಲಿರುವಂತಿಲ್ಲ" ಎಂದು ಅವಸರ ಅವಸರವಾಗಿ, ತನ್ನ ಪರಿಹಾರವನ್ನು ಕಟ್ಟಿಕೊಂಡು ಪಾತಾಳಕ್ಕೆ ಹೊರಟುಹೋದನು.

ಹೋಗುವಾಗ "ಇನ್ನು ಮುಂದೆ ಭಾರ್ಗವರ ಅನುಗ್ರಹವನ್ನು ಪಡೆಯದವನು ಎಂದು ಇಂದ್ರನಾಗುವನೋ ನೋಡೋಣ ಎಂದುಕೊಂಡು ಹೋದನು. ಅದು ದೇವತೆಗಳಲ್ಲಿ ಅನೇಕರಿಗೆ ಕೇಳಿಸಿತು. ಆದರೂ ಯಾರೂ ಅದನ್ನು ಗಮನಿಸಲಿಲ್ಲ.

ದಾನವರೂ ಆದಷ್ಟು ಬೇಗ ಅಮರಾವತಿಯಿಂದ ಸ್ವರ್ಗಲೋಕದಿಂದ ಪಾತಾಳಕ್ಕೆ ಹೊರಟುಹೋದರು. ಹೋಗುವವರನ್ನು ದೇವತೆಗಳು ಯಾವ ರೀತಿಯಿಂದಲೂ ಹಿಂಸೆಮಾಡಲಿಲ್ಲ. ದೇವರಾಜನ ಅಪ್ಪಣೆ ಹಾಗಿತ್ತು.

ಬದುಕಲ್ಲೊಂದಿಷ್ಟು ಆಪ್ತ ಮಾತುಗಳು

# ಮಾನಸಿಕ ಶಕ್ತಿ

ಲೇ : ಬಿ. ಎನ್. ರಮೇಶ ಬೊಂಗಾಳೆ.

ಮನುಷ್ಯ ದೈವಾಂಶ ಸಂಭೂತನೇನಲ್ಲ. ಹಾಗೂ ಆತನಿಗೆ ಶಾಶ್ವತ ಭವಿಷ್ಯವಿದೆಯೆನ್ನುವುದು ಬರೀ ಭ್ರಮೆ. ಆತ ತನ್ನ ಮಾತು ಮತ್ತು ಬುದ್ಧಿಯ ಸಾಮರಸ್ಯದಿಂದ ಅನೇಕ ವಿಸ್ಮಯಕಾರಿ ಕೆಲಸಗಳನ್ನು ಮಾಡಲು ಕಲಿತಿರುವ ಒಂದು ಪ್ರಾಣಿ ಅಥವಾ ಒಂದು ಸೂಕ್ಷ್ಮ ಯಂತ್ರ. ಆತ ಪ್ರಾಣಿ ಅಥವಾ ಯಂತ್ರವೆಂದು ನಿಖರವಾಗಿ ಹೇಳಲೂ ಆಗುವುದಿಲ್ಲ. ಏಕೆಂದರೆ ಪಂಪ–ಕುವೆಂಪುರವರಂತಹ ಕಾವ್ಯವಾಗಲಿ, ಶೇಕ್ಸ್‌ಪಿಯರ್ ಬರೆದಂತಹ ನಾಟಕಗಳಾಗಲೀ ಅಥವಾ ಸುಬ್ಬುಲಕ್ಷ್ಮೀ ಬಿಸ್ಮಿಲ್ಲಾಖಾನರ ಸಂಗೀತವಾಗಲಿ ಹುಟ್ಟುಹಾಕಲು ಪ್ರಾಣಿ ಅಥವಾ ಯಂತ್ರದಿಂದಾಗಲೀ ಸಾಧ್ಯವಿಲ್ಲವಲ್ಲ!

ನಮ್ಮ ಬಗ್ಗೆ ನಾವು ಒಳ್ಳೆಯ ಅಭಿಪ್ರಾಯವೊಂದನ್ನು ಹೊಂದಿರಬೇಕು. ಎದೆಯುಬ್ಬಿಸಿಕೊಂಡು ಕೆಚ್ಚೆದೆಯೊಂದಿಗೆ ಮುನ್ನೆಡೆದು ಬದುಕಿನೊಂದಿಗೆ ಸ್ನೇಹ ಬೆಳೆಸಬೇಕು. ನಾವು ಪಶು ಮತ್ತು ಯಂತ್ರಕ್ಕಿಂತಲೂ ಮಹಾನರಾಗಿದ್ದೇವೆ. ನಾವು ಸೋಲುವ ದಾರಿಯಲ್ಲಿ ನಡೆಯುತ್ತಿಲ್ಲ. ನಾವು ಅಪರಾಜಿತರು. ಅಷ್ಟೇ ಅಲ್ಲದೇ ಭಗವಂತನ ಆಶೀರ್ವಾದದಿಂದ ನಾವು ಆತನ ಮೂಲಕವೇ ರಚನೆಯಾಗಿರುವ ವಿಶ್ವದಲ್ಲಿ ಎಲ್ಲಕ್ಕಿಂತಲೂ ಉತ್ತಮರೆನ್ನಿಸುವ ಮಾನವರಾಗಬಹುದು. ನಾವು ಅದರ ಮೇಲೆ ನಂಬಿಕೆ ಇಡಬೇಕು, ಇಡಬಲ್ಲೆವು.

ಮನುಷ್ಯ ಸ್ವತ: ಶಕ್ತಿಶಾಲಿ ಅಥವಾ ಮಹಾನನಾಗಿರುವುದಿಲ್ಲ. ನಿಜವಾದ ಅರ್ಥದಲ್ಲಿ ಅವನೊಳಗೆ ಮಹಾನತೆಯ ತತ್ತ್ವಗಳು ಆಂತರಿಕವಾದ ರೂಪದಲ್ಲಿ ನೆಲೆಸಿರುತ್ತವೆ. ಮಾನಸಿಕ ಶಕ್ತಿಯನ್ನು ಕುರಿತಾಗಿ ವಿವೇಕಾನಂದರು ಒಂದೆಡೆ–”ಮನುಷ್ಯನು ಅಭ್ಯಾಸದಂತೆ ತನ್ನಲ್ಲಿರುವ ಶಕ್ತಿಯ ಸಣ್ಣ ಭಾಗವನ್ನು ಬಳಸಿಕೊಳ್ಳುತ್ತಾನೆ ಹಾಗೂ ಅದರ ಬಳಕೆಯನ್ನಾತ ಉಪಯುಕ್ತವಾದ ಪರಿಸ್ಥಿತಿಗಳಲ್ಲಿ ಮಾಡಬಲ್ಲವನಾಗಿದ್ದಾನೆ ಎಂದಿದ್ದಾರೆ. ಇತ್ತೀಚಿಗೆ ಓರ್ವ ವಿಜ್ಞಾನಿ ಹೇಳುವಂತೆ ಸಾಮಾನ್ಯ ವ್ಯಕ್ತಿ ತನ್ನ ಬುದ್ಧಿಮತ್ತೆಯ ಶೇಕಡಾ ಹತ್ತರಷ್ಟು ಶಕ್ತಿಯನ್ನಷ್ಟೇ ಬಳಸುತ್ತಾನೆ.

ಸ್ವಲ್ಪ ಯೋಚಿಸೋಣ. ನಮ್ಮ ಮಾನಸಿಕ ಶಕ್ತಿಯ ಶೇಕಡಾ ಐವತ್ತರಷ್ಟು ಭಾಗವನ್ನು ನಾವು ಬಳಸಿದ್ದೇ ಆದರೆ ನಮ್ಮ ಬದುಕನ್ನು ಎಂತಹ ಉನ್ನತ ಮಟ್ಟಕ್ಕೆ ಕೊಂಡೊಯ್ಯಬಹುದಲ್ಲವೇ? ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಬಳಸದೇ ಇರುವ ಶಕ್ತಿಯ ಅಗಾಧವಾದ ಭಂಡಾರದ ಪೆಟ್ಟಿಗೆಯಿದೆ. ಅದನ್ನು ತೆರೆದು ನಮ್ಮ ಬುದ್ಧಿ ಮತ್ತು ವ್ಯಕ್ತಿತ್ವದೊಳಗೆ ಪ್ರವಹಿಸಿಕೊಳ್ಳುವಂತಾಗಬೇಕು.

ಧರೆಗಿಳಿದ ದಿವ್ಯತೇಜ

# ಶ್ರೀಬಲಿ ಗ್ರಾಮದಲ್ಲಿ ಶಿಷ್ಯ ಲಾಭ

ಲೇ : ಲ. ನ. ಶಾಸ್ತ್ರೀ

ಶ್ರೀಬಲಿ ಗ್ರಾಮದ ಮಹಾವಿದ್ವಾಂಶರಾದ ಪ್ರಭಾಕರ ಭಟ್ಟರು ಆಚಾರ್ಯರನ್ನು ಪ್ರತ್ಯೇಕವಾಗಿ ಸಂದಿಸಿ ಯತಿವರ್ಯ ತಾವು ಶಿಷ್ಯರೊಡನೆ ಒಮ್ಮೆ ನಮ್ಮ ಗೃಹಕ್ಕೆ ಬಿಕ್ಷೆಗೆ ದಯಮಾಡಿಸಬೇಕು ಎಂದು ಕೋರಿಕೊಂಡರು. ಕಾಶಿಯಿಂದ ಹೊರಟಾಗಿನಿಂದ ಆಚಾರ್ಯರ ಪರಿವಾರವು ಬೆಳೆಯುತ್ತಾ ಬಂದಿತ್ತು. ಜನ ಸದಾ ಅವರನ್ನು ಹಿಂಡಾಗಿ ಅನುಸರಿಸುತ್ತಾ ಇದ್ದರು. ಕೆಲವರು ಅವರಲ್ಲಿ ವಿದ್ಯಾರ್ಜನೆಗಾಗಿ ಬರುತ್ತಲು ಇದ್ದರು. ಹೀಗೆ ಪರಿವಾರದಲ್ಲಿ ನೂರಾರು ಜನ ಇದ್ದುದ್ದರಿಂದ ಆಚಾರ್ಯರ ಸೇವೆ ಸತ್ಕಾರಗಳಿಗೆ ಆಯಾ ಸೀಮೆಯ ರಾಜರು ಪಾಳೆಗಾರರು ಶ್ರೀಮಂತರು ಸೂಕ್ತ ವ್ಯವಸ್ಥೆ ಮಾಡುತ್ತಿದ್ದರು. ಗಾಡಿಗಳು ಎತ್ತುಗಳು, ಕುದುರೆಗಳು, ಪಲ್ಲಕ್ಕಿಗಳು ಎಲ್ಲವೂ ಸಿದ್ಧವಾಗಿರುತ್ತಿದ್ದವು. ಬೆಂಗಾವಲಿಗಾಗಿ ರಾಜರು ತಮ್ಮ ಸೈನ್ಯವನ್ನು ಕೊಡುವುದಾಗಿ ವಿನಂತಿಸಿದ್ದೂ ಉಂಟು. ಆಚಾರ್ಯರು ಬೆಂಗಾವಲಿಗಾಗಿ ಯಾವ ಪಹರೆಯವರೂ, ಸೈನ್ಯವೂ ತಮಗೆ ಬೇಡವೆಂದು ಕಟ್ಟುನಿಟ್ಟಾಗಿ ತಿಳಿಸಿಬಿಟ್ಟಿದ್ದರು. ಶ್ರೀಶೈಲದ ಕಾಪಾಲಿಕನ ಗಟನೆಯಾದ ನಂತರ ಪಾಳೆಗಾರರೊಬ್ಬರು ಬಿಲ್ಲು ಬಾಣ ಹಿಡಿದ ಕತ್ತಿ ಗುರಾಣಿಗಳನ್ನು ಧರಿಸಿದ ಭಟ್ಟರನ್ನು ರಕ್ಷಣೆಗಾಗಿ ಕಳಿಸಲು ಆಚಾರ್ಯರು ಬೇಡವೆಂದು ಅವರನ್ನು ಹಿಂದಕ್ಕೆ ಕಳುಹಿಸಿಬಿಟ್ಟರು.

ಪ್ರಭಾಕರ ಭಟ್ಟರು ತುಂಬಾ ಶ್ರೀಮಂತರು ಉದಾರಿಯು ಆಗಿದ್ದು ದಾನ ಧರ್ಮಗಳಲ್ಲಿ ತುಂಬಾ ಪ್ರಖ್ಯಾತರಿದ್ದುದ್ದರಿಂದ ಆಚಾರ್ಯರನ್ನು ಅವರ ಪರಿವಾರವನ್ನು ತನ್ನ ಮನೆಗೆ ಭಿಕ್ಷೆಗಾಗಿ ಆಹ್ವಾನಿಸಿದರು. ಆತನು ತಮ್ಮ ಪರಿವಾರದ ಎಲ್ಲರನ್ನು ಸಂಬಾಳಿಸುವಷ್ಟು ಶಕ್ತನೆಂಬುದನ್ನು ಸ್ಪಷ್ಟ ಮಾಡಿಕೊಂಡು ನಂತರ ಆತನ ಕಳಕಳಿಯ ಪ್ರಾರ್ಥನೆಯನ್ನು ಆಚಾರ್ಯರು ಅಂಗೀಕರಿಸಿದರು.

ಆಚಾರ್ಯರು ಅವರ ಶಿಷ್ಯರು ಪ್ರಭಾಕರ ಭಟ್ಟರ ಮನೆಗೆ ಆಗಮಿಸಿದಾಗ ಆತ ಅವರನ್ನು ಅರ್ಘ್ಯಪಾದ್ಯಾದಿಗಳಿಂದ ಸ್ವಾಗತಿಸಿದರು. ಆಚಾರ್ಯರನ್ನು ಭಟ್ಟರು ತಮ್ಮ ಅಗ್ನಿಹೋತ್ರ ಶಾಲೆಗೆ ಕರೆದುಕೊಂಡು ಬಂದರು. ಆಚಾರ್ಯರು ಯಜ್ಞಕುಂಡವನ್ನು ದರ್ಶಿಸಿದೊಡನೆ ಅದಕ್ಕೆ ಬಲವಂದು ಪ್ರಣಾಮ ಮಾಡಿದರು. ಅನಂತರ ಭಟ್ಟರು ಆತನ ಪತ್ನಿಯು ಆಚಾರ್ಯರನ್ನು ಉನ್ನತ ಪೀಠದಲ್ಲಿ ಕುಳ್ಳಿರಿಸಿ ಅವರ ಪಾದುಕೆಗಳಿಗೆ ಪೂಜೆಸಲ್ಲಿಸಿದರು.

ಪ್ರಭಾಕರನೂ ಆತನ ಪತ್ನಿಯು ಆಚಾರ್ಯರಿಗೆ ನಮಸ್ಕಾರ ಮಾಡಿದರು. ತಮ್ಮ ಕಾಣಿಕೆಯನ್ನು ಅರ್ಪಿಸಿದರು. ಪ್ರಭಾಕರರ ಶಿಷ್ಯರೆಲ್ಲರು ಬಂದು ನಮಸ್ಕಾರ ಮಾಡಿದರು. ಆಚಾರ್ಯರು ಆ ಶಿಷ್ಯರಿಗೆ ಅವರ ಗುರುವು ತಮಗೆ ಕೊಟ್ಟ ಸ್ವರ್ಣವರಗಳನ್ನೆಲ್ಲ ಹಂಚಿದರು. ಭಟ್ಟರು ತನ್ನ ಶಿಷ್ಯನೊಬ್ಬನನ್ನು ಕರೆದು ನಮ್ಮ ದಿವಾಕರ ಅದೋ ಅಲ್ಲಿ ನಿಂತಿದ್ದಾನೆ ಅವನನ್ನು ಕರೆದು ತಾ ಎಂದರು. ಶಿಷ್ಯನು ಬಾಲಕನಾದ ದಿವಾಕರನನ್ನು ಕೈ ಹಿಡಿದು ಕರೆ ತಂದು ತಂದೆಯ ಬಳಿ ನಿಲ್ಲಿಸಿದನು ತಂದೆ ಮಗನಿಗೆ ನಮಸ್ಕಾರ ಮಾಡು ಎಂದು ಹೇಳಿ ತಾವು ನಮಸ್ಕಾರ ಮಾಡಿ ತೋರಿಸಿದರು. ಬಾಲಕ ದಿವಾಕರ ನಮಸ್ಕಾರ ಮಾಡಿ ನೆಲದ ಮೇಲೆ ಮುಗಿದ ಕೈಗಳನ್ನು ಚಾಚಿ ಹಾಗೆಯೇ ಮಲಗಿಯೇ ಇದ್ದನು! ತಂದೆಯೇ ಮಗನನ್ನು ಎಬ್ಬಿಸಬೇಕಾಯಿತು. ಬಾಲಕ ತಲೆಯ ಮೇಲೆ ಜೋಡಿಸಿದ್ದ ಕೈಗಳನ್ನು ಕೆಳಕ್ಕೆ ಇಳಿಸದೆ ಹಾಗೆಯೇ ಹಿಡಿದಿದ್ದನು.

ಪ್ರಭಾಕರ ಪತ್ನಿಯ ಕಣ್ಣಲ್ಲಿ ನೀರು ತುಂಬಿತ್ತು. ಭಟ್ಟರೂ ಮ್ಲಾನಮುಖದಿಂದ ತಲೆಬಾಗಿ ನಿಂತರು. ಆಚಾರ್ಯರು ಭಟ್ಟರೇ, ಈ ಬಾಲಕ ನಿಮ್ಮ ಪುತ್ರನಲ್ಲವೆ? ಏತಕ್ಕೆ ಈ ದುಗುಡ ನಿಮ್ಮಿರ್ವರ ಮುಖದಲ್ಲಿ?" ಎಂದರು.

ಭಟ್ಟರು ಆಚಾರ್ಯ ದೇವ ನಮಗಿರುವವನು ಒಬ್ಬನೆ ಮಗ. ಬಹಳ ಸಂಭ್ರಮದಿಂದ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಿದೆವು. ಅವನ ಮೂಕ, ದಡ್ಡ ಎಂಬುದು ನಮಗೆ ಮೊದಲು ತಿಳಿಯಲೇ ಇಲ್ಲ. ಇವನು ಬೆಳೆದಂತೆ ನಮಗದು ಅರ್ಥವಾಯಿತು. ಇವನು ಸದಾ ಜಡನಂತೆ ಬಿದ್ದಿರುತ್ತಾನೆ. ಅನ್ನಪಾನಾದಿಗಳನ್ನು ಸಹಾ ಅಪೇಕ್ಷಿಸುವುದಿಲ್ಲ. ನಾವಾಗಿ ಬಲವಂತವಾಗಿ ಊಟ ಮಾಡಿಸಬೇಕು. ಹಾಲು, ನೀರನ್ನು ಸಹಾ ಕುಡಿಸಬೇಕು. ಸ್ನಾನಾದಿಗಳನ್ನೂ ಮಾಡಿಸಬೇಕು. ಸದಾ ಬಿಟ್ಟ ಕಣ್ಣ ತೆರೆದಂತೆಯೇ ಇರುತ್ತವೆ. ಯಾರನ್ನೂ ಏನನ್ನೂ ಕೇಳುವುದಿಲ್ಲ. ಉಪನಯನವಂತೂ ಮಾಡಿ ಆಗಿದೆ. ಒಂದಕ್ಷರ ಮಂತ್ರವೂ ಇವನ ಬಾಯಲ್ಲಿ ಹೊರಡುವುದಿಲ್ಲ. ಇವನ ವಿಚಾರದಲ್ಲಿ ನಮ್ಮಿಬ್ಬರಿಗೂ ತುಂಬಾ ಕೊರಗು, ಯೋಚನೆಯಾಗಿದೆ ಎಂದರು.

ಬಾಲಕ ದಿವಾಕರ ನೋಡಲು ಬಲು ಸುಂದರವಾದವನು. ಚಿನ್ನದಂಥ ಮೈಬಣ್ಣ, ಕೃಶವೂ ಸ್ಥೂಲವೂ ಅಲ್ಲದ ಶರೀರ, ತಲೆಯಲ್ಲಿ ಗುಂಗುರ ಗುಂಗುರಾದ ಕೂದಲು, ನಸುಬಾಗಿದ ಮೂಗು, ಹೊಳೆಯುವ ಕಣ್ಣಗಳು, ಮಾಟವಾದ ಕೈ ಕಾಲುಗಳು, ನೊಸಲಲ್ಲಿ ಭಸ್ಮ ಮತ್ತು ಯಜ್ಞರಕ್ಷೆ ಧರಿಸಿದ್ದ ಈ ಬಾಲಕ ಸಾಕ್ಷಾತ್ ಸುಬ್ರಹ್ಮಣ್ಯ ಸ್ವಾಮಿಯಂತಯೇ ಇದ್ದ. ಆದರೆ ಮೂಕ, ಜಡ, ದಡ್ಡ.

ಆಚಾರ್ಯರು ದಿವಾಕರನ್ನೊಮ್ಮೆ ವಾತ್ಸಲ್ಯದಿಂದ ನೋಡಿದರು. ಆಚಾರ್ಯರ ಕಣ್ಣಗಳೂ ದಿವಾಕರನ ಕಣ್ಣಗಳೂ ಪರಸ್ಪರ ಸ್ಪಂದಿಸಿದವು. ಬಾಲಕನ ಮುಖದಲ್ಲಿ ಮಂದಹಾಸ ಮೂಡಿತು. ಪ್ರಭಾಕರನಿಗೆ ಅಚ್ಚರಿ, ಸಂಭ್ರಮ! ಸದಾ ಗಂಭೀರವಾಗಿದ್ದ ಮುಖದಲ್ಲಿ ಇಂದು ಮಂದಹಾಸ! ಎಂದು ಸಂತಸ. ಆಚಾರ್ಯರು ತಮ್ಮ ಬಲಗೈಯನ್ನೆತ್ತಿ, ಬಾ ಎನ್ನುವಂತೆ ಸಂಜ್ಞೆಮಾಡಿದರು! ಈಗ ದಿವಾಕರ ತಲೆಯ ಮೇಲಿದ್ದ ಕೈಗಳನ್ನು ಇಳಿಸಿ, ಎದೆಯ ಬಳಿ ಜೋಡಿಸಿಕೊಂಡು, ನಿಧಾನವಾಗಿ ಸಿಂಹದ ಮರಿಯಂತೆ, ಆಚಾರ್ಯರತ್ತ ಬಂದು, ಒಂದು ಕ್ಷಣ ಕಾಲ ನಿಂತ, ಅಡ್ಡ ಬಿದ್ದು, ಆಚಾರ್ಯರ ಪಾದಗಳಲ್ಲಿ ತನ್ನ ಶಿರವನ್ನಿರಿಸಿ ನಮಸ್ಕರಿಸಿದನು. ಆಚಾರ್ಯರೇ ಆತನ ಮೈದಡವಿ ಎಬ್ಬಿಸಿದರು.

"ಸೋಮ್ಯ ನೀರಾರು? ಎಲ್ಲಿಂದ ಬಂದೆ? ಮೂಗನಂತೆ ಏಕೆ ಇದೀಯ?' ಎಂದರು ಪ್ರೀತಿಯಿಂದ,
ಶಿರಸ್ಸಿನ ಮೇಲೆ ಹಸ್ತವನ್ನಿಟ್ಟು ಬೆನ್ನನ್ನು ತಡವಿ ಕೇಳಿದರು.
ಬಾಲಕನು ಅತ್ಯಂತ ವನೀತನಾಗಿ, ಕೈಮುಗಿದು, ತಲೆವಾಗಿ;
"ನಾಹಂ ಜಹಡ: ಕಿಂತು ಜಡಃ ಪ್ರವರ್ತತೇ
ಮತ್ಸನ್ನಿಧಾನೇನ ಸಂಧಿಹೇ ಗುರೋ।
ಷಡೂರ್ಮಿ ಷಡ್ಭಾವ ವಿಕಾರ ವರ್ಜಿತಂ
ಸುಖೈಕತಾನಂ ಡರಮಸ್ಮಿ ತತ್ಪದಮ್॥
ನಿಮಿತ್ತಂ ಮನಶ್ಚಕ್ಷುರಾದಿ ಪ್ರವೃತ್ತೌ
ನಿರಸ್ತಾ ಖಿಲೋಪಾಧಿರಾಕಾಶ ಕಲ್ಪ:।
ರವಿರ್ಲೋಕ ಚೇಷ್ಟಾ ನಿಮಿತ್ತಂ ಯಥಾಯಾ:
ಸನಿತ್ಯೋಪಲಬ್ಧಿ ಸ್ವರೂಪೋಹ ಮಾತ್ಮಾ॥
ಎಂದು ಪ್ರಾರಂಭಿಸಿ, ತಾನಿರುವ ಅದ್ವೈತ ಸ್ಥಿತಿಯನ್ನು ಗುರುಗಳಿಗೆ ನಿವೇದಿಸಿದನು.

## ಶ್ರೀ ದತ್ತ ಜಯಂತ್ಯುತ್ಸವ

ಶ್ರೀಕ್ಷೇತ್ರದ ಧರ್ಮಾಧಿಕಾರಿಗಳಾದ ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರ ನೇತೃತ್ವದಲ್ಲಿ **'ಶ್ರೀ ದತ್ತ ಜಯಂತ್ಯುತ್ಸವ'**ವು ದಿ: 22-12-2018ರ ಶನಿವಾರ ಬೆಳಿಗ್ಗೆ 8ಗಂಟೆಗೆ ಭಜನೆಯೊಂದಿಗೆ ಆರಂಭಗೊಂಡು ದಿ: 23-12-2018ರ ರವಿವಾರದ ಮುಂಜಾನೆ 9ಗಂಟೆಗೆ ಮಂಗಳದೊಂದಿಗೆ ಸಂಪನ್ನಗೊಳ್ಳುತ್ತದೆ. ಭಕ್ತ ಮಹಾಜನರೆಲ್ಲರೂ ಭಾಗವಹಿಸಿ ಶ್ರೀ ಗುರುಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

ಮೇಲ್ವಿಚಾರಕರು
ಶ್ರೀಕ್ಷೇತ್ರ ಬಂಗಾರಮಕ್ಕಿ

"ಗುರುದೇವ, ನಾನು ಜಡನಲ್ಲ, ಚೈತನ್ಯವಸ್ತು. ನನ್ನ ಸನ್ನಿಧಿಯಲ್ಲಿ ಜಡವು ತನ್ನ ವ್ಯಾಪಾರವನ್ನು ಮಾಡುತ್ತದೆ. ಆರು ತಾಪಗಳೂ, ಆರು ವಿಕಾರಗಳೂ ಇಲ್ಲದ, ಆನಂದ ಸ್ವರೂಪವಾದ ಪರತತ್ವವೇ ನಾನು.

"ಸೂರ್ಯನು ಲೋಕದ ವ್ಯವಹಾರಕ್ಕೆ ನಿಮಿತ್ತನಾಗಿರುವಂತೆ, ಯಾವ ಉಪಾಧಿಯೂ ಇಲ್ಲದೆ ಆಕಾಶ ಕಲ್ಪನಾಗಿರುವ ಯಾವನು, ಮನಸ್ಸು ಮುಂತಾದ ಇಂದ್ರಿಯಗಳ ಪ್ರವೃತ್ತಿಗೆ ಕಾರಣನಾಗಿ ಇರುವನೋ, ಆ ನಿತ್ಯ ಚೈತನ್ಯ ಸ್ವರೂಪನಾದ ಆತ್ಮನೇ ನಾನು "ಹೀಗೆಂದು ಬಾಲಕ ದಿವಾಕರನು ಹನ್ನೆರಡು ಶ್ಲೋಕಗಳಲ್ಲಿ ತನ್ನ ಸ್ಥಿತಿಯನ್ನು ವಿವರಿಸಿದನು.

ಬಾಲಕ ದಿವಾಕರನ ಮಾತುಗಳನ್ನು ಕೇಳಿದ ತಂದೆ ಪ್ರಭಾಕರನೂ ತಾಯಿ ಪ್ರಭಾವತಿಯು ಆಶ್ಚರ್ಯಪಟ್ಟರು. ತಮ್ಮ ಮಗನು ಸಾಕ್ಷತ್ ಶ್ರೀ ದಕ್ಷಿಣ ಮೂರ್ತಿಯಂತೆ ಜ್ಞಾನ ಸ್ವರೂಪನು ಎಂಬುದನ್ನು ತಾವರಿಯಲಿಲ್ಲವಲ್ಲ ಎಂದು ಪಶ್ಚಾತಾಪ ಪಟ್ಟರು. ಸಭೆಯಲ್ಲಿದ್ದವರಿಗೂ ಆಶ್ಚರ್ಯ ಸಂತೋಷಗಳುಂಟಾದುವು.

ಆ ದಿನವೆಲ್ಲ ಬಾಲಕನು ಶಂಕರನೊಡನೆಯೇ ಇದ್ದುಬಿಟ್ಟನು, ಶ್ರೀ ಶಂಕರಾಚಾರ್ಯರ ಭಿಕ್ಷೆಯಾಗುವವರೆಗೂ ಊಟ ಮಾಡಲಿಲ್ಲ. ಸಂಜೆ ಗುರೂದೇವರು ಎದ್ದು ಸ್ವಸ್ಥಾನಕ್ಕೆಂದು ಹೊರಟಾಗ, ತಾನು ಅವರೊಡನೆ ಹೋರಟನು! ಪ್ರಭಾಕರನಾಗಲಿ ತಾಯಿ ಪ್ರಭಾವತಿಯಾಗಲಿ ಎಷ್ಟು ಕೇಳಿಕೊಂಡರೂ ಮನೆಯಲ್ಲಿ ಇರಲು ಒಪ್ಪಲಿಲ್ಲ. ಆರ್ಚಾಯರು ಪ್ರಭಾಕರನನ್ನು ಸಂತೈಸುತ್ತ: "ಭಟ್ಟಪಾದರೇ, ಈತನು ನಿಮ್ಮ ಪೂರ್ವ ಪುಣ್ಯದಿಂದ ನಿಮ್ಮ ಮಗನಾಗಿ ಜನಿಸಿದ್ದಾನೆ. ಹುಟ್ಟುತ್ತಲೇ ಜ್ಞಾನಸಂಪನ್ನನಾಗಿರುವ ಈತನಿಂದ ನಿಮಗೆ ಯಾವ ಲೌಕಿಕ ಪ್ರಯೋಜನವೂ ಇಲ್ಲ. ನಿಮಗೆ ಇನ್ನೊಬ್ಬ ಪುತ್ರನು ಜನಿಸಿ, ದೇವ, ಋಷಿ, ಪಿತೃ ಋಣವನ್ನೂ ಸಲ್ಲಿಸಿ ಇಚ್ಛಾಪೂರ್ಣ ಮಾಡುವನು. ಈತನನ್ನು ನಮಗೆ ಒಪ್ಪಿಸಿರಿ" ಎಂದರು. ದಿವಾಕರನತ್ತ ತಿರುಗಿ "ಸೋಮ್ಯ, ಈ ದಿನ ನೀನು ಈ ಮಾತಾಪಿತರೊಡನೆ ಇದ್ದು ನಾಳೆ ನಮ್ಮ ಆಶ್ರಮಕ್ಕೆ ಬಾ" ಎಂದರು.

ದಿವಾಕರನು "ಅಪ್ಪಣೆ" ಎಂದು ನುಡಿದು ಮನೆಯಲ್ಲಿಯೇ ನಿಂತನು! ಮಾತಾಪಿತರಿಗೆಷ್ಟೋ ಸಂತಸ, ಆನಂದ. ಮಾರನೆ ದಿನ ದಿವಾಕರನು ಎಲ್ಲಾ ಬಾಲಕರಂತೆಯೇ ತನ್ನ ಸ್ನಾನ ಸಂಧ್ಯಾವಂದನೆಗಳನ್ನೂ, ಅಗ್ನಿಕಾರ್ಯಗಳನ್ನೂ ನೆರೆವೇರಿಸಿದನು. ತಾಯಿಗೂ ತಂದೆಗೂ ಅಭಿವಾದನ ಮಾಡಿ, ತನ್ನ ಗುರುವಿನ ಆಶ್ರಮದತ್ತ ಹೊರಟನು.

ಆಚಾರ್ಯರು, ಅವರ ಶಿಷ್ಯರೂ ದಿವಾಕರನನ್ನು ಆದರ ಪೂರ್ವಕವಾಗಿ ಬರಮಾಡಿಕೊಂಡರು. ಆ ದಿನವೇ ಆಚಾರ್ಯರು ದಿವಾಕರ ಬ್ರಹ್ಮಾಚಾರಿಗೆ ಸಂನ್ಯಾಸವನ್ನಿತ್ತರು. "ಮಗು, ನೀನು ಆತ್ಮತತ್ವವನ್ನು ಅಂಗೈಯ ನೆಲ್ಲಿಕಾಯಿಯನ್ನು ಕಾಣುವಷ್ಟು ಸ್ಪಷ್ಟವಾಗಿ ಕಂಡಿರುವುದರಿಂದ ನಿನ್ನನ್ನು ನಾನು 'ಹಸ್ತಾಮಲಾಕಾಚಾರ್ಯ' ಎಂದು ಸಂಬೋಧಿಸುತ್ತೇನೆ" ಎಂದರು. ಹೀಗೆ ಕರ್ನಾಟಕದ ಶ್ರೀಬಲಿ ಗ್ರಾಮವು ಆರ್ಚಾರಿಗೆ ಶ್ರೇಷ್ಠ ಶಿಷ್ಯನನ್ನಿತ್ತ ಖ್ಯಾತಿ ಪಡೆಯಿತು.

ಶ್ರೀಬಲಿ ಗ್ರಾಮದಲ್ಲಿ ಒಂದೆರಡು ದಿನಗಳು ಇದ್ದು, ಅನಂತರ ಶ್ರೀ ಶಂಕರಾಚಾರ್ಯರು ಋಷ್ಯಶೃಂಗ ಮುನಿಯ ತಪೋಧಾಮವಾಗಿದ್ದ ಶೃಂಗಗಿರಿಯತ್ತ ಪ್ರಯಾಣ ಬೆಳೆಸಿದರು.

ಕಗ್ಗದ ಬೆಳಕಿನಲ್ಲಿ

# ನಮ್ಮ ತಿಳಿವಿಗೆ ತಳಹದಿ ಯಾವುದು?

ಲೇ : ವಿ|| ಜಿ. ಎಸ್. ನಟೇಶ

**ತಿಳಿವಾವುದಿಳೆಗೆ ಯುಗ ಯುಗದ ಬೆಳಕಾಗಿತ್ತೋ**
**ಹಳದೆಂದು ನೀನದನು ಕಳೆಯುವೆಯ ಮರುಳೆ?**
**ತಳಹದಿಯದಲ್ತೆ ನಮ್ಮೆಲ್ಲ ಹೊಸ ತಿಳಿವಿಂಗೆ**
**ಹಳೆಬೇರು ಹೊಸತಳಿರು–ಮಂಕುತಿಮ್ಮ II**

**ಯಾವ ಜ್ಞಾನ ಈ ಭೂಮಿಗೆ ಯುಗಯುಗದ ಬೆಳಕಾಗಿತ್ತೋ, ಅದು ಹಳೆಯದೆಂದು ನೀನು ದೂರತಳ್ಳುವೆಯಾ? ನಮ್ಮೆಲ್ಲರ ಹೊಸ ಜ್ಞಾನಕ್ಕೆ ಅದೇ ಅಡಿಪಾಯ. ಹಳೆಯ ಬೇರಿನೊಂದಿಗೆ ಹೊಸ ಚಿಗುರು ಇದ್ದಾಗಲೇ ಸೊಗಸು.**

ಹಳೆಯದು ಎಂದ ಮಾತ್ರಕ್ಕೆ ಯಾವುದನ್ನೂ ನಾವು ಕಡೆಗಣಿಸುವಂತಿಲ್ಲ. ಏಕೆಂದರೆ ಆ ಹಳೆಯ ಜ್ಞಾನವೇ ಯುಗಯುಗಕ್ಕೂ ಬೆಳಕಾಗಿ ನಮಗೆ ದಾರಿ ತೋರಿಸುತ್ತಾ ಬಂದಿದೆ.

ಅದೆಷ್ಟೋ ಋಷಿಗಳು, ಜ್ಞಾನಿಗಳು ನಿರಂತರ ತಮ್ಮ ತಪಸ್ಸಿನ ಮೂಲಕ ಜ್ಞಾನದ ರಾಶಿಯನ್ನೇ ನೀಡಿ ಹೋಗಿದ್ದಾರೆ. ಅವರ ಪರಿಶ್ರಮ ನಮಗೆ ಅನಾಯಾಸವಾಗಿ ಜ್ಞಾನ ದೊರಕುವಂತೆ ಮಾಡಿದೆ. ಅದನ್ನು ಉಪಯೋಗಿಸಿಕೊಂಡು ಹೊಸದನ್ನು ಹೊಂದಾಣಿಸಿಕೊಂಡು ನಾವು ನಮ್ಮ ಬದುಕನ್ನು ಉಜ್ವಲಗೊಳಿಸಿಕೊಳ್ಳಬೇಕು. ಅಂತಹ ಉತ್ಕೃಷ್ಟವಾದ ಜ್ಞಾನವನ್ನು ನಾವೆಂದೂ ಹಳೆಯದು ಎಂದು ಕಳೆದುಕೊಳ್ಳಬಾರದು. ಏಕೆಂದರೆ ಆ ಹಳೆಯ ಜ್ಞಾನ ನಮ್ಮ ಹೊಸ ತಿಳಿವಿಗೆ ಭದ್ರ ಬುನಾದಿಯಾಗಿದೆ. ಆ ಜ್ಞಾನ ಹಳೆಯ ಬೇರಾದರೆ, ಹೊಸ ಜ್ಞಾನ, ಹೊಸ ಚಿಗುರು. ಆಗ ಜೀವನದ ಧರ್ಮವೃಕ್ಷ ಶೋಭಿಸುತ್ತದೆ. ವಿಜ್ಞಾನಿಗಳು ಕಂಡುಹಿಡಿದ ಆವಿಷ್ಕಾರಗಳನ್ನು ಇಟ್ಟುಕೊಂಡೇ ಹೊಸ ಆವಿಷ್ಕಾರಗಳನ್ನೋ, ಸುಧಾರಿತವಾದವುಗಳನ್ನೋ ಮಾಡಬೇಕಷ್ಟೆ! ಹಳೆಯ ವೃಕ್ಷಕ್ಕೆ ನಾವು ನೀರೆರೆಯುವುದನ್ನು ಎಂದೂ ಮರೆಯಬಾರದು. ಮರೆತರೆ ನಾವು ಹೊಸ ಚಿಗುರನ್ನು ಕಾಣಲಾಗುವುದಿಲ್ಲ.



ಪ್ರೇಮ ಕವಿ – ಕೆ. ಎಸ್. ನರಸಿಂಹಸ್ವಾಮಿ

**ನಮಗೆ ದಾರಿ ಬೆಳಕು ಯಾವುದು?**

**ವೇದ ಲೋಕಾಚಾರ ನಿನ್ನನುಭವದಯುಕ್ತಿ**
**ಶೋಧಿಸಿ ಮೂರನುಂ ಸಂವಾದಗೊಳಿಸು।**
**ಸಾಧಿತಜ್ಞಾನನರಸಾಧ್ಯ ಪ್ರಮಾಣವದು**
**ಹಾದಿಬೆಳಕದು ನಿನಗೆ–ಮಂಕುತಿಮ್ಮ॥**

**ವೇದ, ಲೋಕಾಚರಣೆ, ನಿನ್ನ ಅನುಭವದ ಯುಕ್ತಿ–ಈ ಮೂರನ್ನು ಶೋಧಿಸಿ ಸೇರಿಸು. ಸಾಧಿಸಲ್ಪಟ್ಟ ಜ್ಞಾನ, ಮನುಷ್ಯನಿಗೆ ಮುಂದೆ ಸಾಧಿಸುವುದಕ್ಕೆ ಪ್ರಮಾಣವಾಗಿ ನಿಲ್ಲುತ್ತದೆ. ಅದೇ ನಿನಗೆ ದಾರಿಯ ಬೆಳಕು.**

ಹಳೆಯ ಆವಿಷ್ಕಾರಗಳಾದ ವೇದಜ್ಞಾನ, ಲೋಕದ ಆಚರಣೆ ಹಾಗೂ ನಿನ್ನ ಅನುಭವದ ಯುಕ್ತಿ ಈ ಮೂರನ್ನೂ ಚೆನ್ನಾಗಿ ಶೋಧಿಸಿ ಬದುಕಿನಲ್ಲಿ ಸೇರಿಸಿಕೊಂಡಾಗ ಬದುಕು ಹಸನಾಗುತ್ತದೆ. ಏಕೆಂದರೆ ಹಿಂದೆ ಸಾಧಿತವಾದ ಜ್ಞಾನ, ಮನುಷ್ಯನು ಮುಂದೆ ಸಾಧಿಸುವಂತಹ ಜ್ಞಾನಕ್ಕೆ ಪ್ರಮಾಣವಾಗಿ ನಿಲ್ಲುತ್ತದೆ. ಆ ಜ್ಞಾನ ನಮಗೆ ಮೇಲಕ್ಕೆ ಏರಲು ಸೋಪಾನಗಳನ್ನು ನಿರ್ಮಿಸಿಕೊಟ್ಟಿದೆ. ಆ ಸೋಪಾನಗಳನ್ನು ಬಳಸಿಕೊಂಡು ಬೇಕಿದ್ದಲ್ಲಿ ಹೊಸದಾದ ಮೆಟ್ಟಿಲುಗಳನ್ನು ನಿರ್ಮಿಸಿಕೊಂಡು ಮುಂದೆ ಸಾಗಬೇಕು. ಬೀದಿ ದೀಪಗಳನ್ನು ಬೇಕಾದಲ್ಲಿ ನಾವು ಅಳವಡಿಸಿಕೊಳ್ಳಬಹುದು. ಅವರಿಗಿಂತ ಮುಂದೆ ಸಾಗಬೇಕೆಂದಿದ್ದರೆ ಹೊಸ ಮೆಟ್ಟಿಲುಗಳನ್ನು ನಿರ್ಮಿಸಿಕೊಂಡು ಸಾಗಬಹುದು.

**ಧರ್ಮದ ದಾರಿ ಯಾವುದು?**

**ಬುದ್ಧಿ ಪ್ರಕಾಶದಿಂದಂತರನುಭವ ಶೋಧೆ**
**ಸಿದ್ಧವಾಶೋಧೆಯಿಂ ಸತ್ಯಸಂವೀಕ್ಷೆ।**
**ಶುದ್ಧಸತ್ಯವ ಜೀವಿತ ಪ್ರಶ್ನೆಗನ್ವಯಿಪ ಪದ್ಧತಿಯೆ**
**ಧರ್ಮವೆಲೊ–ಮಂಕುತಿಮ್ಮ॥**

**ಬುದ್ಧಿಯ ಬೆಳಕಿನಿಂದ ಒಳಗಿನ ಅನುಭವದ ಶೋಧನೆಯಾಗಬೇಕು. ಆ ಶೋಧೆಯಿಂದ ಸತ್ಯದ ದರ್ಶನವಾಗುತ್ತದೆ. ಆ ಪರಿಶುದ್ಧವಾದ ಸತ್ಯವನ್ನು ಬದುಕಿಗೆ ಅನ್ವಯಿಸಿಕೊಳ್ಳುವ ಪದ್ಧತಿಯೇ ಧರ್ಮ.**

ಡಿ.ವಿ.ಜಿ. ಸಮಷ್ಟಿಗತವಾದ ಧರ್ಮಕ್ಕಿಂತ ವ್ಯಕ್ತಿಗತವಾದ ಧರ್ಮಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಾರೆ. ಪ್ರತಿಯೊಬ್ಬನೂ ತನ್ನ ತನ್ನ ಧರ್ಮವನ್ನು ಪಾಲಿಸಿದರೆ ಅಧರ್ಮ ಎಲ್ಲಿಯೂ ಸುಳಿದಾಡಲು ಸಾಧ್ಯವಿಲ್ಲ. ಆ ಧರ್ಮವನ್ನು ಪಾಲಿಸಲು ಅವನು ಹೊರದೃಷ್ಟಿಯನ್ನು ಹರಿಸಬೇಕಿಲ್ಲ. ಒಳಗೆ ನೋಡಬೇಕಾಗುತ್ತದೆ. ವಿವೇಕ ಆ ಕೆಲಸವನ್ನು ಮಾಡುತ್ತದೆ. ವಿವೇಕದ ಪ್ರಕಾಶದಿಂದ ಅಂತರಂಗದ ಶೋಧೆಯಾಗಬೇಕು. ಆ ಶೋಧೆಯಿಂದ ಸತ್ಯದ ಸಾಕ್ಷಾತ್ಕಾರವಾಗುತ್ತದೆ. ಆ ಶುದ್ಧ ಸತ್ಯವನ್ನು ನಮ್ಮ ಬದುಕಿನ ಸಮಸ್ಯೆಗಳಿಗೆ ಅನ್ವಯಿಸಿಕೊಳ್ಳಬೇಕು. ಇಂಥ ರೀತಿಯನ್ನೇ ಧರ್ಮವೆನ್ನಬಹುದು. ಸತ್ಯ ಸಂಸ್ಕಾರವನ್ನು ಹೊಂದಿದ ಬದುಕು ಶ್ರೇಷ್ಠವಾಗುತ್ತದೆ. ಅದು ಇತರರಿಗೆ ಮಾದರಿಯಾಗುತ್ತದೆ. 'ಅಕೃತ್ವಾ ಪರಸಂತಾಪಂ ಅಗತ್ವಾ ಖಲನಮ್ರತಾಂ, ಅನುತ್ಸೃಜ್ಯ ಸತಾಂ ವರ್ತ್ಮ ಯತ್ಸ್ವಲ್ಪಮಪಿ ತದ್ಬಹು' ಅರ್ಥಾತ್ ಬೇರೆಯವರಿಗೆ ತೊಂದರೆ ಕೊಡದೆ, ದುರ್ಜನರಿಗೆ ಬಾಗದೆ, ಸಜ್ಜನರ ದಾರಿಯನ್ನು ಬಿಡದೆ ಅಲ್ಪಕಾಲ ಬದುಕಿದರೂ ಅದು ಬಹುಕಾಲ ಬದುಕಿದಂತೆ. ನಿಜವಾದ ಬದುಕಿನ ಸಾರ ಸರ್ವಸ್ವವೇ ಇದು.

**ನಮ್ಮ ನಿಜವಾದ ಸಂಗಡಿಗನಾರು?**

**ಶುನಕ ಬೆಂಬತ್ತಿತಲ ಧರ್ಮಜನ ಕಡೆವರಂ**
**ನಿನಗಂತು ಸಂಗಡಿಗನೋರ್ವನೆಡೆಬಿಡದನ್।**
**ಇಣಕಿ ನೋಡರದಾರುಮೆನ್ನುವಡೆ ಕಾದಿಹನು**
**ಅಣಕಿಗಮನಸ್ಸಾಕ್ಷಿ–ಮಂಕುತಿಮ್ಮ॥**

ನಾಯಿ ಕೊನೆಯವರೆಗೂ ಧರ್ಮರಾಜನನ್ನು ಹಿಂಬಾಲಿಸಿತು. ಹಾಗೆಯೇ ನಿನಗೂ ಒಬ್ಬ ಜೊತೆಗಾರ ನಿರಂತರ ಅನುಸರಿಸಿ ಬರುತ್ತಾನೆ. ಯಾರೂ ಇಣಕಿ ನೋಡುವುದಿಲ್ಲ ಎಂದು ಭಾವಿಸಿದರೂ ಮನಸ್ಸಾಕ್ಷಿ ಅಣಕಿಸುತ್ತಲೇ ಇರುತ್ತದೆ.

ನಮ್ಮ ಮನಸ್ಸಾಕ್ಷಿ ನಿರಂತರ ನಮ್ಮೊಂದಿಗೇ ಇರುತ್ತದೆ. ಅದಕ್ಕೆ ನಾವೆಂದೂ ದ್ರೋಹ ಬಗೆಯುವಂತಿಲ್ಲ. ನಮ್ಮ ಎಲ್ಲಾ ವ್ಯವಹಾರಗಳೂ ಅದಕ್ಕನುಗುಣವಾಗಿ ನಡೆಯಬೇಕು. ಹಾಗೆ ನಡೆದರೆ ನಮ್ಮ ಬದುಕು ಪರಿಶುದ್ಧ. ಈ ನಿಟ್ಟಿನಲ್ಲಿ ಗುಂಡಪ್ಪನವರು ಧರ್ಮರಾಜನ ಉದಾಹರಣೆಯನ್ನು ನೀಡುತ್ತಾರೆ. ಧರ್ಮರಾಜ ಜೀವನದುದ್ದಕ್ಕೂ ಧರ್ಮವನ್ನು ಉಸಿರನ್ನಾಗಿ ಮಾಡಿಕೊಂಡನು. ಅದರಂತೆ ಬಾಳಿ ಬದುಕಿದನು. ಕೊನೆಯಲ್ಲಿ ಸಶರೀರನಾಗಿ ತನ್ನ ಪತ್ನಿ ಸಹೋದರರೊಡನೆ ಸ್ವರ್ಗಕ್ಕೆ ತೆರಳಲು ಅಣಿಯಾದ. ಧರ್ಮರಾಜ ಮುಂದೆ ಮುಂದೆ ಹೋಗುತ್ತಿದ್ದ. ಹಿಂದಿನಿಂದ ಇತರರು ಸ್ವಲ್ಪ ದೂರ ಹೋದನಂತರ ಒಬ್ಬೊಬ್ಬರಾಗಿ ಬಿದ್ದು ಹೋದರು. ಕೊನೆಯಲ್ಲಿ ಉಳಿದವನು ಧರ್ಮರಾಜ ಮಾತ್ರ. ಬಹಳ ದು:ಖಿಸಿದ. ಆದರೆ ಏನೂ ಮಾಡುವಂತಿರಲಿಲ್ಲ. ಇನ್ನೂ ಸ್ವಲ್ಪ

ದೂರ ಹೋದ ನಂತರ ಹಿಂದೆ ನೋಡಿದ. ಆಗ ಒಂದು ನಾಯಿ ಅವನನ್ನು ಅನುಸರಿಸಿ ಬರುತ್ತಿತ್ತು. ಅವನಿಗೆ ಆಶ್ಚರ್ಯವಾಯಿತು. ಸ್ವರ್ಗದ ಬಾಗಿಲಿನವರೆಗೂ ಬಂದಿತು. ಆ ನಾಯಿಗೆ ಸ್ವರ್ಗದೊಳಗೆ ಪ್ರವೇಶ ಕಲ್ಪಿಸುವುದಾದರೆ ಮಾತ್ರ ತಾನೂ ಸ್ವರ್ಗದೊಳಗೆ ಪ್ರವೇಶ ಮಾಡುವುದಾಗಿ ಹೇಳಿದ. ಆಗ ಯಮಧರ್ಮರಾಜ ಆ ನಾಯಿ ಮತ್ತಾರೂ ಅಲ್ಲ, ನೀನು ಪಾಲಿಸಿದ ಧರ್ಮ ಎಂದ. ನಾವು ಮಾಡಿದ ಒಳ್ಳೆಯ ಕಾರ್ಯಗಳು ಮಾತ್ರ ನಮ್ಮೊಂದಿಗೆ ಕೊನೆಯವರೆಗೂ ಇರುತ್ತದೆ. ನಾವು ಮಾಡುತ್ತಿರುವ ಎಲ್ಲಾ ಕೆಲಸ ಕಾರ್ಯಗಳ ಹಿಂದೆ ನಮ್ಮ ಮನಸ್ಸಾಕ್ಷಿ ನಮ್ಮೊಡನೆ ಇರುತ್ತದೆ ಎಂಬುದನ್ನು ನಾವೆಂದೂ ಮರೆಯಬಾರದು. ನಾವು ಮಾಡುವ ಕೆಟ್ಟ ಕೆಲಸಗಳನ್ನು ನಮ್ಮ ಅಂತ:ಸಾಕ್ಷಿ ಅಣಕಿಸುತ್ತದೆ. ಮನಸ್ಸಾಕ್ಷಿಯಿಂದ ಶೋಧಿತವಾದ ಕೆಲಸವೇ ಪವಿತ್ರವಾದುದು. ಅದೇ ನೈಜ ಪೂಜೆ.

**ನಮ್ಮ ಆಯುವನ್ನು ಹೇಗೆ ಸಾಗಿಸಬೇಕು?**

**ಕಾಯಕವ ಚರಿಸುತ್ತ ಮಾನಸವ ಸಯ್ತಿಡುತ**
**ಆಯಸಂಬಡಿಸದವೊಲ್ ಅಂತರಾತ್ಮನನುI**
**ಮಾಯೆಯೊಡನಾಡುತ್ತ ಬೊಮ್ಮನನು ಭಜಿಸುತ್ತ**
**ಆಯುವನು ಸಾಗಿಸೆಲೊ–ಮಂಕುತಿಮ್ಮII**

**ಕೆಲಸವನ್ನು ಮಾಡುತ್ತಾ ಮನಸ್ಸನ್ನು ಸಮಾಧಾನಪಡಿಸುತ್ತಾ, ಅಂತರಾತ್ಮನನ್ನು ಆಯಾಸಪಡಿಸದ ಹಾಗೆ ಮಾಯೆಯೊಂದಿಗೆ ಆಟವಾಡುತ್ತಾ ಬ್ರಹ್ಮನನ್ನು ಭಜಿಸುತ್ತಾ ಆಯುಷ್ಯವನ್ನು ಕಳೆ.**

ನಮ್ಮ ಬದುಕಿನ ಆಯುಷ್ಯವನ್ನು ಹೇಗೆ ಸಾಗಿಸಬೇಕೆಂದು ಡಿ.ವಿ.ಜಿ. ಇಲ್ಲಿ ಸೂಚಿಸಿದ್ದಾರೆ. ನಮ್ಮ ಪಾಲಿನ ಕೆಲಸವನ್ನು ನಿರ್ವಂಚನೆಯಿಂದ, ಪ್ರಾಮಾಣಿಕವಾಗಿ ನಾವು ಮಾಡಬೇಕು. ಅದಕ್ಕಾಗಿ ನಮ್ಮ ಮನಸ್ಸನ್ನು ಅಣಿಗೊಳಿಸಿಕೊಳ್ಳಬೇಕು. ಅದು ಕೆರಳಿದರೆ ಅದನ್ನು ಸಮಾಧಾನ ಮಾಡಬೇಕು. ಅಂತರಾತ್ಮಕ್ಕೆ ಕುಂದಾಗದಂತೆ ಎಚ್ಚರ ವಹಿಸಬೇಕು. ಪ್ರಪಂಚದ ಮಾಯೆಯೊಡನೆ ಆಟವಾಡುತ್ತ, ಭಗವಂತನನ್ನು ಧ್ಯಾನಿಸುತ್ತ ಕಾಲ ಕಳೆಯಬೇಕು. ಹೀಗೆ ಬದುಕಿದರೆ ಬದುಕು ಪೂರ್ಣತೆಯತ್ತ ಧಾವಿಸುತ್ತದೆ. ನಮ್ಮ ಇಂದ್ರಿಯಗಳು ನಮಗೆ ಯಜಮಾನರಾಗಬಾರದು. ನಾವೇ ಇಂದ್ರಿಯಗಳ ಒಡೆಯರಾಗಿ ಅವುಗಳನ್ನು ನಿಗ್ರಹಿಸಬೇಕು. ಮಾಯೆಯಲ್ಲಿ ಮುಳುಗದೆ ಅದರೊಂದಿಗೆ ಆಟವಾಡುತ್ತಾ ಸಾಗಿ ಬದುಕಿನ ಆಟವನ್ನು ಮುಗಿಸಬೇಕು.

**ಪುರುಷಾರ್ಥ ಸಾಧನೆ ಯಾವುದು?**

**ಇರುವನ್ನಮೀಬಾಳು ದಿಟವದರ ವಿವರಣೆಯ**
**ಹೊರೆ ನಮ್ಮ ಮೇಲಿಲ್ಲ ನಾವದರ ಸಿರಿಯI**
**ಪಿರಿದಾಗಿಸಲು ನಿಂತು ಯುಕ್ತಿಯಿಂ ದುಡಿಯುವುದು**
**ಪುರುಷಾರ್ಥ ಸಾಧನೆಯೊ–ಮಂಕುತಿಮ್ಮII**

**ನಾವಿರುವಷ್ಟು ಕಾಲ ಈ ಬಾಳು ಸತ್ಯ. ಅದರ ವಿವರದ ಹೊರೆ ನಮ್ಮ ಮೇಲಿಲ್ಲ. ನಾವು ಅದರ ಸಿರಿವಂತಿಕೆಯನ್ನು ಹಿರಿದು ಮಾಡಲು ಯುಕ್ತಿಯಿಂದ ದುಡಿಯಬೇಕು. ಅದೇ ಪುರುಷಾರ್ಥ ಸಾಧನೆ.**

ನಮ್ಮೆಲ್ಲರ ಬಾಳಿನ ಸೂತ್ರಧಾರ ಭಗವಂತ. ನಮ್ಮ ಬದುಕೊಂದು ಗಾಳಿಪಟದಂತೆ. ಸೂತ್ರದ ಹಿಡಿತ ಅವನ ಕೈಯಲ್ಲಿ. ನಮ್ಮ ಬಾಳು ಎಷ್ಟು ದಿನ ನಮ್ಮೊಂದಿಗಿರುತ್ತದೆಯೋ ಅಷ್ಟು ದಿನ ನಮ್ಮದು. ಅದರ ವಿವರಣೆಯ ಹೊರೆ ನಮ್ಮ ಮೇಲಿಲ್ಲ. ಅದನ್ನು ಅರ್ಥ ಮಾಡಿಕೊಳ್ಳಲು ನಮ್ಮಿಂದ ಸಾಧ್ಯವಾಗುವುದಿಲ್ಲ. ಆದರೆ ಅದನ್ನು ಶ್ರೀಮಂತವಾಗಿರಸಲು, ಶ್ರೇಷ್ಠವಾಗಿಸಲು ನಿರಂತರ ಪ್ರಯತ್ನ ಸಾಗಬೇಕು. ಯುಕ್ತಿಯಿಂದ ದುಡಿಯುತ್ತಾ ಅದನ್ನು ಸಿದ್ಧಿಸಿಕೊಳ್ಳುವತ್ತ ಗುರಿಯಿರಿಸಿಕೊಂಡು ಬದುಕನ್ನು ಸಾಗಿಸುವುದೇ ಬದುಕಿನ ಸಾರ್ಥಕತೆ. ಅದೇ ಪುರುಷಾರ್ಥಸಾಧನೆ.

**ವಿಶ್ವಾತ್ಮಾನುಭವಕ್ಕೆ ಪಥ ಯಾವುದು?**

**ದೃಶ್ಯವೆಲ್ಲವು ನಶ್ಯವಾದೊಡೇಂ? ದೃಷ್ಟಿಗದು**
**ವಶ್ಯವಿರುವನಕದನು ದೃಷ್ಟಿಪುದೆ ಕಾರ್ಯಂI**
**ವಿಶ್ವಾನುಭವವೆ ವಿಶ್ವಾತ್ಮಾನುಭವಕೆ ಪಥ**
**ನಶ್ಯದಿಂದವಿನಶ್ಯ–ಮಂಕುತಿಮ್ಮII**

**ನಮ್ಮ ಕಣ್ಣಿಗೆ ಕಾಣಿಸುವುದೆಲ್ಲಾ ನಾಶವಾಗುವಂಥದ್ದು, ಆದರೂ ಕಾಣಿಸುವವರೆಗೆ ಅದನ್ನು ನೋಡಲೇಬೇಕು. ವಿಶ್ವದ ಅನುಭವವೇ ವಿಶ್ವಾತ್ಮನ ಅನುಭವಕ್ಕೆ ದಾರಿ. ನಾಶವಾಗುವ ವಸ್ತುವಿನಿಂದಲೇ ಶಾಶ್ವತವಾದುದನ್ನು ಪಡೆಯಲು ಸಾಧ್ಯ.**

ನಮ್ಮ ಕಣ್ಣಿಗೆ ಕಾಣುವುದೆಲ್ಲವೂ ನಾಶವಾಗತಕ್ಕವುಗಳು. ಆದರೂ ಎಲ್ಲಿಯವರೆಗೆ ಅವು ನಮ್ಮ ಕಣ್ಣಿಗೆ ಕಾಣಿಸುತ್ತಿರುತ್ತವೆಯೋ ಅಲ್ಲಿಯವರೆಗೆ ನಾವು ಅವುಗಳನ್ನು ನೋಡಲೇಬೇಕು. ಹೀಗೆ ನೋಡುತ್ತಿರುವುದರಿಂದ ನಮಗೆ ಆಗುವ ಲಾಭವಾದರೂ ಏನು? ಎಂಬುದನ್ನು ಗುಂಡಪ್ಪನವರು ಇಲ್ಲಿ ಉತ್ತರಿಸಿದ್ದಾರೆ. ವಿಶ್ವದ ಅನುಭವವಿಲ್ಲದೆ ವಿಶ್ವಾತ್ಮನ ಅನುಭವವಾಗದು. ಹಾಲಿನಲ್ಲಿ ಮೇಲ್ನೋಟಕ್ಕೆ ಬೆಣ್ಣೆ ಕಾಣುವುದಿಲ್ಲವೆಂದ ಮಾತ್ರಕ್ಕೆ ಅದಿಲ್ಲವೆಂದಲ್ಲ. ಅದನ್ನು ಕಾಯಿಸಿ, ಹೆಪ್ಪಿಕ್ಕಿ, ಕಡೆದರೆ ಬೆಣ್ಣೆಯ ದರ್ಶನವಾಗುತ್ತದೆ. ಹಾಗೆಯೇ ಈ ವಿಶ್ವದ ರೂಪದಿಂದಲೇ ವಿಶ್ವರೂಪಿಯ ದರ್ಶನ ಮಾಡಬೇಕಾಗುತ್ತದೆ. ಅದೆಷ್ಟೋ ಮಂದಿ ಈ ನಶ್ವರ ಬದುಕಿನಿಂದಲೇ ಶಾಶ್ವತವಾದ ಸಾಧನೆಯನ್ನು ಮಾಡಿ ಚಿರಂತನವಾಗಿ ವಿಶ್ವದಲ್ಲಿ ಉಳಿದಿದ್ದಾರೆ. ನಾಶವಾಗುವ ವಸ್ತುಗಳಿಂದಲೇ ಅನಶ್ವರವಾದ ಗಳಿಕೆಯನ್ನು ನಾವು ಮಾಡಬೇಕಿದೆ. ವಿಶ್ವಾನುಭವವೇ ವಿಶ್ವಾತ್ಮನ ಅನುಭವಕೆ ಪಥ.

ವಚನಭಾಗವತ

# ವೈವಸ್ವತನ ಪೀಳಿಗೆ

ಲೇ : ತ.ಸು. ಶಾಮರಾಯ

## ಸುದ್ಯುಮ್ನ :

ರಾಜರ್ಷಿಯಾದ ಸತ್ಯವ್ರತನು ಶ್ರೀಹರಿಯ ಕೃಪೆಯಿಂದ ವೈವಸ್ವತ ಮನುವಾದುದನ್ನು ಕೇಳಿ, ಪರೀಕ್ಷಿತನ ಕುತೂಹಲ ಕೆರಳಿತು; ಆ ಮನುವಿನ ವಂಶದವರ ಕಥೆಯನ್ನು ಕೇಳಬಯಸಿದ. ಶುಕಮುನಿಯು ಅವನ ಕುತೂಹಲದಷ್ಟೇ ಉತ್ಸಾಹದಿಂದ ಅವರ ಕಥೆಯನ್ನು ಹೇಳತೊಡಗಿದ.

ಪ್ರಳಯಕಾಲದಲ್ಲಿ ಪರಮೇಶ್ವರನು ಜಗತ್ತನ್ನೆಲ್ಲ ತನ್ನಲ್ಲಿ ಅಡಗಿಸಿಕೊಂಡು ತಾನೊಬ್ಬನೇ ತನ್ನ ಲೀಲೆಯಲ್ಲಿ ಮಗ್ನನಾಗಿರಲು, ಅವನ ಹೊಕ್ಕಳಿನಿಂದ ಬಂಗಾರದ ಕಮಲವೊಂದು ಹುಟ್ಟಿ ಅರಳಿತು. ಅದರಲ್ಲಿ ಬ್ರಹ್ಮನು ಹುಟ್ಟಿದ. ಆ ಬ್ರಹ್ಮನ ಮನಸ್ಸಿನಿಂದ ಮರೀಚಿ ಹುಟ್ಟಿದ. ಆ ಮರೀಚಿಗೆ ಕಶ್ಯಪನೆಂಬ ಮಗನಾದ. ಆ ಕಶ್ಯಪನು ದಕ್ಷನ ಮಗಳಾದ ಅದಿತಿಯನ್ನು ಮದುವೆಯಾಗಿ ಅವಳಲ್ಲಿ ವಿವಸ್ವತನೆಂಬ ಮಗನನ್ನು ಪಡೆದ. ಇವನ ಮಗನೇ ವೈವಸ್ವತಮನು. ರಾಜನಾದ ಈತನಿಗೆ ಬಹುಕಾಲವಾದರೂ ಮಕ್ಕಳಾಗಲಿಲ್ಲ. ಆದ್ದರಿಂದ ಆತನು ತನ್ನ ಗುರುವಾದ ವಸಿಷ್ಠರಲ್ಲಿ ತನ್ನ ದುಃಖವನ್ನು ತೋಡಿಕೊಂಡನು. ವಸಿಷ್ಠರು ಪುತ್ರಸಂತಾನಕ್ಕಾಗಿ ಆತನಿಂದ 'ಮಿತ್ರಾವರುಣ'ವೆಂಬ ಒಂದು ಯಾಗವನ್ನು ಮಾಡಿಸಿದರು. ವೈವಸ್ವತನಿಗೆ ಮಗನಾಗಬೇಕೆಂಬ ಆಸೆಯಾದರೆ ಆತನ ಮಡದಿಯಾದ ಶ್ರದ್ಧೆಗೆ ಮಗಳಾಗಬೇಕೆಂಬ ಬಯಕೆ. ಆಕೆ ಹೋಮ ಮಾಡುವವನಲ್ಲಿ ತನ್ನ ಬಯಕೆಯನ್ನು ಹೇಳಿಕೊಂಡಳು. ಆತನು ಹೋಮ ಮಾಡುವಾಗ ಹೆಣ್ಣುಮಗಳಾಗಲೆಂದು ಮಂತ್ರ ಹೇಳುತ್ತಾ ಹೋಮಮಾಡಿದ. ಇದರ ಫಲವಾಗಿ ಶ್ರದ್ಧೆಯ ಹೊಟ್ಟೆಯಲ್ಲಿ ಇಳೆಯೆಂಬ ಮಗಳು ಹುಟ್ಟಿದಳು. ಇದನ್ನು ಕಂಡು ವೈವಸ್ವತನಿಗೆ ನಿರಾಶೆಯಾಯಿತು. ಆತ ಗುರುಗಳಾದ ವಸಿಷ್ಠರನ್ನು ಕುರಿತು 'ಏನು ಸ್ವಾಮಿ, ನೀವು ಮಂತ್ರಗಳನ್ನು ತಿಳಿದವರಲ್ಲಿ ಅಗ್ರಗಣ್ಯರು, ಮಹಾತಪಸ್ವಿಗಳು. ಆದರೂ ಗಂಡಾಗಲೆಂದು ನೀವು ಮಾಡಿದ ಯಜ್ಞದಿಂದ ಹೆಣ್ಣೇಕೆ ಹುಟ್ಟಿತು? 'ಎಂದು ಪ್ರಶ್ನಿಸಿದ. ವಸಿಷ್ಠರು ಕ್ಷಣಕಾಲ ಕಣ್ಣು ಮುಚ್ಚಿ ಧ್ಯಾನಮಗ್ನರಾಗುತ್ತಲೆ ಅವರಿಗೆ ಹೆಣ್ಣು ಹುಟ್ಟಿದುದರ ಕಾರಣ ಗೊತ್ತಾಯಿತು. ಅವರು ವೈವಸ್ವತನಿಗೆ ಅದನ್ನು ತಿಳಿಸಿ, 'ಅಯ್ಯಾ, ಚಿಂತೆಮಾಡಬೇಡ, ನನ್ನ ತಪಸ್ಸಿನ ಬಲದಿಂದ ಈ ಹೆಣ್ಣನ್ನೆ ಗಂಡಾಗಿ ಮಾಡುತ್ತೇನೆ' ಎಂದು ಹೇಳಿ, ಆ ಹೆಣ್ಣನ್ನು ಗಂಡಾಗಿ ಮಾಡುವಂತೆ ಭಗವಂತನನ್ನು ಪ್ರಾರ್ಥಿಸಿದರು. ಅದರ ಫಲವಾಗಿ ಇಳೆಯು ಗಂಡಾದಳು. ಆ ಗಂಡಿನ ಹೆಸರು ಸುದ್ಯುಮ್ನ.

ಸುದ್ಯುಮ್ನನು ಬೆಳೆದು ದೊಡ್ಡವನಾದ. ಅವನಿಗೆ ಬೇಟೆಯಲ್ಲಿ ತುಂಬ ಆಸಕ್ತಿ. ಒಮ್ಮೆ ಬಿಲ್ಲು ಬಾಣಗಳನ್ನು ಧರಿಸಿ, ತನ್ನ ಪರಿವಾರದೊಡನೆ ಬೇಟೆಗಾಗಿ ಕಾಡಿಗೆ ಹೋದ. ಅಲ್ಲಿ ಆತನು ಮೃಗಗಳನ್ನು ಅಟ್ಟಿಕೊಂಡು ಉತ್ತರದಿಕ್ಕಿನಲ್ಲಿ ಬಹುದೂರ ಹೋದ ಮೇಲೆ, ಮೇರು ಪರ್ವತದ ತಪ್ಪಲಿನಲ್ಲಿದ್ದ ಒಂದು ಉದ್ಯಾನವನ ಕಣ್ಣಿಗೆ ಬಿತ್ತು. ಸುಂದರವಾದ ಆ ವನದಲ್ಲಿ ಅವನು ಕಾಲಿಡುತ್ತಿದ್ದಂತೆಯೇ ಅವನು ಹೆಣ್ಣಾಗಿ ಹೋದ! ಅವನ ಪರಿವಾರವಾದರೂ, ಕುದುರೆ ಕೂಡ ಹೆಣ್ಣಾದರು. ಅದಕ್ಕೆ ಕಾರಣವಿಲ್ಲದೆ ಇಲ್ಲ. ಅದು ಶಿವ–ಪಾರ್ವತಿಯರ ವಿಹಾರಸ್ಥಾನ. ಒಮ್ಮೆ ಅವರು ಗುಟ್ಟಾಗಿ ವಿಹರಿಸುತ್ತಿರುವಾಗ, ಹಲವು ಋಷಿಗಳು ಶಿವನನ್ನು ನೋಡಲೆಂದು ಆ ವನಕ್ಕೆ ಹೋದರು. ಆಗ ಪಾರ್ವತಿ ಬೆತ್ತಲೆಯಾಗಿ ಶಿವನ ತೊಡೆಯ ಮೇಲೆ ಕುಳಿತಿದ್ದಳು. ಋಷಿಗಳನ್ನು ಕಂಡು ಆಕೆಗೆ ನಾಚಿಕೆಯಾಯಿತು, ಅದಕ್ಕೂ ಹೆಚ್ಚಾಗಿ ಅವಮಾನದಂತಾಯಿತು. ಆಕೆ ತಲೆ ತಗ್ಗಿಸಿದಳು. ಕ್ಷಣವೇ ಅಲ್ಲಿಂದ ಋಷಿಗಳೇನೋ ಹೊರಟುಹೋದರು. ಆದರೆ ಪಾರ್ವತಿಯ ಮನಸ್ಸಿಗೆ ಮಾತ್ರ ತುಂಬ ಅಸಮಾಧಾನವಾಗಿತ್ತು. ಆಕೆಗೆ ಸಮಾಧಾನವಾಗಲೆಂದು ಶಿವನು ಅಂದು ಶಾಪವಿತ್ತ'ಈ ವನವನ್ನು ಹೊಕ್ಕವರು ಹೆಣ್ಣಾಗಲಿ' ಎಂದು. ಪಾಪ! ಸುದ್ಯುಮ್ನ ಇಂದು ಆ ಶಾಪಕ್ಕೆ ಬಲಿಯಾದ.

ಹೆಣ್ಣಾದ ಸುದ್ಯುಮ್ನ, ಹೆಣ್ಣಾದ ತನ್ನ ಪರಿವಾರದೊಡನೆ ಆ ವನದಲ್ಲಿ ಸುತ್ತುತ್ತ ಸುತ್ತುತ್ತ ಆ ವನವನ್ನು ಬಿಟ್ಟು ಅದರ ಸಮೀಪದಲ್ಲಿದ್ದ ಬುಧನ ಉದ್ಯಾನವನಕ್ಕೆ ಬಂದನು. ಚಂದ್ರನ ಮಗನಾದ ಬುಧನು ಆ ಮೋಹನಾಂಗಿಯನ್ನು ಕಂಡು ಮೋಹಿಸಿದ. ಅವಳೂ ಅವನ ಲಾವಣ್ಯಕ್ಕೆ ಬೆರಗಾಗಿ ಅವನನ್ನು ವರಿಸಿದಳು. ಅವರಿಬ್ಬರ ಪ್ರೇಮದ ಫಲವಾಗಿ ಪುರೂರವಸ್ ಎಂಬ ಮಗ ಹುಟ್ಟಿದ. ಆ ಮಗನನ್ನು ಹೆತ್ತಮೇಲೆ ಆ ಹೆಣ್ಣಿಗೆ ಹೆಣ್ಣು ಜನ್ಮ ಸಾಕೆನಿಸಿತು. ಆಕೆ ಗುರುಗಳಾದ ವಸಿಷ್ಠರನ್ನು ನೆನೆದಳು. 'ನೆನೆದವರ ಮನದಲ್ಲಿ' ಎಂಬಂತೆ ವಸಿಷ್ಠರು ಆ ಕ್ಷಣವೇ ಅಲ್ಲಿ ಕಾಣಿಸಿಕೊಂಡರು. ಸುದ್ಯುಮ್ನನ ದುರವಸ್ಥೆಯನ್ನು ಕಂಡು ಅವರ ಕರುಳು ಕರಗಿತು. ಅವರು ಪರಶಿವನನ್ನು ಧ್ಯಾನ ಮಾಡಿದರು. ಆಗ ಶಿವನು ಪ್ರತ್ಯಕ್ಷನಾಗಿ 'ಅಯ್ಯಾ ಮಹರ್ಷಿ, ನನ್ನ ನುಡಿ ಸಟೆಯಾಗುವುದು ಸಾಧ್ಯವಿಲ್ಲ. ಆದರೂ ನಿನ್ನ ಶಿಷ್ಯನು ಇನ್ನು ಮುಂದೆ ಒಂದು ತಿಂಗಳು ಹೆಣ್ಣು, ಒಂದು ತಿಂಗಳು ಗಂಡು ಆಗಿ ತನ್ನ ರಾಜ್ಯಭಾರವನ್ನು ನಡೆಸಲಿ' ಎಂದನು. ಸುದ್ಯುಮ್ನನು ಅದೇ ಕ್ರಮದಲ್ಲಿಯೇ ರಾಜ್ಯಭಾರ ಮಾಡುತ್ತಿದ್ದನು. ಹೆಣ್ಣಾಗಿ ಪುರೂರವನನ್ನು ಪಡೆದಂತೆ ಆತನು ಗಂಡಾಗಿದ್ದಾಗ ಆತನಿಗೆ ಉತ್ಕಲ, ಗಯ, ವಿಮಲ ಎಂಬ ಮೂವರು ಮಕ್ಕಳಾದರು. ಸುದ್ಯುಮ್ನನು ಬಹುಕಾಲ ರಾಜ್ಯಭಾರ ಮಾಡುತ್ತಿದ್ದು, ಮುಪ್ಪು ಬಂದೊಡನೆಯೆ ಹಿರಿಯ ಮಗನಾದ ಪುರೂರವನಿಗೆ ಪಟ್ಟಕಟ್ಟಿ, ತಾನು ತಪಸ್ಸಿಗೆ ಹೊರಟುಹೋದನು.

**ಪೃಷಧ್ರ :**

ತನ್ನ ಕಣ್ಣೆದುರಿನಲ್ಲಿಯೇ ತನ್ನ ಮಗ ಸುದ್ಯುಮ್ನ ಮುದುಕನಾಗಿ ತಪಸ್ಸಿಗೆ ಹೋದುದನ್ನು ಕಂಡು ಮನನೊಂದು ವೈವಸ್ವತಮನು ಯಮುನಾ ತೀರಕ್ಕೆ ಹೋಗಿ, ಮಕ್ಕಳಾಗಬೇಕೆಂಬ ಬಯಕೆಯಿಂದ ಶ್ರೀಹರಿಯನ್ನು ಕುರಿತು ನೂರುವರ್ಷದ ಕಾಲ ತಪಸ್ಸು ಮಾಡಿದ. ಆತನಿಗೆ ಶ್ರೀಹರಿಯ ಕೃಪೆಯಿಂದ ಇಕ್ಷ್ವಾಕು ಮೊದಲಾದ ಹತ್ತು ಜನ ಮಕ್ಕಳು ಹುಟ್ಟಿದರು. ಅವರೆಲ್ಲರೂ ತಂದೆಯಷ್ಟೆ ಮಹಾನುಭಾವರು. ಮನುವು ಈ ಮಕ್ಕಳಲ್ಲಿ ಒಬ್ಬೊಬ್ಬನನ್ನೂ ಒಂದೊಂದು ಉದ್ಯೋಗದಲ್ಲಿ ನಿಯೋಜಿಸಿದನು. ಅವರಲ್ಲಿ ಪೃಷಧ್ರ ಎನ್ನುವನು ತಂದೆಯ ಅಪ್ಪಣೆಯಂತೆ ಗೋರಕ್ಷಕನಾದ. ಆತನು ಹಗಲಿರುಳೂ ಕತ್ತಿಯನ್ನು ಕೈಲಿ ಹಿಡಿದು, ಬಹು ಎಚ್ಚರದಿಂದ ಗೋಗಳನ್ನು ಕಾಪಾಡುತ್ತಿದ್ದನು. ಹೀಗಿರಲು, ಒಂದು ರಾತ್ರಿ ದಟ್ಟವಾಗಿ ಮೋಡ ಮುಸುಕಿ, ಭಯಂಕರವಾದ ಮಳೆ ಸುರಿಯಲು ಪ್ರಾರಂಭವಾಯಿತು. ಕಗ್ಗತ್ತಲ ಆ ಕಾಳರಾತ್ರಿಯಲ್ಲಿ ಒಂದು ಹುಲಿ ದನದ ಕೊಟ್ಟಿಗೆಗೆ ನುಗ್ಗಿತು. ಅಲ್ಲಿದ್ದ ಗೋವುಗಳೆಲ್ಲ ಭಯದಿಂದ ಅತ್ತಿತ್ತ ಓಡಲಾರಂಭಿಸಿದವು. ಅಷ್ಟರಲ್ಲಿ ಭಯಂಕರವಾದ ಆ ಹುಲಿ ಒಂದು ಒಳ್ಳೆಯ ಆಕಳನ್ನು ಹಿಡಿದೇಬಿಟ್ಟಿತು. ಒಡನೆಯೆ ಅದು ಭಯದಿಂದ ಗಟ್ಟಿಯಾಗಿ ಕೂಗಿ ಕೊಂಡಿತು. ಅದನ್ನು ಕೇಳಿದ ಪೃಷಧ್ರನು ಹಿಡಿದ ಕತ್ತಿಯೊಡನೆ ಕೊಟ್ಟಿಗೆಯೊಳಗೆ ನುಗ್ಗಿದನು. ಕಗ್ಗತ್ತಲಿನಲ್ಲಿ ಅವನಿಗೆ ಹುಲಿ ಕಾಣದಿರಲು, ಕೂಗು ಬಂದಕಡೆ ಕತ್ತಿಯನ್ನು ಬೀಸಿದನು, ಅದು ಹುಲಿಗೆ ಬದಲಾಗಿ ಒಂದು ಆಕಳಿಗೆ ತಗಲಿ, ಆ ಆಕಳು ಎರಡು ತುಂಡಾಗಿ ಬಿತ್ತು. ಕತ್ತಿಯ ಮೊನೆ ಹುಲಿಯ ಕಿವಿಗೆ ಮಾತ್ರ ತಾಕಿ, ಅದರ ಕಿವಿ ಕತ್ತರಿಸಿಹೋಯಿತು. ಭಯಗೊಂಡ ಹುಲಿ ನೆತ್ತರು ಸೋರುತ್ತಿರುವ ಕಿವಿಯೊಡನೆ ಅಡವಿಯೊಳಕ್ಕೆ ಓಡಿ ಹೋಯಿತು. ಪೃಷಧ್ರನು ಹುಲಿಯೇ ಸತ್ತಿತೆಂದು ಸಮಾಧಾನ ಮಾಡಿಕೊಂಡು ಅಲ್ಲಿಂದ ಹಿಂದಿರುಗಿದನು.

ಮರುದಿನ ಬೆಳಗ್ಗೆ ಪೃಷಧ್ರ ಹಸುಗಳ ಕೊಟ್ಟಿಗೆಗೆ ಹೋಗಿ ನೋಡಿದಾಗ, ಹುಲಿಗೆ ಬದಲಾಗಿ ಸೊಗಸಾದ ಆಕಳೊಂದು ಸತ್ತು ಬಿದ್ದಿರುವುದನ್ನು ಕಂಡು, ಅವನ ಜೀವ ತತ್ತರಿಸಿತು. ಗೋವಧೆ ಪಂಚಮಹಾಪಾತಕಗಳಲ್ಲಿ ಒಂದು. ಪೃಷಧ್ರ ದುಃಖದಿಂದ ಮುಂಗಾಣದವನಾಗಿ, ಗುರುಗಳಾದ ವಸಿಷ್ಠರ ಬಳಿಗೆ ಓಡಿದನು. ಅವರು ನಡೆದ ಕಥೆಯನ್ನೆಲ್ಲ ಕೇಳಿ ತುಂಬ ಕೋಪಗೊಂಡರು. ತಿಳಿಯದೆ ನಡೆದುಹೋದ ಕಾರ್ಯವಾದರೂ ಅವರಿಗೆ ಪೃಷಧ್ರನಲ್ಲಿ ಮರುಕ ಹುಟ್ಟಲಿಲ್ಲ. ಅವರು ಕೋಪದಿಂದ ಕುರುಡರಾಗಿ ಹೋಗಿದ್ದರೆಂದು ತೋರುತ್ತದೆ. 'ಪಾಪಿ, ನೀನು ಕ್ಷತ್ರಿಯನಾಗಿರಲು ಯೋಗ್ಯನಲ್ಲ; ಶೂದ್ರನಾಗಿ ಹೋಗು' ಎಂದು ಅವರು ಶಪಿಸಿದರು. ಪೃಷಧ್ರ ಅಧರ್ಮಕ್ಕೆ ಹೆದರುವನೇ ಹೊರತು ಶಾಪಕ್ಕಲ್ಲ. ಅವನು ತಾಳ್ಮೆಯಿಂದ ಆ ಶಾಪವನ್ನು ಸ್ವೀಕರಿಸಿದನು. ಅನಂತರ ಆತನು ಮನೆಯನ್ನು ಬಿಟ್ಟು ಹೊರಟು, ತಪಸ್ಸಿನಿಂದ ಇಂದ್ರಿಯಗಳನ್ನು ಜಯಿಸಿ ಭಗವಂತನ ಆರಾಧನೆಯಲ್ಲಿ ತೊಡಗಿದನು. ಬಹು ಬೇಗ ಆತನಿಗೆ ನಿಷ್ಕಾಮಭಕ್ತಿ ಸಿದ್ಧಿಸಿತು. ಆತನು ಜಗತ್ತನ್ನೆಲ್ಲ ಸರ್ವಸಮಭಾವದಿಂದ ಕಾಣುತ್ತ, ರಾಗಭೋಗಗಳಲ್ಲಿ ವಿರಕ್ತನಾದನು. ಅನಂತರ ಆತನು ಸನ್ಯಾಸಿಯಾಗಿ ದೇಶಸಂಚಾರ ಮಾಡುತ್ತಾ, ಹೊತ್ತಿಗೆ ಸಿಕ್ಕಿದುದನ್ನು ತಿಂದು ಕಾಲ ಹಾಕುತ್ತಿದ್ದನು. ಸದಾ ದೈವಚಿಂತನೆಯಲ್ಲಿದ್ದ ಆತನು ಜ್ಞಾನಿಯಾಗಿ ಬ್ರಹ್ಮಾನಂದವನ್ನು ಸವಿಯುತ್ತಾ ತನ್ನ ಆಯಸ್ಸನ್ನು ಸವೆಸಿದನು. ಕಡೆಗಾಲದಲ್ಲಿ ಆತನು ಕಾಡುಗಿಚ್ಚೊಂದನ್ನು ಕಂಡು, ಅದರಲ್ಲಿ ಪ್ರವೇಶಿಸಿ, ಸಾಯುಜ್ಯ ಪದವಿಯನ್ನು ಪಡೆದನು.

# ಮಕ್ಕಳ ದಿನಾಚರಣೆಯ ವರದಿ

ದಿನಾಂಕ 14/11/2018 ರಂದು ಶ್ರೀ ಮಾರುತಿ ರೆಸಿಡೆನ್ಸಿಯಲ್ ಸ್ಕೂಲ್‌ನಲ್ಲಿ ಮಕ್ಕಳ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ನಮ್ಮ ಶಾಲೆಯ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು, ಕಾರ್ಯದರ್ಶಿ ಶ್ರೀಮತಿ ಅರ್ಪಿತಾ ಗುರೂಜಿ, ಆಡಳಿತ ನಿರ್ದೇಶಕರಾದ ಶ್ರೀ ಜಿ.ಟಿ. ಹೆಗಡೆ, ಪಾಲಕ ಶಿಕ್ಷಕ ಸಂಘದ ಸದಸ್ಯರಾದ ಶ್ರೀ ಸಂತೋಷ ಪೈ, ಪ್ರಾಂಶುಪಾಲರಾದ ಶ್ರೀ ಶ್ರೀನಿವಾಸ ಬಿ.ಕೆ., ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗಳು ವಿದ್ಯಾರ್ಥಿ, ಪಾಲಕರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ವೇದಘೋಷದೊಂದಿಗೆ ಸಾಂಪ್ರದಾಯಿಕವಾಗಿ ಪ್ರಾರಂಭಿಸಲಾಯಿತು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥನಾ ಗೀತೆಯನ್ನು ಹಾಡಿದರು. ಶಾಲೆಯ ವಿದ್ಯಾರ್ಥಿಗಳ ಪ್ರತಿನಿಧಿಯಾದ ಕುಮಾರ ಎನ್. ಆರ್. ಸಮರ್ಥ ಕಾರ್ಯಕ್ರಮಕ್ಕೆ ಆಗಮಿಸಿದ ಸರ್ವರನ್ನು ತುಂಬು ಹೃದಯದಿಂದ ಸ್ವಾಗತಿಸಿದನು. ನಂತರ ಜವಾಹರಲಾಲ ನೆಹರುರವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವವನ್ನು ಸಲ್ಲಿಸಲಾಯಿತು.

ನಂತರ ಶಾಲಾ ವಿದ್ಯಾರ್ಥಿಗಳಿಂದ ಛದ್ಮವೇಷ ಸ್ಪರ್ಧೆ ಜರುಗಿತು. ವಿದ್ಯಾರ್ಥಿಗಳು ವಿವಿಧ ವೇಷಭೂಷಣಗಳಿಂದ ಎಲ್ಲರ ಮನರಂಜಿಸಿದರು. ಈ ಸಂದರ್ಭದಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ ಕುಮಾರಿ ಗೌರಿ ಹೆಗಡೆ ಇವರಿಗೆ ಶ್ರೀ ಗುರೂಜಿಯವರು ಹಾಗೂ ಸಂಸ್ಥೆಯವರು ಮತ್ತು ಶಿಕ್ಷಕರು ಗೌರವದೊಂದಿಗೆ ಬೀಳ್ಕೊಟ್ಟರು.

ಈ ಕಾರ್ಯಕ್ರಮದ ನಿರೂಪಣೆಯನ್ನು ವಿದ್ಯಾರ್ಥಿನಿಯರಾದ ಕುಮಾರಿ ಹರ್ಷಿತಾ ಮೇಸ್ತಾ ಮತ್ತು ಕುಮಾರಿ ಹೆಚ್. ಎಮ್. ಅನುರಾಗ ನಿರ್ವಹಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ವಿದ್ಯಾರ್ಥಿಯಾದ ಕುಮಾರ ಸುಜಿತ್ ಸರ್ವರನ್ನು ವಂದಿಸಿದರು.

"ಆನೋ ಭದ್ರಾಃ ಕೃತವೋಯಂತು ವಿಶ್ವತಃ" ವಾಟ್ಸಾಪ್‌ನಿಂದ ಪಡೆದದ್ದು

# ಅಜ್ಞಾನವೇ ಜ್ಞಾನವಲ್ಲ.

ಅದೊಂದು ಕಾಲವಿತ್ತು. ಮನೆಯಲ್ಲಿ ಹಿರಿಯರು ಹೇಳಿದ ಮಾತು ವೇದವಾಕ್ಯವಾಗಿತ್ತು. ಕಿರಿಯರು ಅದನ್ನ ಚಾಚೂ ತಪ್ಪದೆ ಪಾಲಿಸುತ್ತಿದ್ದರು. ಸಂಪ್ರದಾಯ, ಆಚರಣೆಗಳನ್ನು ಮಾಡುತ್ತಿದ್ದರು.

ಕಾಲ ಕ್ರಮೇಣ ಅದು ಕಿರಿಯರಿಗೆ ಕಿರಿಕಿರಿಯ ವಿಷಯವಾಯ್ತು. ಅದರ ಹಿಂದಿನ ನಿಜವಾದ ಮಹತ್ವ ತಿಳಿಸುವಲ್ಲಿ ಹಿರಿಯರು ಎಡವಿದ್ದರು. ಕೇಳುವಷ್ಟು ವ್ಯವಧಾನ ಉಳಿದವರಲ್ಲೂ ಕಡಿಮೆಯಾಗಿ ಅದೆಲ್ಲಾ ಅಂಧಾನುಕರಣೆ ಎನ್ನುವ ಭಾವನೆಮೂಡಿತು.

ಜೊತೆ ಜೊತೆಗೆ ಪಾಶ್ಚಾತ್ಯ ಪದ್ದತ್ತಿಗಳನ್ನು ಅನಿಸರಿಸುವ ಆಸಕ್ತಿ ನಮ್ಮತನವನ್ನು ಉಳಿಸಿಕೊಲುವುದರಲ್ಲಿ ಇರಲಿಲ್ಲ. ಹೆಚ್ಚು ಕಡಿಮೆ ಎಲ್ಲಾ ಪದ್ದತಿಗಳು ಮೂಲೆಗುಂಪಾದವು. ಅದೇ ಸಮಯಕ್ಕೆ so called ಬುದ್ದಿ ಜೀವಿಗಳು ಪ್ರಶ್ನೆಮಾಡಿ ಮಾಡಿ ನಮ್ಮ ನಂಬಿಕೆಗಳೇ ತಪ್ಪು ಎನ್ನುವ ರೀತಿ ವರ್ತಿಸಿದರು.

ಕಾಲ ಕ್ರಮೇಣ ನಮ್ಮ ಪದ್ದತಿಗಳೇ ಸರಿ ಎಂಬುದು ವಿಶ್ವಕ್ಕೆ ತಿಳಿದರೂ ಅದನ್ನೂ ಒಪ್ಪಿಕೊಂಡು ಅನುಸರಿಸುವಲ್ಲಿ ಮತ್ತೆ ನಾವು ಎಡುವುತ್ತಿದ್ದೇವೆ.

ನಮ್ಮ ಪ್ರತಿಯೊಂದು ಆಚರಣೆಯ ಹಿಂದೆಯೂ ವೈಜ್ಞಾನಿಕ ತರ್ಕವಿತ್ತು. ಅದನ್ನು ಅರಿಯದ ನಾವು ಮೂಢನಂಬಿಕೆ ಹೆಸರಲ್ಲಿ ಎಲ್ಲಾ ಬಿಟ್ಟು, ಮತ್ತದೇ ಸೋಗಲಾಡಿ ಜಾಹೀರಾತಿಗೆ ಮರುಳಾಗುತ್ತಿದ್ದೇವೆ.

ಮೊದಲು ಇದ್ದಲು, ಉಪ್ಪು, ಬೇವಿನಕಡ್ಡಿ ಉಪಯೋಗಿಸಿ ಹಲ್ಲುಜ್ಜುವುದನ್ನು ತಪ್ಪು ಎಂದೂ ಹೇಳಿದ ಕಂಪನಿಗಳು ಈಗ ಅದೇ ಹಳೇ ರಾಗ ಹಾಡುತ್ತಿದೆ. ನಿಮ್ಮ ಟೂತ್ ಪೇಸ್ಟ್ ಅಲ್ಲಿ ಉಪ್ಪು ಇದೆಯಾ, ಲವಂಗ ಇದ್ಯಾ ಅಂತ!

ಮುಂಚೆ ನಮ್ಮಜ್ಜ ಹೇಳ್ತಾ ಇದ್ದರು. ಬೆಳಿಗ್ಗೆ ಎದ್ದ ಕೂಡಲೇ ರಾತ್ರಿ ತುಂಬಿಟ್ಟ ತಾಮ್ರದ ತಂಬಿಗೆಯ ನೀರು ಕುಡಿಯಬೇಕು ಅಂತ. ಈಗ ವಾಟರ್ filter ಕಂಪನಿಯವರು ಅದನ್ನೇ ಹೇಳುತ್ತಿದ್ದಾರೆ.

ತಾಮ್ರದ ತಂಬಿಗೆಯಲ್ಲಿ ನೀರು ಸಂಗ್ರಹಿಸಿ ಕುಡಿಯಿರಿ, ಪ್ಲಾಸ್ಟಿಕ್‌ನಲ್ಲಿ ಸಂಗ್ರಹಿಸಿದ ನೀರು ಕ್ಯಾನ್ಸರಕಾರಕ.. ಅಜ್ಜ ಇದನ್ನೇ ಅಲ್ವಾ ಹೇಳ್ತಾ ಇದ್ದಿದ್ದು??

ಮಡಿ, ಮುಸುರೆ, ಎಂಜಲು ಹೀಗೆ ಬೇರೆ ಬೇರೆ ಇಡುವ ಪದ್ಧತಿಯಿತ್ತು. ಈಗಿನವರಿಗೆ ಇದು ಹಾಸ್ಯಾಸ್ಪದ. ಆದರೆ ಅದರ ಹಿಂದೆ logic ಇತ್ತು.

ಉಪ್ಪು, ಸಕ್ಕರೆ ತರದ ಪದಾರ್ಥಗಳು ತುಂಬಾ ದಿನದವರೆಗೆ ಉಪಯೋಗಿಸಬಹುದಾದ ವಸ್ತುಗಳು. ಹಾಲು, ಮೊಸರು, ಮುಂತಾದವು ಬೇಗ ಹಾಳಾಗುವ ಪದಾರ್ಥ. ಒಂದಕ್ಕೆ ಒಂದು ಬಿದ್ದು ಹಾಳಾಗುವುದನ್ನು ತಪ್ಪಿಸಲು ಈ ವಿಧಾನ ಅನುಸರಿಸಲಾಗುತ್ತಿತ್ತು. ಇನ್ನು ಒಬ್ಬರು ತಿಂದು ಬಿಟ್ಟದ್ದನ್ನು ಮತ್ತೊಬ್ಬರಿಗೆ ಕೊಡುತ್ತಿರಲಿಲ್ಲ.

ಈಗ ಡಾಕ್ಟರ್ ಅದನ್ನೇ ಹೇಳುವುದು. ಸಾಂಕ್ರಾಮಿಕ ರೋಗಗಳು ಬರದಂತೆ ತಡೆಗಟ್ಟಲು ಇದು ಸಹಾಯಕಾರಿ!

ಆಯಾ ಕಾಲಕ್ಕೆ ತಕ್ಕಂತೆ ಹಬ್ಬಗಳು, ಅದಕ್ಕೆ ತಕ್ಕಂತೆ ತಿನಿಸುಗಳು.

ಚಳಿಗಾಲದ ಸಮಯದಲ್ಲಿ ಬರುವ ಸಂಕ್ರಾಂತಿಗೆ ತಿನ್ನುವ ಎಳ್ಳು ಬೆಲ್ಲ ಚಳಿಗಾಲದಲ್ಲಿ ಒಣಗಿದ ಚರ್ಮಕ್ಕೆ ಬೇಕಾದ ಎಣ್ಣೆ ಅಂಶ ದೇಹಕ್ಕೆ ಒದಗಿಸುತ್ತದೆ.

ಹಬ್ಬ ಹಬ್ಬಕ್ಕೆ ಮಾಡುವ ಅಭ್ಯಂಗ ದೇಹಕ್ಕೆ ಶಕ್ತಿ ಕೊಡುತ್ತದೆ. ಎಣ್ಣೆ ನೀರು ದೇಹದ ರಕ್ತ ಸಂಚಾರ ಹೆಚ್ಚಾಗುವಂತೆ ಮಾಡುತ್ತದೆ.

ಮುಂಬಾಗಿಲಲ್ಲಿ ಹಾಕುವ ಸಗಣಿ ನೀರು ಕ್ರಿಮಿ ಕೀಟಗಳು ಮನೆಯೊಳಗೆ ಬರುವುದನ್ನು ತಪ್ಪಿಸುತ್ತದೆ.

ತಿಂಗಳಿಗೊಮ್ಮೆ ಮಾಡುವ ಸಂಕಷ್ಟಿ ಉಪವಾಸ ದೇಹದ ಪಚನಕ್ರಿಯೆಗೆ ಒಂದಷ್ಟು ವಿಶ್ರಾಂತಿ ಕೊಟ್ಟು ದೇಹದ ಜೊತೆಗೆ ಮನಸ್ಸಿನ ಹತೋಟಿಗೂ ಸಹಾಯಮಾಡುತ್ತದೆ.

ವಿಠ್ಠಲ ನಾಮಸ್ಮರಣೆಯಿಂದ ಹೃದಯಾಘಾತ ತಪ್ಪುತ್ತದೆ ಎನ್ನುವುದು ಇತ್ತೀಚೆಗೆ ಸಂಶೋಧನೆಯಿಂದ ದೃಢಪಟ್ಟ ವಿಷಯ.

ಸಂಧ್ಯಾವಂದನೆ ಕೇವಲ ಒಂದು ಆಚರಣೆಯಲ್ಲ, ಅದೊಂದು ಯೋಗ ಪ್ರಾಣಾಯಾಮ ಸೇರಿದ ಅಭ್ಯಾಸ. ಗಮನಿಸಿ ನೋಡಿ, ಅದರಲ್ಲಿ ಪ್ರಾಣಾಯಾಮವಿದೆ.

ಮೊದಲೆಲ್ಲಾ ಆರೋಗ್ಯದ ಏರುಪೇರಿಗೆ ಅಜ್ಜಿಯ ಕಷಾಯ, ಅಳಲೇಕಾಯಿ, ಮನೆಮದ್ದು ಸಾಕಿತ್ತು. ಈಗ ನಾವು ದೇಹವನ್ನು ಮೊದಲಿನಿಂದಲೇ ಬೇರೆ ಔಷಧಿಗಳ ಪ್ರಯೋಗಾಲಯ ಮಾಡಿದ್ದೇವೆ.

ಎಲ್ಲದ್ದಕ್ಕೂ ಮಾತ್ರೆ, ಔಷಧಿ.. ಸಣ್ಣ ಪುಟ್ಟ ಖಾಯಿಲೆಗೆ ವೈದ್ಯರು!

ನಮ್ಮ ರೋಗನಿರೋಧಕ ಶಕ್ತಿಯನ್ನು ನಾವೇ ಕುಗ್ಗಿಸಿಬಿಟ್ಟಿದ್ದೇವೆ.

ಮನೆಯಲ್ಲಿ ಯಾವುದಾದರೂ ದೇವರ ಪೂಜೆ, ಕಾರ್ಯವಿದ್ದರೆ ಹಿಂದಿನ ದಿನ ರಾತ್ರಿ ಫಲಹಾರ, ಬೆಳಿಗ್ಗೆ ಉಪವಾಸ, ಕಾರಣ ಸರಳ. ವಾಯುಕಾರಕ ಪದಾರ್ಥಗಳನ್ನು ಸೇವಿಸಿದರೆ ಅದು ಆರೋಗ್ಯವನ್ನು ಏರುಪೇರು ಮಾಡುತ್ತದೆ.

ಇನ್ನು ಒಂದಷ್ಟು ಪದಾರ್ಥಗಳು ವರ್ಜ್ಯವೆನ್ನಲು ಇದೆ ಕಾರಣ. ಆಹಾರ ಪದಾರ್ಥಗಳನ್ನು ವಿಂಗಡಿಸಿದ್ದಾರೆ ಹಿರಿಯರು. ತಾಮಸ, ರಾಜಸಿಕ ಅಂಶದ ಪದಾರ್ಥ ಹೀಗಾಗಿ ವರ್ಜ್ಯವೆಂದು ಇದಕ್ಕೇ ಹೇಳುತ್ತಿದ್ದರು.

ಬಾಳೆಎಲೆಯಲ್ಲಿ ಊಟ ಮಾಡುವುದು ಒಳ್ಳೆಯದು,, ಏಕೆಂದರೆ ಅದು ದೇಹಕ್ಕೆ ಅಗತ್ಯವಿದ್ದ ಒಳ್ಳೆ ಅಂಶವನ್ನು ನೀಡುತ್ತದೆ. ಹಾಗೆಯೇ ವಿಷದ ಪದಾರ್ಥ ಅದರ ಮೇಲೆ ಬಿದ್ದರೆ ಅದು ಕಪ್ಪಾಗುತ್ತದೆಯಂತೆ!

ಅಷ್ಟಕ್ಕೂ.... ನಮ್ಮ ಅಜ್ಜನ ಕಾಲದಲ್ಲಿ ಕಿಡ್ನಿ ಸ್ಟೋನ್ ಇಲ್ಲ ಎನ್ನುವಷ್ಟು ವಿರಳವಾಗಿತ್ತು.

ಊಟದ ವಿಷಯದಲ್ಲೂ ವಿಜ್ಞಾನವಿದೆ..

ಮೊದಲು ಅಜ್ಜಿ ಹೇಳ್ತಾ ಇದ್ದರು.

ನಾವು ತಿನ್ನಬೇಕಿರುವುದು ಒಂದು ಮುಷ್ಟಿ ಅನ್ನ, 32 ತುತ್ತು, ಒಂದೊಂದು ತುತ್ತು 32 ಸಲ ಅಗೆದು ತಿನ್ನಿ ಅಂತ ಇದನ್ನೇ ಮಾಡಿದರೆ ಯಾವ diet ಯಾಕೆ ಬೇಕು ಹೇಳಿ?

ಹಾ! ಮತ್ತೊಂದು....

ಊಟದ ಮೊದಲು ಚಿತ್ರ ಇಟ್ಟು, ಎಲೆ ಸುತ್ತ ನೀರು ಹಾಕುವುದು ಯಾವುದೇ ಸಣ್ಣ ಕ್ರಿಮಿ ಕೀಟಗಳು ಬಾಳೆಲೆಗೆ ಬಾರದಿರಲಿ ಅಂತ..

ಬೆಳ್ಳಿಯಲ್ಲಿ ರೋಗನಿರೋಧಕ ಶಕ್ತಿ ಇರೋದ್ರಿಂದ ಬೆಳ್ಳಿ ತಟ್ಟೆಯಲ್ಲಿ ಊಟ ಮಾಡಿ ಅಂತ ಹೇಳ್ತಾ ಇದ್ರು..

ಸಂಜೆ ಕತ್ತಲಾದ ಮೇಲೆ ಕಸಗುಡಿಸಿ ಕಸ ಹೊರಗೆ ಹಾಕಿದ್ರೆ ಅಮೂಲ್ಯವಾದ ವಸ್ತುಗಳು ಏನಾದ್ರೂ ಇದ್ದು ಕತ್ತಲೆಗೆ ಕಾಣದೆ ಇದ್ರೆ ಕಷ್ಟ ಅನ್ನೋದು ಸಂಜೆ ವೇಳೆಗೆ ಕಸ ತೆಗಿಬಾರ್ದು ಅನ್ನೋದಕ್ಕೆ ಕಾರಣ.

ಮೈ ಮೇಲೆ ಚೂರಾದ್ರು ಬಂಗಾರ ಇರ್ಲಿ ಅಂತ ಹೇಳ್ತಿದ್ರು ಅಲ್ವಾ? ಬಂಗಾರದ ಮೇಲೆ ನೀರು ಬಿದ್ದ ನೀರು ಮೈ ಮೇಲೆ ಬಿದ್ರೆ ಚರ್ಮರೋಗ ನಿವಾರಣೆಗೆ ಸಹಾಯಮಾಡುತ್ತದೆ.

ಬಹುಶಃ ಹೀಗೆ ಹೇಳುತ್ತಾ ಹೋದರೆ ಒಂದು ಪುಸ್ತಕ ಆಗಬಹುದು.

ಇದು ಒಂದು ಕಿರುಪ್ರಯತ್ನ. ನಮ್ಮ ನಡುವೆ ಇರುವ ಆಚಾರ ವಿಚಾರಗಳನ್ನು ಅರ್ಥೈಸಿ ಆಚರಿಸೋಣ!

# ಔಷಧೀಯ ಸಸ್ಯ ಸಂಪತ್ತು

ಲೇ : ಶ್ರೀ ಪಿ. ಎಸ್. ವೆಂಕಟರಾವ್ ದೈತೋಟ

**ಅರಳಿ ಮರ**

ಸಾಮಿಪ್ಯದಿಂದಲೇ ಸ್ವಾಸ್ಥ್ಯವೀಯುವ ವೃಕ್ಷರಾಜ

**ಹೆಸರುಗಳು**

ಕನ್ನಡ: ಅಶ್ವತ್ಥ, ಅರಳಿ, ಅರಸೇಮರ, ರಂಗಿಬಸರಿ: ತುಳು: ಅತ್ತಸ್, ಅಸ್ವತ್ತು; ಮರಾಠಿ, ಕೊಂಕಣಿ: ಪಿಪಳ್: ತೆಲಗು: ರಾವಿಚೆಟ್ಟು: ಹಿಂದಿ: ಪೀಪಲ್: ತಮಿಳು: ಅರಶುಮರಂ: ಮಲಯಾಳ: ಅರಯಾಲ್ ಸಂಸ್ಕೃತ: ಬೋದಿ, ಅಶ್ವತ್ಥ, ಚಲಪತ್ರಕ, ಲಘುಪತ್ರಕ, ಶ್ರೀವೃಕ್ಷ: ಇಂಗ್ಲಿಷ್: Bo tree Sacred fig tree, Peepul Tree, Holy fig: ಸಸ್ಯ ಶಾಸ್ತ್ರೀಯ: Ficus religiosa L.

ಕುಟುಂಬ: Moraceae:

ಉಪಯೋಗ: ಪ್ರತಿ ಭಾಗ ಪ್ರತ್ಯೇಕವಾಗಿ,

**ಮೂಲಿಕಾ ಪರಿಚಯ**



ಅತಿ ಹಗುರವಾದ ಅತಿಹೆಚ್ಚು ಪತ್ರಸೂಕ್ಷ್ಮ ರಂಧ್ರಗಳುಳ್ಳ(stomata), ಸಮರ್ಪಕ ವಾತಾಯನ ವ್ಯವಸ್ಥೆ ಪಡೆದ, ನಯ ಮೈ ಹಾಗೂ ಹೊಳೆತಗಳನ್ನುಳ್ಳ ಎಲೆಗಳು, ಮಳೆನೀರನ್ನು ಕ್ಷಿಪ್ರವಾಗಿ ಇಳಿಸಿ ಬಿಡಲು ಚೂಪುತುದಿ, ನಿರಂತರ ಚಲನೆಗಳನ್ನೂ, ಚಲನೆಯನ್ನು ಸಹಿಸಲು ಸ್ಪ್ರಿಂಗಿನಂತಹ ದಂತವರ್ಣದ ತೊಟ್ಟುಗಳನ್ನೂ ಹೊಂದಿದೆ. ಅಗಾಧ ಪ್ರಮಾಣದ ಮರದ ಉಸಿರಾಟಕ್ಕೆ ಇದು ಅವಶ್ಯ ಕೂಡ, ಹೆಚ್ಚಿನ ಬಿಳಲುಗಳು ತೊಗಟೆಯೊಳಗಿನಿಂದಲೇ ಬೆಳೆಯುತ್ತ ಕಾಂಡವನ್ನು ಬಲಗೊಳಿಸುತ್ತವೆ. ಕಲ್ಲನ್ನಾದರೂ ಒಡೆದು ಭದ್ರವಾಗಿ ಬೆಳೆಯಬಲ್ಲ ಬೇರುಗಳು. ಇವು ಶತಮಾನಗಳ ಕಾಲ ಬೆಳೆಯುವ ಚೈತನ್ಯ ಗಳಿಸಿದ ಆಕರ್ಷಕ ಮಹಾನ್ ವೃಕ್ಷ ಅಶ್ವತ್ಥದ ಸಾಮಾನ್ಯ ವೈಶಿಷ್ಟ್ಯಗಳು. ಶ್ರೀಲಂಕಾದಲ್ಲಿ 2,300 ವರ್ಷಗಳಷ್ಟು ಹಳೆಯ ಮರವೊಂದು ಗುರುತಿಸಲ್ಪಟ್ಟಿದೆ. ಭಾರತವೇ ಇದರ ಮೂಲ. ಗಾಂಧಾರ (ಅಫಘಾನ್) ದಿಂದ ವಿಯತ್‌ನಾಮ್ ವರೆಗೆ ಬಿಳಲೂರಿದೆ. ಆಭರಣಗಳ ಟೊಳ್ಳುಭಾಗ ಭರ್ತಿಗೊಳಿಸಲು ಮರದ ''ಹಾಲುಮೇಣದ'' ಬಳಕೆಯಿತ್ತು. ಮರ ಕೆತ್ತನೆಗೆ ಉತ್ತಮ. ವೇದದಲ್ಲಿ ಈ ಮರದ ಪಾತ್ರೆಗಳ ಉಪಯೋಗ ಹೇಳಿದೆ. ಔಷಧಗಳನ್ನು ಈ ಪಾತ್ರೆಗಳಲ್ಲಿ "ಸಂಧಾನ"ಗೊಳಿಸಲು ತಿಳಿಸಲ್ಪಟ್ಟಿದೆ. ಚಿಗುರೆಲೆ, ಹಣ್ಣು ಆಹಾರವಾಗಿಯೂ, ಎಲೆಗಳು ಆನೆಗಳ, ಜಾನುವಾರಗಳ ಪ್ರಿಯ ಮೇವು ಆಗಿದೆ. ಕಟ್ಟಡಗಳ ಆಗ್ನೇಯ ದಿಕ್ಕಿನಲ್ಲಿ ಬೆಳೆಯಸತಕ್ಕ ಮರವೆಂದು 'ಮನುಷ್ಯಾಲಯ ಚಂದ್ರಿಕೆ' ತಿಳಿಸುತ್ತದೆ. ಹಿಂದುಗಳು, ಬೌದ್ಧರಿಗೆ ಪೌರಾಣಿಕವಾಗಿ ಪೂಜ್ಯ ದೇವಾಲಯ, ಕೂಡುರಸ್ತೆಗಳೇ ಮೊದಲಾದ ಜನಸಂಮರ್ದತೆಯ ಜಾಗಗಳಲ್ಲಿ ನೆಟ್ಟು, ಬೆಳೆಸಿ ಕಟ್ಟೆ ರಚನೆ, ಸಂಸ್ಕಾರಗಳನ್ನು ನಡೆಸುವುದು ಸಂಪ್ರದಾಯ. ಆಯುರ್ವೇದದ 'ಪಂಚವಲ್ಕಲ', ಚತುಃಕ್ಷೀರಿವೃಕ್ಷ'ಗಳಲ್ಲಿ ಒಂದು, ಮರದ ಪ್ರತಿ ಅಂಗಭಾಗವು ಹಲವಾರು ರೋಗಗಳಿಗೆ ಔಷಧ, ಕಫದೋಷ, ವಾತರಕ್ತ, ರಕ್ತಪಿತ್ತ, ವಿಷ, ಚರ್ಮರೋಗಗಳು, ಬಾಯಿ, ಹಲ್ಲುಗಳ ತೊಂದರೆ, ವಾಂತಿ, ಅತಿಸಾರ, ನೋವು, ಶ್ವಾಸರೋಗ, ಭಗಂಧರ, ಬೆಂಕಿಹುಣ್ಣು ಇವುಗಳ ಚಿಕಿತ್ಸೆಯಲ್ಲಿ ನಿಯೋಜನೆಗೊಂಡಿದೆ. ಕುಷ್ಠ, ಯೋನಿರೋಗ, ಗರ್ಭಸ್ಥಾಪನೆ ಇವುಗಳಲ್ಲಿ ವಿಶಿಷ್ಟ ಇಷ್ಟೇ ಅಲ್ಲ, ಮರದ ಸಾಮಿಪ್ಯದಿಂದ ಮಾನಸಿಕರೋಗ ಶಮನವಾಗುವುದೆಂದೂ ನಂಬುಗೆ. ಈ ಮರದ ಹೋಲಿಕೆಯ ಭೇದಗಳು: ಹೆಣ್ಣು ಅಶ್ವತ್ಥ-ಸಣ್ಣ ಎಲೆಯದು, 2. ನಪುಂಸಕ ಅಶ್ವತ್ಥ- ಉದ್ದ ಎಲೆಯದು( ಕೇರಳದ ದಕ್ಷಿಣ ತುದಿ, ಆಗ್ನೇಯ ದ್ವೀಪಗಳ ವಾಸಿ), 3. ಕಲ್ಪಶ್ವತ್ಥ- ಬಂಡೆಗಳ ಮೇಲೆಯೇ ಬೆಳೆಯುವ ಸಣ್ಣಮರ- ಇವು ಮೂರು. ಪರಿಶಿಷ್ಟ-ಇತ್ತೀಚೆಗೆ ಅಶ್ವತ್ಥಮರವು ಉಳಿದ ಯಾವುದೇ ಮರದ 100ಪಟ್ಟು ಆಮ್ಲಜನಕ(Oxygen)ವನ್ನುತ್ಪತ್ತಿಸಿ ಪರಿಸರಕ್ಕೆ ಬಿಡುವುದೆಂದೂ, ವಾತಾವರಣದ ಕಶ್ಮಲಗಳನ್ನು ಹೀರುವುದೆಂದೂ ಸಂಶೋಧನಾಪೂರ್ವಕ ಸ್ಥಿರಪಟ್ಟದೆ. ಈ ಗುಣವೊಂದೇ ಸಾಲದೆ ಮರದ ಪೂಜ್ಯತ್ವ ಸಾರಲು?

**ಉಪಯೋಗಗಳು**

ಚಿಕ್ಕ ಮಕ್ಕಳ ಉಗ್ಗು (ಕೊಕ್ಕಳಿ) ಮಾತುಕಟ್ಟುವಿಕೆಗೆ: ಅಶ್ವತ್ಥದ ಹಣ್ಣುಗಳನ್ನು 4 ರಿಂದ 8 ತಿನ್ನುವುದು- ಒಂದೆರಡು ವಾರ. ಮೊಲೆಹಾಲು ಕಡಿಮೆಯಾದಾಗ: ಅಶ್ವತ್ಥದ 20 ರಿಂದ 25 ಎಳೆ ಚಿಗುರುಗಳನ್ನು ದನದ ನೊರೆಹಾಲು ಒಂದು ಲೋಟದಲ್ಲಿ ನಯವಾಗಿ ಅರೆದು ಬೆಳಗ್ಗೆ ಖಾಲಿ ಹೊಟ್ಟೆಗೆ ಸೇವನೆ. (3 ರಿಂದ 6ದಿನ)

---

ಸುಂದರ ಕಾಂಡದ ಸೌಂದರ್ಯ

# ಶ್ರೀ ವೀರಾಂಜನೇಯ

ಲೇ॥ ರಾಮಕೃಷ್ಣ. ಎನ್. ಹೆಗಡೆ

ಹನುಮಂತನು ಸೀತೆಯಿಂದ ತಾನು ಪಡೆದು ತಂದಿದ್ದ ಚೂಡಾಮಣಿಯನ್ನು ಶ್ರೀರಾಮನಿಗೆ ಸಮರ್ಪಣೆ ಮಾಡಿದನು. ಹಾಗೆಯೇ ಸೀತೆಯ ನುಡಿದಿದ್ದ ಸಂದೇಶದ ಮಾತುಗಳನ್ನು ವಿವರಿಸಿ ಹೇಳಿದನು. ಸೀತೆಯು ಬಹಳ ದುಃಖದ ಸಮಯದಲ್ಲಿಯೂ ಕೂಡ ಚೂಡಾಮಣಿಯನ್ನು ನೋಡುತ್ತಾ ತನಗಾದ ದುಖಃವನ್ನು ಮರೆಯುತ್ತಿದ್ದಳು. ಅಂತಹ ಅಮೋಘವಾದ ಕಾಂತಿಯನ್ನು ಚಿಮ್ಮುತ್ತಿರುವ ಚೂಡಾಮಣಿಯನ್ನು ಶ್ರೀರಾಮನ ಬಳಿಗೆ ಸೀತೆಯು ಕಳುಹಿಸಿರುವ ಮಹತ್ವವನ್ನು ವಿವರಿಸಿದನು. ಹಾಗೆಯೇ ಸೀತೆಯು ಅಂತಹ ರಾಕ್ಷಸರ ಮಧ್ಯದಲ್ಲಿದ್ದರೂ ಪ್ರಾಣವನ್ನು ಧರಿಸಿದ್ದಾಳೆಂದಾದರೆ ಅದು ಶ್ರೀರಾಮನಿಗಾಗಿ ಎನ್ನುವ ಮಹತ್ವದ ಸಂದೇಶವನ್ನು ಕೂಡ ಹೀಗೆ ವಿವರಿಸುತ್ತಾನೆ.

ಏತಂ ದೃಷ್ಟ್ವಾ ಪ್ರಮೋದಿಷ್ಯೇ ವ್ಯಸನೇ ತ್ವಾಮಿವಾನಘ ।
ಜೀವಿತಂ ಧಾರಯಿಷ್ಯಾಮಿ ಮಾಸಂ ದಶರಥಾತ್ಮಜ ।
ಊರ್ಧ್ವಂ ಮಾಸಾನ್ನ ಜೀವೇಯಂ ರಕ್ಷಸಾಂ ವಶಮಾಗತಾ ॥

ನಾನು ಇನ್ನು ಒಂದು ತಿಂಗಳ ಅವಧಿಯವರೆಗೆ ಬದುಕಿರಬಲ್ಲೆನು. ಈ ಒಂದು ತಿಂಗಳ ಅವಧಿಯು ಮುಗಿದ ಬಳಿಕ ರಾಕ್ಷಸರ ರಾಜ್ಯದಲ್ಲಿ ಬಂಧಿಯಾಗಿರುವ ನಾನು ಜೀವಿಸಲಾರೆನು, ಎನ್ನುವ ಸಂದೇಶವನ್ನು ಸೀತೆಯೇ ಹೇಳಿರುವಳು. ಇದರಿಂದಾಗಿ ನಾವೂ ಮಾಡಬೇಕಾಗಿರುವ ಕರ್ತವ್ಯವನ್ನು ಇಲ್ಲಿ ಹನುಮಂತನು ತನ್ನ ಮಾತಿನ ಚಾತುರ್ಯದಿಂದ ಎಲ್ಲರಿಗೂ ತಿಳಿಸಿ ಹೇಳುತ್ತಾನೆ.

ಅಂದರೆ ನಮಗೆ ಸೀತೆಯನ್ನು ಮರಳಿ ಕರೆತರುವುದಕ್ಕೆ ಬಹಳ ಸಮಯವಿಲ್ಲ ಇರುವ ಈ ಅಲ್ಪ ಅವಧಿಯಲ್ಲಿ ಸಾಧಿಸಬೇಕಾಗಿರುವ ಕಾರ್ಯಗಳು ಬಹಳವೇ ಇವೆಯೆಂಬ ಸತ್ಯವನ್ನು ಎಲ್ಲರೂ ತಿಳಿದುಕೊಳ್ಳುವಂತೆ ಮಾಡುತ್ತಾನೆ. ಶ್ರೀರಾಮ ಲಕ್ಷ್ಮಣರೊಂದಿಗೆ ಕೂಡಿರುವ ಈ ಕಪಿಸೈನ್ಯವು ಸಾಗರವನ್ನು ದಾಟಿ ಲಂಕೆಗೆ ಹೋಗಿ ಸೀತೆಯನ್ನು ಕಾಣುವ ವಿಚಾರವಾಗಿ ಚಿಂತನೆ ಮಾಡಬೇಕಾಗಿದೆ ಏಕೆಂದರೆ ಅಷ್ಟೊಂದು ದೊಡ್ಡದಾದ ಮಹಾಸಾಗರವನ್ನು ಈ ಸೈನ್ಯವು ದಾಟುವುದು ಸುಲಭದ ಮಾತಲ್ಲ. ಅದಕ್ಕಾಗಿ ಒಂದು ಮಹಾಕಾರ್ಯವೇ ನಡೆಯಬೇಕಾಗಿದೆ. ಈ ಎಲ್ಲಾ ವಿಚಾರಗಳನ್ನು ತಿಳಿದುಕೊಂಡಿರುವ ಹನುಮಂತನು ಸಂದರ್ಭಕ್ಕನುಗುಣವಾದ ಮಾತನಾಡುತ್ತಾನೆ.

ಏತದೇವ ಮಯಾಖ್ಯಾತಂ ಸರ್ವಂ ರಾಘವ ಯದ್ಯಥಾ ।
ಸರ್ವಥಾ ಸಾಗರಜಲೇ ಸಂತಾರಃ ಪ್ರವಿಧೀಯತಾಮ್ ॥

ಮಹಾಸ್ವಾಮಿಯಾದ ಶ್ರೀರಾಮ ಪ್ರಭುವೇ! ನಾವೆಲ್ಲ ಈಗ ಸಮುದ್ರವನ್ನು ದಾಟಿ ಲಂಕೆಗೆ ಹೋಗಬೇಕಾಗಿರುವ ಉಪಾಯವನ್ನು ಆಲೋಚಿಸೋಣ. ನಾವೆಲ್ಲ ಲಂಕೆಯನ್ನು ತಲುಪಿ ಅನಂತರ ಸೀತೆಯನ್ನು ಕರೆತರುವ ಕಾರ್ಯವು ನಡೆಯಬೇಕಿದೆ ಹಾಗಾಗಿ ಆ ವಿಷಯದತ್ತ ಎಲ್ಲರ ಚಿತ್ತವೂ ಇರಲಿ ಎಂದೂ ತನ್ನ ಅಭಿಪ್ರಾಯವನ್ನು ಹೇಳುತ್ತಾನೆ.

ಹನುಮಂತನ ಈ ಮಾತುಗಳಿಂದ ಪರಮಾನಂದ ಹೊಂದಿದ ಶ್ರೀರಾಮನು ಹನುಮಂತನ ಕುರಿತಾಗಿ ಪ್ರಶಂಸೆಯನ್ನು ವ್ಯಕ್ತಪಡಿಸುತ್ತಾನೆ.

......ಮುಂದುವರಿಯುವುದು.

॥ ಪ್ರಸೀದತು ಶ್ರೀ ವೀರಾಂಜನೇಯಃ ॥

**ವಿಶ್ವ ವೀರಾಂಜನೇಯ ಮಹಾಸಂಸ್ಥಾನಮ್, ಹೇಮಪುರ ಮಹಾಪೀಠಮ್. ಶ್ರೀಕ್ಷೇತ್ರ ಬಂಗಾರಮಕ್ಕಿ.**
**ಶ್ರೀ ಅನ್ನಪೂರ್ಣೇಶ್ವರಿ ದೇವಿಯ ಸನ್ನಿಧಿಯ ನಿತ್ಯ ಅನ್ನದಾನ ನಡೆಯುವ ಸ್ಥಳದ ಮೇಲ್ಛಾವಣಿಯ ಕೆಲಸಕ್ಕೆ ಹಣ ನೀಡಿರುವ ಭಕ್ತಾದಿಗಳ ಯಾದಿ**

| ನಂ. | ದಾನಿಗಳ ಹೆಸರು | ಮೊತ್ತ |
|---|---|---|
| 1 | ಶ್ರೀ ಹರಿಕೃಷ್ಣ ಭಟ್ಟ, (ECOZEN) ಶಿವಮೊಗ್ಗ. | 60,000 |
| 2 | ಶ್ರೀ ಆರ್. ನಾಗಾರ್ಜುನ್, ಬಳ್ಳಾರಿ. | 60,000 |
| 3 | ಶ್ರೀ ಕೊಡಂದೇರ ಕೆ. ಅಪ್ಪಯ್ಯ, ಮಡಿಕೇರಿ. | 50,000 |
| 4 | ಶ್ರೀ ಎಸ್. ಎಮ್. ನಟರಾಜ್, ದಾವಣಗೆರೆ. | 40,000 |
| 5 | ಶ್ರೀ ಬಿ. ಆರ್. ಭಟ್ಟ್, ಕದ್ರಿ, ಮಂಗಳೂರು. | 25,000 |
| 6 | ಶ್ರೀಮತಿ ಪಾಲಂದಿರ ಗಂಗಮ್ಮ ಗಣೇಶ. | 25,000 |
| 7 | ಶ್ರೀಮತಿ ಅರ್ಚನಾ ಹರಿಜನ, ಹೊನ್ನಾವರ. | 13001 |
| 8 | ಶ್ರೀಮತಿ ಬಿಳಿಯಮ್ಮ, ಮಾವಿನಕುರ್ವ. | 10,001 |
| 9 | ಶ್ರೀ ವೆಂಕಟೇಶ, ಚೆನ್ನರಾಯಪಟ್ಟಣ. | 10,001 |
| 10 | ಶ್ರೀ ಬಿ. ಎಸ್. ವೆಂಕಟರಾಮು, ಮೈಸೂರು. | 10,001 |
| 11 | ಶ್ರೀ ಎಸ್. ಜೆ. ಮಧ್ವರಾಜ, ಮೈಸೂರು. | 10,001 |
| 12 | ಶ್ರೀ ಬಿ. ಆರ್. ಪ್ರಶಾಂತ, ಶಿವಮೊಗ್ಗ. | 10,001 |
| 13 | ಶ್ರೀ ವೆಂಕಟೇಶ ಎಚ್. ಆರ್. ಚೆನ್ನಪಟ್ಟಣ. | 10,001 |
| 14 | ಶ್ರೀ ಶ್ರೀನಿವಾಸ ಶೇಟ್, ಗೇರಸೊಪ್ಪ. | 10,000 |
| 15 | ಶ್ರೀ ಮಂಜುನಾಥ ಭಟ್ಟ, ಗೇರಸೊಪ್ಪ. | 5,001 |
| 16 | ಕು. ಸಂಜ್ಯೋತಿ ಪಿ. ಬೆಂಗಳೂರು. | 5,001 |
| 17 | ಡಾ॥ ಕುಬೇರ, ಭಲ್ಕಿ. | 5,001 |
| 18 | ಶ್ರೀ ನಾಗಪ್ರಸಾದ್, ಬೈಂದೂರು. | 5000 |
| 19 | ಶ್ರೀಮತಿ ಲಲೀತಾ ಜಿ. ನಾಯ್ಕ, ಕುಮಟಾ. | 5,000 |
| 20 | ಶ್ರೀ ತುಳಸಾ ಬಾಯಿ, ರಾಣಿಬೆನ್ನೂರು. | 5,000 |
| 21 | ಶ್ರೀ ಶ್ಯಾಮ್‌ಸುಂದರ್, ದಾವಣಗೆರೆ. | 5,000 |
| 22 | ಶ್ರೀ ಶ್ರೀನಿವಾಸ ರೆಡ್ಡಿ, ಯುನೈಟೆಡ್ ಕಿಂಗ್‌ಡಮ್. | 5,000 |
| 23 | ಶ್ರೀ ರಾಘವೇಂದ್ರ ಬಿ. ಎಸ್. ತೀರ್ಥಹಳ್ಳಿ. | 2,001 |
| 24 | ಶ್ರೀ ಸಂದೀಪ ಸುಮನ್ ನಾಯ್ಕ, ದಾಂಡೇಲಿ. | 1,101 |
| 25 | ಶ್ರೀ ವೆಂಕಟರಮಣ ಹೆಗಡೆ, ಸಿದ್ದಾಪುರ. | 1,005 |
| 26 | ಶ್ರೀ ವಿನಾಯಕ ಎಸ್. ಜೋಷಿ, ಸಿರ್ಸಿ. | 1,001 |
| 27 | ಶ್ರೀ ಬಿ. ಕೆ. ಬಾಣಪ್ಪನವರ, ಮಧುಗಿರಿ. | 1001 |
| 28 | ಶ್ರೀ ವಸಂತ ಶೇಟ್, ಶಿವಮೊಗ್ಗ. | 501 |

ಧನಸಹಾಯ ಮಾಡಿದ ಎಲ್ಲಾ ಭಕ್ತಾದಿಗಳಿಗೂ ಶ್ರೀ ವೀರಾಂಜನೇಯ ದೇವರು ಹಾಗೂ ಶ್ರೀ ಅನ್ನಪೂರ್ಣೇಶ್ವರಿ ದೇವಿ ಸನ್ಮಂಗಳವನ್ನುಂಟು ಮಾಡಲಿ ಎಂದು ಪ್ರಾರ್ಥಿಸುತ್ತೇವೆ.

ಮೇಲ್ವಿಚಾರಕರು
ಶ್ರೀಕ್ಷೇತ್ರ ಬಂಗಾರಮಕ್ಕಿ



ಕನ್ನಡ ಕುಲಪುರೋಹಿತರು – ಆಲೂರು ವೆಂಕಟರಾಯರು

# ಓ ಗುಲಾಬಿ



ಪ್ರಕೃತಿ ಸೋಜಿಗದ ಸೊಬಗೆ
ಪ್ರಕೃತಿ ಚೆಲುವಿನ ಒಲವೆ
ಪ್ರಕೃತಿ ಚೆಂದದ ಚೆಲುವೆ
ಮುಳ್ಳುಗಳ ಮಧ್ಯದಲಿ
ಬಣ್ಣ ಬಣ್ಣದಿ ಅರಳಿ
ನಯನಕೆ ತಂಪನೀಯುತ



ಸುಖ ದುಃಖಗಳ ಪರಿವೆ ಇಲ್ಲದೆ
ನಗು ನಗುತ ನಗಿಸುತಲಿ
ಬಣ್ಣ ಬಣ್ಣಗಳ ಚೆಲುವು
ಚಂದದಲಿ ಅರಳಿ
ಮುಕ್ತಿ ಪಡೆಯುವೆ
ದೇವ ಲೀಲೆಯಲಿ!

–ಶ್ರೀಮತಿ ಸಾವಿತ್ರಿ ಹೆಗಡೆ, ಬಸವನಬೆಟ್ಟ.

# ಪದಬಂಧ–39

–ಶ್ರೀ ಗುರು ದಾಸ.

**ಎಡದಿಂದ ಬಲಕ್ಕೆ :–**

1. ಅತ್ರಿಯ ಮಗನಾದ ದತ್ತಾತ್ರೇಯ –3
3. ವಿವಾಹ ಬಂಧನವನ್ನು ಕಾನೂನು ದೂರಮಾಡಿತು –4
5. ಉಪಕಾರ ಸ್ಮರಣೆ ಇಲ್ಲದವನು –3
6. ಕರಾರು ಮಾಡಿಕೊಂಡಾಗಿದೆ –3

| | | | | | | | |
|---|---|---|---|---|---|---|---|
| 1 | | 2 | ■ | 3 | | | 4 |
| | ■ | 5 | | | ■ | ■ | |
| 6 | 7 | | ■ | 8 | | 9 | |
| ■ | | ■ | 10 | | ■ | | ■ |
| 11 | | 12 | ■ | 13 | | | 14 |
| | ■ | 15 | 16 | | ■ | ■ | |
| | ■ | ■ | | ■ | 17 | | |
| 18 | | ■ | 19 | | | ■ | |

**(ಉತ್ತರ ಮುಂದಿನ ಸಂಚಿಕೆಯುಲ್ಲಿ)**

8. ಗುಣ, ರೂಪ, ನಡತೆಗಳಲ್ಲಿ ವೈವಿಧ್ಯವಾಗಿದೆ –4
10. ಪ್ರಾಚೀನ ಬಳಕೆಯಲ್ಲಿ ಪಿಂಗಾಣಿಯನ್ನು ಹೆಸರಿಸುತ್ತಿದ್ದ ಪದ ಈಗ ಒಂದು ದೇಶದ ಹೆಸರು –2
11. ನೆನಪಿಸಿಕೊಂಡಿದ್ದೋ?, ನೀರಿನಲ್ಲಿ ಒದ್ದೆಮಾಡಿದ್ದೋ? ತಿಳಿಯುತ್ತಿಲ್ಲ –3
13. ನೂರು ಕವನಗಳ ಒಡೆಯನಿರಬಹುದು ಈ ಕವಿ –4
15. ಜಾಂಬವಂತನ ವಂಶದವನಿರಬಹುದು ಆದರೂ ತಿರುಗಿದೆ –3
17. ಇದು ಮೆರವಣಿಗೆ –3
18. ಸಬೂಬು ಹೇಳಿ ನುಣುಚಿಕೊಳ್ಳುತ್ತಾರೆ –2
19. ಭಗವಾನ ಸೂರ್ಯದೇವನ ಮಗಳಿವಳು –3

**ಮೇಲಿಂದ ಕೆಳಕ್ಕೆ :–**

1. ಪ್ರಲೋಭನೆಗಳ ಮೋಹಜಾಲ –3
2. ಪ್ರಾಣಿಗಳಲ್ಲಿ ಕಂಡುಬರುವ ಒಂದು ಜೀವಧಾರಕ ಅಂಗ –3
3. ತೊಂದರೆಗಳನ್ನು ದೂರಮಾಡಬಲ್ಲನು ಗಣನಾಯಕ –6
4. ಪ್ರಮಾಣಬದ್ಧವಾಗಿರುವ ವರ್ತನೆ –3
7. ವೇಗದ ಉದ್ಗಾರ –3
9. ಶ್ರೀಮಂತ ಧಣಿ –3
11. ನೆರವಾಗಬಲ್ಲ ಅಕ್ಕ–ಪಕ್ಕದ ಮನೆ –4
12. ಸ್ಫೋಟಗೊಂಡು ಚೆಲ್ಲಾಪಿಲ್ಲಿಯಾಗಿದೆ –2
14. ವನದ ಸೌಂದರ್ಯ ತಿಳಿಯಲು ಸುತ್ತಾಡು –3
16. ಏನೂ ಇಲ್ಲ, ವಿಹೀನವದು –3
17. ಪುರುಷರಿಗೆ ಹೆಂಡತಿಯ ನೆನಪಾದರೆ ದಕ್ಷನಿಗೆ ಮಾತ್ರ ಮಗಳ ನೆನಪಾಗುತ್ತದೆ –2

**ಪದಬಂಧ–38ರ ಉತ್ತರ**

**ಎಡದಿಂದ ಬಲಕ್ಕೆ:–** 1.ರಾಜ್ಯೋತ್ಸವ, 3.ಬಾದಾಮಿ, 5.ಲಚಪ(ಚಪಲ), 6.ಕಾಣುವಾಸೆ, 8.ಬಕೆಟು, 10.ವಿಚಾರಕ, 12.ಪರಿಕರ, 14.ಬಜೆ, 16.ಅಕ್ಷಿ, 17.ಸಂಪರ್ಕ, 18.ಕಹಳೆ. ***** **ಮೇಲಿಂದ ಕೆಳಕ್ಕೆ:–** 1.ರಾಹುಕಾಲ, 2.ವಲಸೆ, 3.ಬಾಚಣಿಕೆ, 4.ಮಿನುಗು, 7.ವಾಮಾಚಾರ, 8.ಬಕಪಕ್ಷಿ, 9.ಟುಮಕ(ಕಮಟು), 11.ಜಂಬ, 13.ರಗಳೆ, 15.ಜೆಸಂ(ಸಂಜೆ), 16.ಅರ್ಕ.